# ಪ್ರಸಾದ

ಮಾಸಿಕ

ಸೆಪ್ಟೆಂಬರ್ 2025

ಸಂಪುಟ 40 ಸಂಚಿಕೆ 9



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಲೆಫ್ಟಿನೆಂಟ್ ಗವರ್ನರ್‌ರಾದ ಶ್ರೀಮತಿ ಅರುಣಾ ಮಿಲ್ಲರ್ ಹಾಗೂ ಅವರ ಪತಿ ಶ್ರೀ ಡೇವಿಡ್ ಮಿಲ್ಲರ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಅಭಿನಂದಿಸಿದರು. ಶ್ರೀ ಸೆಲ್ವ ಜಯರಾಮನ್, ಶ್ರೀ ಆರ್. ಮಹೇಶ್ ಮೊದಲಾದವರಿದ್ದಾರೆ (21 ಸೆಪ್ಟೆಂಬರ್ 2025)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಸುತ್ತೂರು ಮತ್ತು ಸಿದ್ಧಗಂಗಾ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ಸಚಿವರಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಜಿ.ಟಿ. ದೇವೇಗೌಡ ಹಾಗೂ ಶ್ರೀ ಟಿ.ಎಸ್. ಶ್ರೀವತ್ಸ ಮೊದಲಾದವರಿದ್ದಾರೆ (29 ಆಗಸ್ಟ್ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 9** **ಸೆಪ್ಟೆಂಬರ್ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223




**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

**ಮುಖಪುಟ ಚಿತ್ರ**

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮುರವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಗೌರವಿಸಿ ಅಭಿನಂದಿಸಿದರು. ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರಿದ್ದಾರೆ (11 ಸೆಪ್ಟೆಂಬರ್ 2025)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ

ಗುರುವಾಣಿ 5

ಸಂಪಾದಕೀಯ 7

ಆವರ್ತನಶೀಲ ಜಗತ್ತು 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಮಾರ್ಗದರ್ಶಕರು 17
ಡಾ. ಶ್ರೀ ರವಿಶಂಕರ ಗುರೂಜೀ

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 19
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಶೂನ್ಯಸಂಪಾದನೆಗಳು : ಮರುಚಿಂತನೆ ಮತ್ತು 23
ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು
ಡಾ. ಬಿ. ನಂಜುಂಡಸ್ವಾಮಿ

ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಗಣಾಚಾರ 32
ಡಾ. ಶಶಿಕಾಂತ ಪಟ್ಟಣ

ತಲಕಾಡು ಧಾರ್ಮಿಕ ಕ್ಷೇತ್ರ ದರ್ಶನ 36
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ವಾರ್ತಾವಿಹಾರ 49
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ನಿನ್ನತ್ತಲೆನ್ನ ಮುಖವ ಮಾಡು

ಕಪಿ ಕಳ್ಳ ಕುಡಿದು
ಕಡಲ ದಾಂಟುವೆನೆಂದು ಲಂಘಿಸಿ
ನಡುನೀರಲ್ಲಿ ಬಿದ್ದು
ಮೀನು-ಮೊಸಳೆಗೆ ಆಹಾರವಾದಂತಾಯಿತಯ್ಯ ಎನ್ನ ಬಾಳು!

ಆದಿಯಲ್ಲಿ ನಿನ್ನ ಗರ್ಭಾಂಬುಧಿಯಲ್ಲಿ ಜನಿಸಿ
ನಿನ್ನ ನೆನಹಿಲ್ಲದೆ,
ಇಷ್ಟಲಿಂಗವನರಿಯದ ಕಷ್ಟಜೀವಿಗಳ
ಪ್ರಾಣಲಿಂಗವನರಿಯದ ಪರಮ ಪಾತಕರ
ಭಾವಲಿಂಗವನರಿಯದೆ ಭವಕ್ಕೊಳಗಾದ ಹುಲುಮಾನವರ
ತಂದೆ-ತಾಯಿ, ಬಂಧು-ಬಳಗವೆಂದು ಭಾವಿಸಿದ
ಬಲುಪಾತಕವೆನ್ನನಂಡಲೆದು
ಅಮರ್ದಪ್ಪಿ ಅಗಲದ ಕಾರಣ–

ನಿಂದ ಠಾವಿಂಗೆ ನೀರ್ದಳಿವರಯ್ಯ
ಕುಳಿತ ಠಾವಿಂಗೆ ಗೋಮುವನಿಕ್ಕಿಸುವರಯ್ಯ
ನಾನು ಬಂದ ಬಟ್ಟೆಯೊಳೊರ್ವರೂ ಬಾರರಯ್ಯ
ಕಾಲನಾಳಿಂಗೆ ಕಾಲ್ದುಳಿಯಾದೆನಯ್ಯ
ಶುನಕ-ಸೂಕರಾದಿಗಳ ಬಸಿರಲ್ಲಿ ಬರುವಂತೆ
ಮಾಡಿತಯ್ಯ ಎನ್ನ ಮಾಯೆ!

ಒರ್ವರಿಗೆ ಹುಟ್ಟಿ–
ಮತ್ತೊರ್ವರಿಗೆ ಅಪ್ಪಾ ಎಂಬ
ನಾಣ್ನುಡಿಯ ದೃಷ್ಟವೆನಗಾಯಿತಯ್ಯ!
ಗುರುವೇ, ಈ ದೋಷಮಂ ಕರುಣದಿಂ ಕಳೆದು
ಶುದ್ಧನಂ ಮಾಡಿ –
ನಿನ್ನಂ ಜನನೀ-ಜನಕರೆಂಬ
ನಿನ್ನ ಭಕ್ತರಂ ಬಂಧು-ಬಳಗವೆಂಬ ಸುಜ್ಞಾನವಂ ಕೊಟ್ಟು,
ಜಾಗ್ರತ್-ಸ್ವಪ್ನ-ಸುಷುಪ್ತಿಯಲ್ಲಿ ನಿನ್ನತ್ತಲೆನ್ನ ಮುಖವ ಮಾಡಿ
ಅಕ್ಕರಿಂದ ರಕ್ಷಿಪುದಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

**–** ಘನಲಿಂಗಿದೇವರು

# ಗುರುವಾಣಿ

ಶಬ್ದಸುಖಕ್ಕೆ ಮಚ್ಚಿ ಮಾತಿಂಗೆ ಮಾತನೆ ಕೊಟ್ಟು ಕೆಟ್ಟೆನಯ್ಯಾ!
ಅನುಭಾವ ಅಕ್ಕವೆಯಾಗದೆ, ಬೆಬ್ಬನೆ ಬೆರೆತೆನಯ್ಯಾ!
ಅಮೃತವ ಕೊಡನ ತುಂಬಿ, ಒಡೆಯಹೊಯ್ದು, ಅರಸಲುಂಟೇ?
ಸ್ವಾಮಿಭೃತ್ಯಸಂಬಂಧವೇ ಎನ್ನ ಭಕ್ತಿ?
ಪ್ರತ್ಯುತ್ತರ ನಾಯಕನರಕ ಕೂಡಲಸಂಗಮದೇವಾ!

ಭಕ್ತಿ ಎಂದರೆ ಪ್ರತಿಫಲಾಪೇಕ್ಷೆಯಿಲ್ಲದೆ ಪರಮಚೈತನ್ಯದ ಸಮಕ್ಷಮ, ಸಮಾಗಮ ಹೊಂದುವುದು. ಮೊದಲಿಗೆ ಆ ಪರಮಚೈತನ್ಯದ ಎದುರುಬದುರು ನಿಂತು ಪರಸ್ಪರ ಅವಲೋಕಿಸುತ್ತ, ತದನಂತರ ಆ ಚೈತನ್ಯದಲ್ಲಿ ಬೆರೆಯುವುದು. ಹೀಗೆ ಎದುರುಬದುರು ನಿಲ್ಲುವಾಗ ಪರಸ್ಪರರ ಸಂವಹನಕ್ಕೆ ಒದಗಿಬರುವ ಸಾಧನ ಮಾತಾಗಿರುತ್ತದೆ. ಪ್ರತಿಯೊಬ್ಬ ಭಕ್ತನೂ ದೇವರೆದುರು ನಿಂತು ಭಗವಂತನ ಅನಂತಶಕ್ತಿಯನ್ನು ಸ್ತುತಿಸುತ್ತಾ ಸಂತೃಪ್ತಭಾವ ಹೊಂದುವುದು ಭಕ್ತಿಮಾರ್ಗದ ಪ್ರಥಮಾಧಿಕರಣ. ಆದರೆ ಈ ಪ್ರಥಮ ಸೋಪಾನವನ್ನು ದಾಟಿ ಮುಂದೆ ನಡೆಯಬೇಕಾಗಿರುವುದೇ ಕ್ರಮ. ಬಹಳಷ್ಟು ಮಂದಿ ಈ ಪ್ರಥಮ ಅಧಿಕರಣದಲ್ಲೇ ನೆಲೆ ನಿಂತುಬಿಡುತ್ತಾರೆ. ಈ ಅಧಿಕರಣದ ಸಾಧನವಾದ ಶಬ್ದ-ಮಾತು ಸೃಷ್ಟಿಸುವ ರೋಚಕತೆ ಎಂಥವರನ್ನೂ ಮರುಳುಗೊಳಿಸುತ್ತದೆ. ಶಬ್ದಕ್ಕೆ ಒಂದು ಅರ್ಥವಿದ್ದರೆ, ಮೌನಕ್ಕೆ ಅನಂತ ಅರ್ಥಗಳಿರುತ್ತವೆ. ಮೌನವೇ ಪರಮಭಕ್ತಿಯ ಅಂತಿಮ ಸೋಪಾನ. ಈ ಕಾರಣದಿಂದಲೇ ಶರಣರ ಮಹಾಮನೆಯಲ್ಲಿ ಗುಪ್ತಭಕ್ತನಾಗಿದ್ದ ಮರುಳಶಂಕರದೇವ ಸದಾ ಮೌನವನ್ನೇ ಆಶ್ರಯಿಸಿದ್ದದ್ದು.

ಒಂದು ಕಾಲದಲ್ಲಿ ಭಾರತೀಯ ಪರಂಪರೆಯ ಭಕ್ತಿಪಂಥಗಳು ವಾಗಾಡಂಬರಕ್ಕೆ ಮಾತ್ರ ಸೀಮಿತವಾಗಿದ್ದವು. ಪ್ರತಿಯೊಬ್ಬ ವಿದ್ವಾಂಸರೂ ತಾನು ನಂಬಿದ್ದ ಪಂಥವೇ, ಮತತತ್ತ್ವವೇ ಶ್ರೇಷ್ಠವೆಂದು ಅನೇಕಾನೇಕ ವಾದಗಳ ಮೂಲಕ ಗೆಲ್ಲಲು ಪ್ರಯತ್ನಿಸುತ್ತಿದ್ದರು. ಸೋತವರು ಗೆದ್ದವರ ಪಕ್ಷಕ್ಕೆ ಸೇರಬೇಕಾಗುತ್ತಿತ್ತು. ಇದಕ್ಕೆ ಒಂದು ಸಣ್ಣ ಉದಾಹರಣೆ ಎಂದರೆ ಶಂಕರಾಚಾರ್ಯರು ಮತ್ತು ಮಂಡನಮಿಶ್ರರ ನಡುವೆ ನಡೆದ ಸಂವಾದ. ಲೌಕಿಕ, ಅಲೌಕಿಕದ ಚೌಕಟ್ಟಿಗೆ ಸಂಬಂಧಿಸಿದಂತೆ ಈ ಜ್ಞಾನಸತ್ರ ಸಾಕಷ್ಟು ದೀರ್ಘವಾಗಿಯೇ ನಡೆದದ್ದು ಇತಿಹಾಸ. ಹೀಗೆ ಒಂದು ಕಾಲದಲ್ಲಿ ಎಲ್ಲ ಮತಪಂಥಗಳೂ ಇದೇ ಮಾರ್ಗವನ್ನು ಅನುಸರಿಸಿದುದು ಕಂಡುಬರುತ್ತದೆ. ಇಂಥ

ಅನೇಕ ಚರ್ಚೆ, ವಾಗ್ವಾದ, ಜಿಜ್ಞಾಸೆಗಳು ಕೇವಲ ವಾಗಾಡಂಬರಗಳಾಗಿದ್ದುವೇ ಹೊರತು ಸತ್ಯಾನ್ವೇಷಣೆಯ ಮಾರ್ಗಗಳಾಗಿರಲಿಲ್ಲ. ಅಲ್ಲೆಲ್ಲ ನಡೆದದ್ದು ಕೇವಲ ರೋಚಕವಾದ ಶಬ್ದಗಳ ಇಂದ್ರಜಾಲವಷ್ಟೆ. ಇಂದ್ರಜಾಲ ಕಣ್ಣಿಗೆ ಗೋಚರಿಸುತ್ತದೆ, ಅನುಭವಕ್ಕೂ ಬರುತ್ತದೆ. ಆದರೆ ಅದು ತಾತ್ಕಾಲಿಕವಾದುದು, ನಿಜವಾಗಿರುವುದಿಲ್ಲ. ಈ ತಾತ್ಕಾಲಿಕ ಕಣ್ಕಟ್ಟಿನ ಸುಖವೇ ಒಂದು ವ್ಯಸನವಾಗಿ ಪರಿಣಮಿಸಿ ಇಂಥ ವಿದ್ವಾಂಸರು ಅವನತಿಯ ಹಾದಿ ಹಿಡಿಯುತ್ತಾರೆ.

ಪ್ರಾರಂಭದಲ್ಲಿ ಉಲ್ಲೇಖವಾಗಿರುವ ಬಸವಣ್ಣನವರ ವಚನವು 12ನೇ ಶತಮಾನದಲ್ಲಿ ಭಾರತದ ಬೇರೆ ಬೇರೆ ಭಾಗಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಎಲ್ಲ ಭಕ್ತಿಚಳುವಳಿಗಳ ಪ್ರಧಾನ ಆಶಯವನ್ನು ಬಿಂಬಿಸುತ್ತದೆ. ಭಕ್ತಿಗೆ ಅನುಭವಗಳು ಪ್ರಮಾಣವೇ ಹೊರತು ಹೊರಗಣ ಆಡಂಬರಗಳಲ್ಲ. ಅನುಭವ ಎನ್ನುವುದು ಶಬ್ದಕ್ಕೆ ನಿಲುಕದ್ದು, ಮಾತಿಗೆ ಅತೀತವಾದದ್ದು. ಶಬ್ದಾಡಂಬರಕ್ಕೆ ಸಿಲುಕಿದವರಿಗೆ, ಮಾತಿನ ಚಟಕ್ಕೆ ಬಿದ್ದವರಿಗೆ, ಅನುಭಾವ ಎಂದಿಗೂ ದಕ್ಕುವುದಿಲ್ಲ. ಅನುಭಾವ ಎನ್ನುವುದು ಒಂದು ತುಂಬಿದ ಕೊಡ, ಅದೊಂದು ಪೂರ್ಣಪ್ರಜ್ಞೆ, ಪೂರ್ಣದೃಷ್ಟಿಯ ಪ್ರತೀಕ. ಅದನ್ನು ಮಾತಿನ, ಶಬ್ದದ ಆಡಂಬರದಿಂದ ಒಡೆದುಹಾಕಿ, ಅನಂತರ ಅಲ್ಲಿ ಸತ್ಯವನ್ನು ಹುಡುಕುವುದು ವ್ಯರ್ಥಪ್ರಯತ್ನ. ಅಲ್ಲಿ ಇರುವುದು ಸ್ವಾಮಿಭೃತ್ಯನ ಸಂಬಂಧ, ವಿನಯ, ವಿಧೇಯತೆ ಇವು ಮಾತ್ರ. ಅದಲ್ಲದೆ, ಮಾತಿಗೆ ಮಾತು ನೀಡುವುದು ನಾಯಕನರಕಕ್ಕೆ ದಾರಿ ಎನ್ನುತ್ತಾರೆ ಬಸವಣ್ಣನವರು.

ಈಗೀಗ ಇಂತಹ ವಾತಾವರಣವೇ ವಿಜೃಂಭಿಸುತ್ತಿದೆ. ಯಾರು ಏನೇ ಮಾತನಾಡಿದರೂ ಅದನ್ನು ಅರ್ಥೈಸಿಕೊಳ್ಳುವುದಕ್ಕೆ ಬದಲಾಗಿ ತಕ್ಷಣವೇ ಪ್ರತಿಕ್ರಿಯಿಸುವುದು ರೂಢಿಯಾಗಿದೆ. ಮೌನವೆನ್ನುವುದು ಇಂದು ಯಾರಿಗೂ ಬೇಡವಾಗಿದೆ. ಈ ವಾತಾವರಣವು ರಾಜಕೀಯದಲ್ಲಷ್ಟೇ ಅಲ್ಲದೆ, ಮತ ಪಂಥ ತತ್ವಗಳ ವಿಚಾರಕ್ಕೂ ವ್ಯಾಪಿಸಿರುವುದು ದುರದೃಷ್ಟಕರ. ಇಂದು ಮಾತೆಂಬುದು ವಾಗಾಡಂಬರದ ಹಂತವನ್ನು ಮೀರಿ ವ್ಯಕ್ತಿನಿಂದನೆ, ಚಾರಿತ್ರ್ಯಹನನದ ಮಟ್ಟವನ್ನು ತಲುಪಿರುವುದು ಅಪಾಯಕಾರಿ. ಮಾತು ಕೆಟ್ಟರೆ ಮನಸ್ಸು ಕೆಡುತ್ತದೆ, ಕೆಡುಕೇ ಬದುಕಿನ ದಾರಿಯಾಗಿಬಿಡುತ್ತದೆ. ಇಂಥದನ್ನು ಕೈಬಿಟ್ಟು ವಿನಯದ ಹಾದಿಯನ್ನು ಹಿಡಿಯುವುದು ಎಲ್ಲರಿಗೂ ಶ್ರೇಯಸ್ಕರ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಅಜ್ಞಃ ಸುಖಮಾರಾಧ್ಯಃ ಸುಖತರಮಾರಾಧ್ಯತೇ ವಿಶೇಷಜ್ಞಃ ।
ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ ॥

ಮೂಢನನ್ನು ಸುಲಭವಾಗಿ ಮೆಚ್ಚಿಸಬಹುದು. ಪ್ರಾಜ್ಞರನ್ನು ಮೆಚ್ಚಿಸುವುದು ಇನ್ನೂ ಸುಲಭ. ಅಲ್ಪಜ್ಞಾನದಿಂದ, ಅಹಂಕಾರದಿಂದ ಕೂಡಿದವರನ್ನು ಸಂತೋಷಪಡಿಸುವುದು ಬ್ರಹ್ಮನಿಗೆ ಕೂಡ ಸಾಧ್ಯವಿಲ್ಲ.

ಭರ್ತೃಹರಿಯ ನೀತಿಶತಕದ ಈ ಶ್ಲೋಕವು ವ್ಯಕ್ತಿಗಳ ಬುದ್ಧಿಮಟ್ಟವನ್ನು ವಿಶ್ಲೇಷಿಸುತ್ತದೆ. ಬುದ್ಧಿಯನ್ನೇ ಆಧಾರವಾಗಿಟ್ಟುಕೊಂಡು ಜನರನ್ನು ಮೂರು ರೀತಿಯಲ್ಲಿ ವಿಂಗಡಿಸಬಹುದು. ಪ್ರಾಜ್ಞರು, ಅಜ್ಞರು ಮತ್ತು ಅರ್ಧ ತಿಳಿದವರು. ಪ್ರಾಜ್ಞರಿಗೆ ಏನನ್ನೂ ತಿಳಿಸಬೇಕಾದ ಅಗತ್ಯವಿಲ್ಲ. ಅವರೇ ಸ್ವಯಂ ಎಲ್ಲವನ್ನೂ ತಿಳಿಯಬಲ್ಲರು. ಅಜ್ಞರಿಗೆ ಏನೂ ತಿಳಿದಿರುವುದಿಲ್ಲ; ಅವರಿಗೆ ತಿಳಿಸಿ ಹೇಳಬಹುದು. ಆದರೆ ಅರ್ಧಂಬರ್ಧ ತಿಳಿದವರಿಗೆ ಏನನ್ನೂ ಹೇಳಲಾಗುವುದಿಲ್ಲ; ಹೇಳಿದರೂ ಅವರಿಗೆ ಅರ್ಥವಾಗುವುದಿಲ್ಲ. ಅವರು ಅರ್ಥಕ್ಕಿಂತಲೂ ಅಪಾರ್ಥ ಮಾಡಿಕೊಳ್ಳುವುದೇ ಹೆಚ್ಚು. ತಮಗೇನೂ ತಿಳಿದಿಲ್ಲ ಎಂಬುದೂ ಅವರಿಗೆ ತಿಳಿದಿರುವುದಿಲ್ಲ. ತಿಳಿದವರ ತಿಳಿವನ್ನೂ ಸಹ ಅಂಥವರು ಸಂಶಯದಿಂದ ನೋಡುತ್ತಾರೆ. ಪದಕ್ಕೆ ಇರುವ ಅರ್ಥಕ್ಕೆ ಬದಲು ಸಲ್ಲದ ಅನೇಕಾರ್ಥಗಳನ್ನು ಕಲ್ಪಿಸುವುದೇ ಇವರ ಉದ್ಯೋಗ. ಜಗತ್ತು ಎಲ್ಲ ಕಾಲದಲ್ಲೂ ತೊಂದರೆಗೊಳಗಾಗಿರುವುದು ಇಂಥ ಜನರಿಂದಲೇ. ಇವರು ವ್ಯಕ್ತಿಗತವಾಗಿ ತಾವೂ ಹಾಳಾಗುವುದಲ್ಲದೆ ಸುತ್ತಲಿರುವ ಜನರನ್ನೂ ಹಾಳುಮಾಡುತ್ತಾರೆ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ 'ಅಜ್ಞಾನಂ ತಮಸಾವೃತಂ', ಎಂದರೆ ಅಜ್ಞಾನವು ಕತ್ತಲೆಯಿಂದ ಆವರಿಸುತ್ತದೆ ಎಂದು ಹೇಳುತ್ತಾನೆ. ಕನಕದಾಸರು ಮೂಢರಿಗೆ ಬುದ್ಧಿ ಹೇಳುವುದು, ಮೂಕರು ಮಾತನಾಡುವುದು ಲೋಕವಿನಾಶದ ಲಕ್ಷಣ ಎನ್ನುತ್ತಾರೆ. ಅಜ್ಞಾನಿಯು ಸತ್ಯವನ್ನು ಎಂದೂ ಸಂಪೂರ್ಣವಾಗಿ ಅರಿಯಲಾರ. ತನ್ನ ಅರ್ಧಸತ್ಯವನ್ನೇ ಪರಿಪೂರ್ಣವೆಂದು ಭಾವಿಸುತ್ತಾನೆ. ಅಷ್ಟೇ ಅಲ್ಲ, ತಾನು ನಂಬಿದ ತಪ್ಪು ದಾರಿಯಲ್ಲಿಯೇ ಇತರರನ್ನೂ ಮುನ್ನಡೆಯುವಂತೆ ಪ್ರಚೋದಿಸುತ್ತಾನೆ.

ಈಗ ನಮ್ಮ ಸುತ್ತಲಿನ ಜಗತ್ತಿನಲ್ಲಿ ಕಾಣುತ್ತಿರುವುದು ಇಂಥ ಅಲ್ಪಬುದ್ಧಿಯವರೇ. ಯಾವ ವಿಷಯದ ಬಗೆಗೂ ಸಂಪೂರ್ಣವಾಗಿ ತಿಳಿದುಕೊಳ್ಳುವ ವ್ಯವಧಾನವಿಲ್ಲದೆ

ತಮಗೆ ತೋಚಿದ ಅಥವಾ ತಮಗೆ ಕಂಡದ್ದನ್ನು ಮಾತ್ರ ಸತ್ಯವೆಂದು ವಾದಿಸುವುದು ಇವರ ಸ್ವಭಾವ. ಈಗಂತೂ ಪ್ರಚಾರದ್ದೇ ಕಾಲ. ಏನಕೇನಪ್ರಕಾರೇಣ ಪ್ರಚಾರವಂತೂ ಬೇಕು. ಪ್ರಚಾರದ ಗೀಳು ಯಾವ ಪರಿಯಲ್ಲಿದೆ ಎಂದರೆ, ಸತ್ಯ ಗೊತ್ತಿದ್ದವರೂ ಮಾತನಾಡಲು ಹಿಂಜರಿಯುವಂತೆ, ಧರ್ಮದ ಬಗ್ಗೆ ತಿಳಿದವರೂ ಮೌನವಾಗಿರುವಂಥ ಪರಿಸ್ಥಿತಿ ಉಂಟಾಗಿದೆ. ಜ್ಞಾನಿಗಳಾದವರು ಬಾಯಿ ಮುಚ್ಚಿಕೊಂಡಿರಬೇಕಾದ ಕಾಲವಿದು. ಏಕೆಂದರೆ, ಅಜ್ಞಾನದ ವಿಜೃಂಭಣೆಯ ಮುಂದೆ ಜ್ಞಾನ ಮಂಕಾಗಿ ಕಾಣುತ್ತದೆ, ಅನಾಥವಾಗುತ್ತದೆ. "ಸತ್ಯಕ್ಕೆ ಒಂದು ಕಾಲವಿದೆ" ಎನ್ನುವುದು ಗಾದೆಯ ಮಾತು; ಅದು ಈಗ ಬರಿಯ ಭರವಸೆಯಾಗಿ ಉಳಿದಿದೆ; ಅಲ್ಪತೆಗೆ ಸತ್ಯದ ವೇಷ ಧರಿಸಿದೆ. ನೂರು ಬಾರಿ ಒಂದು ಸುಳ್ಳನ್ನು ಹೇಳುತ್ತಿದ್ದರೆ ಅದೇ ಸತ್ಯವಾಗುತ್ತದೆ. ದುಂಬಿ ಎಂಬ ಕೀಟವನ್ನು ನಾವೆಲ್ಲರೂ ಬಲ್ಲೆವಷ್ಟೆ. ವಾಸ್ತವದಲ್ಲಿ ಆ ಬಗೆಯ ಪ್ರತ್ಯೇಕ ಕೀಟವಿಲ್ಲ. ನೊಣವೊಂದು ಭ್ರಮಿಸಿ ಭ್ರಮಿಸಿ ಭ್ರಮರವಾಗಿಬಿಡುತ್ತದೆ. ಇದು ಈ ಲೋಕದ ನೀತಿಗೂ ಸಂಬಂಧಿಸಿದ್ದು. ಸಾವಿರ ಬಾರಿ ಹೇಳಿದ ಸುಳ್ಳು ಸತ್ಯವೇ ಎಂದು ಅನುಮಾನ ಹುಟ್ಟಿಸುವಷ್ಟು ನಿಜವಾಗುತ್ತದೆ. ಹಾಗೆ ನೋಡಿದರೆ ಸತ್ಯ ಎನ್ನುವುದು ಕೂಡ ಸಾಪೇಕ್ಷವೆ! 'ಪರಮ ಸತ್ಯ' ಎನ್ನುವುದು ಎಂದೂ ಬದಲಾಗದೆ ಇರುವ ವಸ್ತುಸ್ಥಿತಿ. ಆದರೆ ಆಯಾ ಸಂದರ್ಭ, ಕಾಲ ಮತ್ತು ಘಟನೆಗಳಿಗನುಸಾರವಾಗಿ ಸಂಗತಿಗಳು ರೂಪಾಂತರವಾಗುತ್ತಿದ್ದಂತೆ ಪ್ರತ್ಯೇಕ ಅರ್ಥವ್ಯತ್ಯಾಸವನ್ನು ಪಡೆದುಕೊಂಡು ಬಿಡುತ್ತವೆ. ಹೀಗೆ ರೂಪಾಂತರಗೊಂಡ ಸತ್ಯವೇ ಇತಿಹಾಸದಲ್ಲಿ ಸ್ಥಾಪಿತವಾಗುತ್ತದೆ. ಅದಕ್ಕೊಂದು ಸಣ್ಣ ಉದಾಹರಣೆ ಎಂದರೆ, ಕನ್ನಡದ ಪ್ರಸಿದ್ಧ ನಾಟಕ "ಸಂಗ್ಯಾ ಬಾಳ್ಯಾ". ಇದು ಉತ್ತರ ಕರ್ನಾಟಕದ ನಿಜ ಘಟನೆಯೊಂದನ್ನು ಆಧರಿಸಿದ್ದು. ಕಾಲಾಂತರದಲ್ಲಿ ಇದು ಕಲೆಯ ಸ್ವರೂಪ ಪಡೆಯಿತು. ಇದರ ಕುರಿತು ಡಾ. ಚಂದ್ರಶೇಖರ ಕಂಬಾರರು ನಾಟಕವನ್ನು ರಚಿಸಿದರು. ಮುಂದೆ ಇದೇ ವಸ್ತುವನ್ನು ಮತ್ತಷ್ಟು ಸಂಶೋಧಿಸಿ ಡಾ. ಎಂ.ಎಂ. ಕಲಬುರಗಿಯವರು "ಖರೇ ಖರೇ ಸಂಗ್ಯಾ ಬಾಳ್ಯಾ" ಎಂಬ ನಾಟಕವನ್ನು ಬರೆದರು. ನಿಜ ಹೇಳಬೇಕೆಂದರೆ, ಕಲಬುರಗಿಯವರ ಈ ನಾಟಕ ಯಶಸ್ವಿಯಾಗಲಿಲ್ಲ. ಎಷ್ಟೋ ಜನರಿಗೆ ಇಂಥದೊಂದು ನಾಟಕವನ್ನು ಕಲಬುರಗಿಯವರು ಬರೆದಿದ್ದಾರೆ ಎಂಬುದೂ ತಿಳಿದಿಲ್ಲ. ಅಂದರೆ, ಈ ನಾಟಕದ ವಸ್ತುವನ್ನು ಕಲೆಯಾಗಿಸುವಲ್ಲಿ ಕಲಬುರಗಿಯವರು ಸೋತಿದ್ದಾರೆ ಎಂದರ್ಥವಲ್ಲ; ಕಲೆಗೆ ವಾಸ್ತವತೆಗೆ ಎಂದೂ ನೈಜತೆಯ ಸ್ಪರ್ಶ ಬೇಕಾಗಿಲ್ಲ ಎನ್ನುವುದು; ಕಲೆ ಎನ್ನುವುದು ಕಲ್ಪಿತ ಜಗತ್ತಿನ ಸುಳ್ಳಿನಲ್ಲಿಯೇ ತನ್ನ ನೆಲೆಯನ್ನು ಕಂಡುಕೊಳ್ಳುತ್ತದೆ ಎನ್ನುವುದನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕು. ಮೂಲತಃ ಅಕ್ಕಸಾಲಿಗನೊಬ್ಬನ ಕುತಂತ್ರದಿಂದ ಪ್ರೇರಿತನಾಗಿ ಮಾಸ್ತರನೊಬ್ಬನು ಬರೆದ ನಾಟಕದಿಂದ ಬದುಕು ಕಳೆದುಕೊಂಡ ಗೌಡತಿಯ ಕಥೆ ಅದು. ಆದರೆ ನಾಟಕದಲ್ಲಿ ಗೌಡತಿ ತನ್ನ ಸುಖದ ಬದುಕಿಗಾಗಿ ದಾರಿ ತಪ್ಪಿದ ಕಥೆಯಾಗಿ ಮಾರ್ಪಟ್ಟಿದೆ!

ಎಲ್ಲ ಬಗೆಯ ಜ್ಞಾನಶಾಖೆಗಳು ಇಂತಹ ಅಲ್ಪಜ್ಞಾನದ ಆವರಣದಲ್ಲಿ ನರಳುತ್ತಿರುತ್ತವೆ. ಅದನ್ನು ಕೊಡವಿ ಮತ್ತೆ ಬೆಳಕು ಮೂಡಿಸಬೇಕಾದದ್ದು ಎಲ್ಲ ಪ್ರಾಜ್ಞರ ಕರ್ತವ್ಯ. ಅಲ್ಲದೆ, ಹಾದಿ ತಪ್ಪಿದರೆ ಅಥವಾ ತಪ್ಪು ಹಾದಿಯನ್ನು ತಿದ್ದಲು ಪ್ರಯತ್ನಿಸದಿದ್ದರೆ ಅದೂ ಸಹ ಸಮಾಜಕ್ಕೆ ಅಪಾಯಕಾರಿ. ಭಾರತೀಯ ಪರಂಪರೆಯಲ್ಲಿ ಬುದ್ಧ, ಮಹಾವೀರ, ಶಂಕರ, ರಾಮಾನುಜ, ಬಸವಣ್ಣ, ಅಂಬೇಡ್ಕರ್ ಮುಂತಾದವರು ಇಂಥ ತಥಾಕಥಿತ ಆವರಣಗಳನ್ನು ಒಡೆಯಲು ಪ್ರಾಂಜಲವಾಗಿ  ಯತ್ನಿಸಿದರು. ಅದರಲ್ಲಿ ತಕ್ಕಮಟ್ಟಿನ ಯಶಸ್ಸನ್ನೂ ಕಂಡರು. ಈ 'ತಕ್ಕಮಟ್ಟಿನ' ಎಂದು ಹೇಳುವುದಕ್ಕೆ ಕಾರಣ ಎಂದರೆ ಅಜ್ಞಾನಕ್ಕೆ, ಅಲ್ಪತೆಗೆ ಅಗಾಧವಾದ ಶಕ್ತಿ ಇರುತ್ತದೆ. ಈಗಲೂ ಬಹಳಷ್ಟು ಜನ ಇಂಥ ಅಲ್ಪತೆಯಿಂದ ಹೊರಬಂದಿಲ್ಲ. ಆದಷ್ಟು ಜಾಗ್ರತೆ ಹೊರಬೇಕಾಗಿರುವುದು ಅನಿವಾರ್ಯ.

**ಡಾ. ಎಂ.ಎನ್. ನಂದೀಶ್ ಹಂಚೆ**

ಸ್ಥೂಲತನು ಸೂಕ್ಷ್ಮತನು ಕಾರಣತನು:
ಸ್ಥೂಲತನುವಿನಲ್ಲಿ ಇಷ್ಟಲಿಂಗಪ್ರತಿಷ್ಠೆ
ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗಪ್ರತಿಷ್ಠೆ
ಕಾರಣತನುವಿನಲ್ಲಿ ತೃಪ್ತಿಲಿಂಗಪ್ರತಿಷ್ಠೆ
ಇಂತೀ ಸ್ಥೂಲ ಸೂಕ್ಷ್ಮ ಕಾರಣವು ಮಹವು !
ಮಹದುದಯ ಹೃದಯದಲ್ಲಿ ಕೊನೆದೋರುತ್ತಿಪ್ಪ ಪರಂಜ್ಯೋತಿ
ನಿಮ್ಮ ಶರಣನ ಸರ್ವಾಂಗದಲುಂಟು
ಕೂಡಲಚೆನ್ನಸಂಗಮದೇವಾ

**ಚನ್ನಬಸವಣ್ಣ**

ಪ್ರವಚನಸಾರ

# ಆವರ್ತನಶೀಲ ಜಗತ್ತು

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಜಗತ್ತಿನ ಎಲ್ಲೆಡೆ ಎದ್ದು ಕಾಣುವ ಒಂದು ಮಹತ್ವದ ಸಂಗತಿ ಎಂದರೆ 'ಆವರ್ತನಶೀಲತೆ'. ಪ್ರತಿ ವಸ್ತು ಆವರ್ತನೆಗೊಳ್ಳುತ್ತಿದೆ. ಜಗತ್ತಿಗೆ ಜಗತ್ತೇ ಆವರ್ತನಗೊಳ್ಳುತ್ತಿದೆ. ಸಾಗರದಿಂದ ಆಗಸಕ್ಕೇರಿದ ಹನಿ ಮತ್ತೆ ಸಾಗರ ಕೂಡಿಕೊಳ್ಳುತ್ತದೆ. ಅತ್ಯಂತ ಸೂಕ್ಷ್ಮ ಅಣುವಿನಿಂದ ಪ್ರಾರಂಭವಾದ ದೇಹ ಬೆಳೆದು ಕೊನೆಗೊಮ್ಮೆ ಮತ್ತೆ ಅಣುರೂಪ ತಾಳುತ್ತದೆ. ಮಧ್ಯದಲ್ಲಿ ಬಹಳಷ್ಟು ದೂರ ಸಾಗಿದಂತೆ ನಮಗೆ ಭಾಸವಾಗುತ್ತದೆ. ಆದರೆ ಕೊನೆಗೆ ಪ್ರಾರಂಭ ವಾದಲ್ಲಿಗೇ ಹೋಗುತ್ತದೆ. ಮಣ್ಣಿನಿಂದ ಮಣ್ಣಿಗೆ! ಇದು ಒಂದು ಆವರ್ತನ!

ಒಂದು ಬೀಜ. ಇಲ್ಲಿಂದ ವೃಕ್ಷದ ಆವರ್ತನ ಆರಂಭವಾಗುತ್ತದೆ. ದೊಡ್ಡ ವೃಕ್ಷವಾಗಿ ಬೆಳೆಯುತ್ತದೆ. ವೃಕ್ಷ ಮತ್ತೆ ಒಂದು ಬೀಜದಲ್ಲಿ ಪರ್ಯವಸಾನಗೊಳ್ಳುತ್ತದೆ. ಇದು ಜೀವನಚಕ್ರ. ಪರಿಭ್ರಮಣದ ಚಕ್ರ. ಇದು ನಿಂತುಹೋಗುವ ಚಕ್ರವಲ್ಲ. ಎಂದು ವಿಶ್ವ ಪ್ರಾರಂಭ ಆಗಿದೆ ಅಂದೇ ಆವರ್ತನ ಆರಂಭ. ಈ ಆವರ್ತನೆಯನ್ನು ಬದಲು ಮಾಡಲು ಆಗದು.

ದೇಹ ತನ್ನ ಗತಿಯಲ್ಲಿ ಆವರ್ತನೆಗೊಳ್ಳಲು ಆರಂಭಿಸಿತೋ ಯಾವ ಹಂತದಲ್ಲೂ ಆ ಆವರ್ತನೆಯ ಕ್ರಮ ನಿಲ್ಲದು. ಬಾಲ್ಯ, ಅದರ ನಂತರ ಯೌವನ, ಬಳಿಕ ಮುಪ್ಪು; ಅದರ ಹಿಂದೆ ಸಾವಿದೆ; ಭೂತಗಳಿಂದ ವಿಕಸಿಸಿದ ದೇಹ ಭೂತಗಳಿಗೆ. ಬಾಲ್ಯ, ಯೌವನ, ಮುಪ್ಪು, ಸಾವು ಯಾವುದನ್ನೂ ತಡೆಯಲಾಗದು! ಸಾವು ಮತ್ತೊಂದು ಆವರ್ತನೆಗೆ ಕಾರಣವಾಗುವುದು. ಇದು ಕ್ರಮ. ಇದನ್ನು ಯಾವ ಶಕ್ತಿಯೂ ನಿಲ್ಲಿಸದು!

ತೆರೆ ಏಳುತ್ತದೆ. ಮೇಲೇರುತ್ತದೆ. ಕೊನೆಗೆ ಇಳಿಯುತ್ತದೆ. ಎಲ್ಲ ವಸ್ತುಗಳೂ ಹೀಗೆಯೇ. ಮನುಷ್ಯ ಈ ಆವರ್ತನೆಯನ್ನು ನಿಲ್ಲಿಸುವ ಅಥವಾ ಬದಲಿಸುವ ಕನಸು ಕಾಣುತ್ತಾನೆ. ಶಕ್ಯವಾಗದಾಗ ದುಃಖಿಯಾಗುತ್ತಾನೆ. ವಿಶ್ವವೇ ಆವರ್ತನಗೊಳ್ಳುತ್ತಿರುವಾಗ, ಆವರ್ತನೆಯನ್ನು ತಡೆಯುವುದು ಹೇಗೆ? ಸೂರ್ಯ ನೂರಾರು ಕೋಟಿ ವರ್ಷಗಳ ಹಿಂದೆ ತನ್ನ ಮೊದಲನೇ ಕಿರಣಗಳನ್ನು ಸುತ್ತಲು ಹರಹಿದ. ಅವನ ಬದುಕಿನ ಪ್ರವಾಹ ಸಾಗಿ ಈಗ ಮಧ್ಯಮ ಸ್ಥಿತಿಗೆ ತಲುಪಿದೆ. ಇನ್ನು ಮೇಲೆ ಆತ ಇಳಿಯಬೇಕು; ಮರೆಯಾಗಬೇಕು. ಆಗುತ್ತಾನೆ. ಯಾರೂ ಅದನ್ನು ತಡೆಯಲಾರರು. ಎಲ್ಲಾ ರೋಗಗಳ ಮೇಲೆ ಔಷಧಿ ಇರಬಹುದು. ಆದರೆ ಮುಪ್ಪಿನ ಮೇಲೆ, ಮರಣದ ಮೇಲೆ ಔಷಧಿ ಎಲ್ಲಿ?

ಬರಿ ಏರಿಕೆಯ ಅವಸ್ಥೆಯೊಳಗೆ ಇರಲು ಸಾಧ್ಯವಿಲ್ಲ. ಬರೀ ಇಳಿಕೆಯ ಅವಸ್ಥೆಯೊಳಗೆ ಇರಲೂ ಸಾಧ್ಯವಿಲ್ಲ. ಏರಿಕೆ, ಇಳಿಕೆ, ಇದು ಸತತವಾಗಿ ಸಾಗುತ್ತಿರುವ ಪ್ರವಾಹ. ವಿಶ್ವದ ಎಲ್ಲ ಕ್ಷೇತ್ರಗಳಲ್ಲಿ ಹಂತಹಂತಗಳಲ್ಲಿ ಈ ಆವರ್ತನಾಚಕ್ರವನ್ನು ನಾವು ಗುರುತಿಸಬೇಕು. ಇದು ತತ್ತ್ವ, ತಿಳಿವು.

ವಿಜಯನಗರ ಸಾಮ್ರಾಜ್ಯ ತಲೆದೋರಿತು. ನೂರು ವರ್ಷಗಳ ಕಾಲ ಅಪ್ರತಿಮವಾಗಿ ಅರಳಿತು. ಸುವರ್ಣ ಮುತ್ತು ರತ್ನ ರಸ್ತೆಯಲ್ಲಿಟ್ಟು ಮಾರಿದರು. ಕಸ ಗುಡಿಸಿದವರೂ ಧನಿಕರಾದರು. ಏರಿಕೆ ನಿಂತಿತು, ಇಳಿಕೆ ಆರಂಭವಾಯ್ತು. ಇಂದು ಹಂಪೆ ಹಾಳೂರು! ಯಾವಾಗಲೂ ಒಂದೇ ಸ್ಥಿತಿಯೊಳಗೆ ಈ ಜಗತ್ತಿನ ವಸ್ತುವನ್ನು ಹಿಡಿದಿಡಲು ಆಗುವುದಿಲ್ಲ. ಎಷ್ಟು ನಾವು ಪ್ರಯತ್ನಪಟ್ಟರೂ ಸಹಿತ ಗಾಳಿಯ ಪಟವನ್ನು ಒಂದು ಮಟ್ಟದಲ್ಲಿ ಶಾಶ್ವತವಾಗಿ ಹಿಡಿದಿಡಲು ಹೇಗೆ ಸಾಧ್ಯ? ಗಾಳಿ ಬೀಸುತ್ತಲೇ ಇರುವುದು; ಆ ಪಟ ಹೊಯ್ದಾಡುತ್ತಲೇ ಇರುವುದು. ಗಾಳಿ ತಡೆದು ನಿಲ್ಲಿಸಿದರೆ ಪಟ ಮೇಲೇರದು. ಗಾಳಿ ಬೀಸುತ್ತಿದ್ದರೆ ಒಂದೇ ಹಂತದಲ್ಲಿ ನಿಲ್ಲದು. ಆಕಾಶದಲ್ಲಿ ಪಟ ತೇಲಲೇಬೇಕಾದರೆ ಗಾಳಿ ಬೀಸಲೇಬೇಕು. ಗಾಳಿ ಬೀಸುತ್ತ ಇರುವವರೆಗೆ ಸ್ಥಿರವಾಗಿ ನಿಲ್ಲಿಸಲಾಗದು ಪಟವ. ಅದು ಹೊಯ್ದಾಡುತ್ತಲೇ ಇರಬೇಕು. ಅದರಲ್ಲಿಯೇ ಆನಂದ, ಮನರಂಜನೆ.

ಕಾಲದ ಗಾಳಿ ಬೀಸುತ್ತದೆ, ಜೀವನದ ಪಟ ಹಾರುತ್ತದೆ. ಪ್ರತಿ ಕ್ಷಣ ಹೊಯ್ದಾಡುತ್ತಲೇ ಇರುತ್ತದೆ. ನಾವು ಕನಸು ಕಾಣುತ್ತೇವೆ. ಎಲ್ಲ ಸ್ಥಿರವಾಗಿರಬೇಕೆಂದು. ಕುಳಿತ ಈ ಅಧಿಕಾರದ ಕುರ್ಚಿ ಅಲುಗಾಡಬಾರದು, ನಮ್ಮನ್ನು ಬಿಟ್ಟು ಸರಿಯಬಾರದು ಎಂದು ಬೇಕಾದಷ್ಟು ಪ್ರಯತ್ನ ಪಡುತ್ತಿರು ತ್ತೇವೆ. ಈ ಕುರ್ಚಿಯನ್ನು ಉಳಿಸಿಕೊಳ್ಳಲಿಕ್ಕೆ ಯಾರಿಗೂ ಆಗುವುದಿಲ್ಲ. ಏಕೆಂದರೆ ಅದು ಆವರ್ತನದೊಳಗೆ ಸಿಕ್ಕಿದೆ. ಕುರ್ಚಿ ಹೇಳುತ್ತದೆ, "ಮನುಷ್ಯನೇ, ನಾನು ಆವರ್ತನಕ್ಕೆ ಒಳಗಾಗಿದ್ದೇನೆ. ಪ್ರವಾಹಕ್ಕೆ ಒಳಗಾಗಿದ್ದೇನೆ. ಇದರ ಮೇಲೆ ಎಷ್ಟು ಜನ ಬಂದು ಕೂಡುತ್ತಾರೆ ಅವರೆಲ್ಲ ಇಳಿಯಬೇಕಾಗುತ್ತದೆ. ಏಕೆಂದರೆ ಅದು ಆವರ್ತನದ ನಿಯಮ. ಒಬ್ಬನೇ ಕೂಡಲಿಕ್ಕೆ ಅವಕಾಶವಿಲ್ಲ. ನೀನು ಕೂತವನೋ? ಹಾಗಾದರೆ ಇಳಿಯುವ ಸಿದ್ಧತೆಯಲ್ಲಿರು."

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ ಮತ್ತೆ ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ–ಹೀಗೆ ಯುಗ ಸುತ್ತುತ್ತವೆ. ಶುದ್ಧ ಸತ್ಯದ ಕಾಲಖಂಡವು ಕೃತಯುಗ. ಸ್ವಲ್ಪ ಅಸತ್ಯ ಬೆರೆಸಿದರೆ ತ್ರೇತಾಯುಗ. ಇನ್ನೂ ಸ್ವಲ್ಪ ಹೆಚ್ಚು ಬೆರೆತುಬಿಟ್ಟರೆ ದ್ವಾಪರಯುಗ. ಸತ್ಯ ಇಲ್ಲ ಅನ್ನುವಷ್ಟು ಅಸತ್ಯ ಬೆರೆಸಿಬಿಟ್ಟರೆ ಕಲಿಯುಗ. ಈ ಮಟ್ಟಕ್ಕೆ ಬಂದ ನಂತರ ಮತ್ತೆ ಸತ್ಯವಂತರ ಯುಗ. ಇದು ವಿಶ್ವನಿಯಮ ಇರುವಾಗ ಯಾರು ಏನು ಮಾಡಿಯಾರು?

'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ' ಭಗವಂತ ಶ್ರೀಕೃಷ್ಣ ಹುಟ್ಟಿಬಂದ. ಏನು ಮಾಡಲಿಕ್ಕೆ ಹುಟ್ಟಿಬಂದ? ಧರ್ಮವನ್ನು ಸ್ಥಾಪನೆ ಮಾಡಬೇಕೆಂದು ಹುಟ್ಟಿಬಂದ.

ಧರ್ಮವನ್ನೂ ಪ್ರತಿಷ್ಠಾಪಿಸಿದ. ಸ್ಥಾಪಿಸಿ ಹೋಗುವಾಗ ಹೇಳಿದ, "ಇನ್ನು ಮೇಲೆ ಕಲಿಯುಗ ಬರುತ್ತದೆ ಜಾಗ್ರತೆಯಾಗಿ ಇರಿ" ಅಂತ. ಅಂದರೆ ಅವತಾರಿ ದೇವನೇ ಪ್ರಯತ್ನಿಸಿದರೂ ಕಾಲಚಕ್ರ ನಿಲ್ಲಿಸಲಾಗದು.

ಮಾಂಧಾತಾ ಸ ಮಹೀಪತಿಃ ಕೃತಯುಗಾಲಂಕಾರಭೂತೋ ಗತಃ
ಸೇತುರ್ಯೇನ ಮಹೋದಧೌ ವಿರಚಿತಃ ಕ್ವಾಽಸೌ ದಶಾಸ್ಯಾಂತಕಃ |
ಅನ್ಯೇ ಚಾಪಿ ಯುಧಿಷ್ಠಿರಪ್ರಭೃತಯಃ ಯಾತಾ ದಿವಂ ಭೂಪತೇ
ನೈಕೇನಾಪಿ ಸಮಂ ಗತಾ ವಸುಮತೀ ಮುಂಜ ತ್ವಯಾ ಯಾಸ್ಯತಿ ||

ಕೃತಯುಗಾಲಂಕಾರಪ್ರಾಯನಾದ ಮಾಂಧಾತ ಮಹಾರಾಜ ಹೋದ; ತ್ರೇತಾಯುಗದಲ್ಲಿ ಮಹಾಸಾಗರಕ್ಕೇ ಸೇತುವೆ ನಿರ್ಮಿಸಿ ರಾವಣನನ್ನು ಜಯಿಸಿದ ಆ ಮಹಾನುಭಾವ ರಾಮನೆಲ್ಲಿ? ದ್ವಾಪರಯುಗದಲ್ಲಿ ಮಹಿಯನ್ನಾಳಿದ ಧರ್ಮ ಮುಂತಾದ ರಾಜರು ಸ್ವರ್ಗಕ್ಕೆ ಹೋಗಿಯೇ ಬಿಟ್ಟರು! ಕಲಿಯುಗದಲ್ಲಿ ಆಳುತ್ತಿರುವ ಮುಂಜನೆ, ನೀನು ಮಾತ್ರ ಅವರಂತೆ ಈ ಭೂಮಂಡಲವನಿಲ್ಲಿಯೇ ಬಿಟ್ಟು ಹೋಗಲಾರೆ ಅಲ್ಲವೇ?

ಮಹಲಿನಂಥ ಹೊಸ ನಿವಾಸ ರಚಿಸಿದ ಯಜಮಾನ ಸುಖದ ಕನಸು ಕಾಣುತ್ತಾನೆ. ವೈಭವದ ಶಯನ ಕೋಣೆ, ವಿಸ್ತಾರವಾದ ಕಾರ್ಯ-ಕೋಣೆಗಳಲ್ಲಿ ವಿಶ್ರಾಮ ವೃದ್ಧಾಪ್ಯವ ಕಳೆವ ಕನಸು ಕಾಣುತ್ತಾನೆ. ದಿನ ಕಳೆಯುತ್ತವೆ. ಮಕ್ಕಳು ದೊಡ್ಡವರಾಗುತ್ತಾರೆ. ಅವರ ಸಂಖ್ಯೆ ಬೆಳೆಯುತ್ತದೆ. ಮನೆ ತುಂಬುತ್ತದೆ. ಮುದುಕ ಯಜಮಾನ ಸ್ಥಾನಚ್ಯುತನಾಗುತ್ತಾನೆ. ತನ್ನ ಮನೆಯಲ್ಲೇ ಅವನಿಗೆ ಕೂಡಲು ನಿಲ್ಲಲು ಕೋಣೆಯಿಲ್ಲ, ಪೀಠವಿಲ್ಲ. ತಾನೇ ಕಟ್ಟಿಸಿಕೊಂಡಂಥ ಸುಂದರ ಮಹಲನ್ನು ಆತ ಒಂದು ದಿನ ತ್ಯಾಗ ಮಾಡಿ ಗುಡಿಗಳತ್ತ ಕಾಲು ಹಾಕುವ ಕಾಲ ಆರಂಭವಾಗುತ್ತದೆ. ಅದು 'ಆವರ್ತನ!' ತಂದೆಯ ನಂತರ ಮಕ್ಕಳು ತಂದೆಯ ಸ್ಥಾನವನ್ನು ಆಕ್ರಮಿಸು ತ್ತಾರೆ. ಮಕ್ಕಳ ಸ್ಥಾನವನ್ನು ಮೊಮ್ಮಕ್ಕಳು ಆಕ್ರಮಿಸುತ್ತಾರೆ. ಇದು ಪದ್ಧತಿ ಜಗತ್ತಿನಲ್ಲಿ! ಯಾರೂ ಯಾವುದರಲ್ಲೂ ಶಾಶ್ವತವಾಗಿ ಇರಲಿಕ್ಕಾಗದ ನಿಯತಿ ಜಗತ್ತಿನಲ್ಲಿ. ಎಲ್ಲವೂ ಆವರ್ತನ ನಿಯಮಕ್ಕೆ ಒಳಗು.

ಭಗವಂತನು ಸತ್ಯ ತತ್ತ್ವ, ಪರಿವರ್ತನೆಗೆ ನಿಲುಕದ ದಿವ್ಯ ವಸ್ತು. ಆದಿಯಿಲ್ಲವಾಗಿ ಅವನಿಗೆ ಅಂತ್ಯವಿಲ್ಲ. 'ಅನಾವರ್ತನೀಯ'! ಆವರ್ತನೆಗೆ ಒಳಗಾದ ವಿಶ್ವದ ಅಂತರಂಗದಲ್ಲಿಯೇ ಈ ಅವಿಚಲ ದೇವ ನೆಲೆಸಿದ್ದಾನೆ. ಬದಲಾವಣೆ ಹೊಂದುತ್ತಿರುವ ವಸ್ತುಗಳ ಮಧ್ಯ ಆ ದೇವನನ್ನು ಗುರುತಿಸುವುದೇ ಒಂದು ಬಗೆಯ 'ಭಗವಚ್ಚಿಂತನ'! ಕೌಮಾರ, ಯೌವನ, ಜರೆ, ಮರಣಗಳಲ್ಲೂ ಅಮೃತವಾಗಿ ನೆಲೆ ನಿಂತ 'ಆತ್ಮ', 'ದೇವ'ನ ಅರಿತು ಬದುಕುವುದು 'ಜೀವನ್ಮುಕ್ತ' ಸ್ಥಿತಿ!

ಆವರ್ತನದ ಅರಿವಿದ್ದು ಬದುಕುವುದು ಪವಿತ್ರ ಜೀವನ. ಆವರ್ತನದ ಅರಿವಿರದೆ ಬದುಕುವುದು ಸಾಂಸಾರಿಕ ಜೀವನ.

ಬಹಳ ಹಿಂದಕ್ಕೆ ಯೂರೋಪು ದೇಶದೊಳಗೆ ಒಬ್ಬ ದೊಡ್ಡ ಪ್ರಭಾವಿ ವ್ಯಕ್ತಿ ಇದ್ದ. ದೇಶದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದ. ಜನ ಆತನನ್ನು ಕೊಂಡಾಡಿದರು. ಎಲ್ಲ ಜನ ಕೂಡಿ ಒಂದು ನಿರ್ಣಯ ಮಾಡಿದರು, ಅವನ ಒಂದು ದೊಡ್ಡ ಪ್ರತಿಮೆಯನ್ನು ಸ್ಥಾಪಿಸಬೇಕೆಂದು. ಹಾಲುಗಲ್ಲಿನೊಳಗೆ ಹತ್ತು-ಹದಿನೈದು ಅಡಿ ಮೂರ್ತಿಯನ್ನು ಕೆತ್ತಿಸಿದರು. ಅದ್ಭುತ ಮೂರ್ತಿ. ಅದನ್ನು ನಿಲ್ಲಿಸುವ ದಿನ ಬಂತು. ಅವನಿಗೆ ಬಹಳ ಸಂತೋಷ ಆಗಿತ್ತು. ತನ್ನ ಮೂರ್ತಿ ಊರಮಧ್ಯದ ಕೂಟಸ್ಥಾನದೊಳಗೆ ಶಾಶ್ವತವಾಗಿ ನಿಲ್ಲುವುದು. ಹೋಗುವ ಬರುವ ಪ್ರತಿಯೊಬ್ಬ ತನ್ನ ಹ್ಯಾಟು ತೆಗೆದು ವಂದನೆಗಳನ್ನು ಸಲ್ಲಿಸುವ ಕ್ಷಣಗಳನ್ನು ನೆನಸಿಕೊಂಡು ಹರ್ಷಪಟ್ಟ. ರಾತ್ರಿ ಹತ್ತು-ಹನ್ನೊಂದು ಗಂಟೆ ಆಗಿತ್ತು. ಹೊರಗೆಲ್ಲಾ ಬೆಳದಿಂಗಳು ಹರವಿತ್ತು. ಆ ಮೂರ್ತಿಯನ್ನೊಮ್ಮೆ ನೋಡಿ ಆನಂದಿಸಬೇಕೆನಿಸಿತು. ಎದ್ದು ಹೊರಟ. ಮೂರ್ತಿಯ ಸಮೀಪಕ್ಕೆ ಹೋದ. ಎತ್ತರವಾದ ಮೂರ್ತಿ. ಬೆಳದಿಂಗಳು. ಆತ ಒಂದೊಂದೇ ಮೆಟ್ಟಲು ಏರಿ ಏರಿ ಮೂರ್ತಿಯ ಪದತಲದಲ್ಲಿ ನಿಂತ. ಬಹಳ ಸುಂದರವಾದ ಮೂರ್ತಿ! ಸಂತೋಷಭರಿತನಾದ. ಕಟ್ಟೆಯ ಮೇಲೆ ಕುಳಿತ. ಕೆಳಗೆ ಪಾವಟಿಗೆಯ ಮೇಲೆ ಕಾಲಿಟ್ಟಿದ್ದ. ಎಲ್ಲಿಂದಲೋ ಕತ್ತಲೆಯ ಬೆಳಕಿನೊಳಗಿಂದ ಧ್ವನಿ ಬಂತು. ನಗುವ ಧ್ವನಿ ಕೇಳಿಬಂತು. ಆತ ಈ ಕಡೆ ಆ ಕಡೆ ಯಾರಾದರೂ ಇದ್ದಾರೇನೋ ಎಂದು ನೋಡಿದ. ಯಾರೂ ಇರಲಿಲ್ಲ. ಮತ್ತೆ ನಗುವ ಧ್ವನಿ, ತನ್ನ ಕಾಲ್ಕೆಳಗೇ ನಕ್ಕಂತಾಯಿತು. 'ಏನು?' 'ಯಾರು?' ಕೇಳಿದ. ಕಾಲ ಕೆಳಗೆ ಒಂದು ದೊಡ್ಡ ಕಲ್ಲು ಹಾಕಿದ್ದರು. ಆ ಕಲ್ಲು ಹೇಳಿತು, "ನಾನೇ ನಗುವವ ಇಲ್ಲಿದ್ದೇನೆ. ನಾನು ಮೊದಲು ಹೀಗೇ ಇದ್ದೆ. ಇದೇ ಸ್ಥಾನದಲ್ಲೇ ಹೀಗೇ ನಿಲ್ಲಿಸಿದ್ದರು ನನ್ನನ್ನು. ನಿನ್ನೆ ತೆಗೆದು ಇಲ್ಲಿ ಹಾಕಿ ಪಾವಟಿಗೆ ಕಟ್ಟಿದ್ದಾರೆ. ನನಗಿಂತಲೂ ಮೊದಲಿನವನನ್ನು ಕೆಳಗಿನ ಪಾವಟಿಗೆಗೆ ಹಾಕಿದ್ದಾರೆ. ಅದಕ್ಕಿಂತ ಕೆಳಗಿನ ಪಾವಟಿಗೆಯಲ್ಲಿ ಮತ್ತೊಬ್ಬನನ್ನು ಹಾಕಿದ್ದಾರೆ. ಇಂದು ನಿನ್ನ ಸರತಿ. ನಿನ್ನೆ ನನ್ನ ಸರತಿ. ಮೊನ್ನೆ ನಮ್ಮ ಕೆಳಗಿನವನ ಆವರ್ತನ. ಆದರೆ ಒಂದು ಕ್ಷಣ, ಗೊತ್ತಿರಲಿ, ನಾನು ಯಾಕೆ ನಕ್ಕೆ ಗೊತ್ತೆ? ಹಿಂದೆ ನಾನು ನಿನ್ನಂತೆ ಬಂದು ಇಲ್ಲಿ ಕೂತು ಸಂತೋಷಪಡುತ್ತಿದ್ದೆ. ಅಷ್ಟರಲ್ಲಿ ಕೆಳಗಿನ ಕಲ್ಲು ನಕ್ಕಿತು. ನನಗೆ ಬುದ್ಧಿ ಬಂದಿತ್ತು. ನೆನಪಾಗಿ ನಕ್ಕೆ. ನೀನು ನಾಳೆ ಏನು ಆಗುತ್ತೀಯಲ್ಲ ಅದನ್ನು ಕಲ್ಪಿಸಿ ನಕ್ಕೆ." ಇದು ಎಲ್ಲರ ಕತೆ. ಆವರ್ತನಶೀಲ ಜಗತ್ತಿನೊಳಗೆ ಯಾವುದನ್ನೂ ಬಹಳಷ್ಟು ತಲೆಗೆ ಹಚ್ಚಿಕೊಳ್ಳಬಾರದು. ಇದು ನಮ್ಮೆಲ್ಲರ ಜೀವನ.

ನನ್ನ ಜೀವನವೂ ಅಷ್ಟೇ! ನಾನು ಈಗ ಈ ಸ್ಥಾನದಲ್ಲಿ ಕುಳಿತಿದ್ದೇನೆ. ಬೇರೆ ಇನ್ನೊಬ್ಬ ನಾಳೆ ಬಂದು ಕೂಡುತ್ತಾನೆ. ನಾನು ಇಳಿಯಬೇಕಾಗುತ್ತದೆ. ಇಳಿಯದೇ ಇದ್ದರೆ ಇಳಿಸುತ್ತಾರೆ. ನಾನು ಇಳಿಯಬೇಕಾಗುತ್ತದೆ, ಆತ ಕೂಡುತ್ತಾನೆ. ಕಾಲ ಬಂದು ಅವನನ್ನೂ ಇಳಿಸುತ್ತದೆ. ಈಗ ಕುಳಿತಾಗಲೇ ಭಾವಿಸಿಕೊಂಡಿರಬೇಕು, ನಾನು ಇಳಿಯಬೇಕಾಗುತ್ತದೆ ಎಂದು. ಅರಿತು ಕುಳಿತಿರುವುದೇ ಪರಮಾರ್ಥ. ಅಧಿಕಾರಸ್ಥಾನದಲ್ಲಿ ಕೂಡಬಾರದು ಎಂದಲ್ಲ. ಇಳಿಯಬೇಕಾಗುತ್ತದೆ ಎಂದು ತಿಳಿದುಕೊಂಡು ಕೂಡಬೇಕು. ಟ್ರೇನಿನಲ್ಲಿ ಮತ್ತನೆಯ ಪೀಠದ

ಮೇಲೆ ಕುಳಿತಿರುತ್ತೇವೆ. ಎಷ್ಟು ಕಾಲ? ನಮ್ಮ ಇಳಿಯುವ ತಾಣ ಬರುವವರೆಗೆ. ನಮ್ಮಂತೆ ಸಾವಿರಾರು ಜನ ಅದರ ಮೇಲೆ ಮಲಗಿದ್ದಾರೆ, ಕೂತಿದ್ದಾರೆ. ಶಾಶ್ವತವಾಗಿ ಯಾರೂ ಕೂಡರು. ಎಲ್ಲ ಟಿಕೇಟುಗಳೂ ಕಾಲಮಿತ!!

ಸಂನ್ಯಾಸಿಯೋರ್ವ ಅರಮನೆಯೊಳಗೆ ಬಂದು ಮಲಗಿಕೊಂಡಿರುತ್ತಾನೆ. ರಾಜ ಬಂದು ನೋಡಿ ರೇಗುತ್ತಾನೆ. "ಇದೇನು ಧರ್ಮಶಾಲೆಯೋ?" ಆಗ ಸಂನ್ಯಾಸಿ ಕೇಳಿದ "ಮತ್ತೇನು? ಮೊದಲು ಇಲ್ಲಿ ನಿಮ್ಮ ಅಜ್ಜ ವಾಸಿಸಿದ್ದ. ಆತ ಹೋದ. ನಿಮ್ಮ ತಂದೆ ತಂಗಿದ. ಆತನೂ ಹೋದ, ಎಂದಿಗೂ ತಿರುಗಿ ಬಾರದಂತೆ. ಈಗ ನಿನ್ನ ಸರತಿ. ನೀನೂ ಒಂದು ದಿನ ಹೋಗಬೇಕು ಇದನ್ನೆಲ್ಲಾ ಬಿಟ್ಟು. ಹೀಗಿರುವಾಗ ಇದು ಧರ್ಮಶಾಲೆ ಏಕಲ್ಲ?" ಮಾರ್ಮಿಕ ಕಥೆಯಿದು. ನಾವೆಲ್ಲ ಕಥೆ ಓದಿದ್ದೇವೆ. ಆದರೆ ಕಥೆಯ ಇಂಗಿತ ನಮ್ಮ ಮೈಗೂಡಿಲ್ಲ. ಪ್ರಸಂಗ ಬಂದಾಗ ಅದು ನೆನಪಾಗದು. ಶಾಶ್ವತತೆಯ ಭ್ರಮೆ ಮನುಷ್ಯನಿಗೆ ತಗುಲಿಕೊಂಡಿದ್ದರಿಂದ ಆ ಮನುಷ್ಯ ಇಷ್ಟು ಕಷ್ಟಕ್ಕೊಳಗಾದ.

ಬಸವಣ್ಣ ಹತ್ತು-ಇಪ್ಪತ್ತು ವರ್ಷಗಳ ಕಾಲ ಸಚಿವ ಕಿರೀಟವನ್ನು ಹಾಕಿಕೊಂಡಿದ್ದ. ಕಲ್ಯಾಣದೊಳಗೆ ಅನಭಿಷಿಕ್ತ ದೊರೆಯಾಗಿ ಬಾಳಿ ಕೊಂಡಿದ್ದ. ತನ್ನ ಎಲ್ಲ ಧರ್ಮಸಾಮ್ರಾಜ್ಯವನ್ನು ನಿರ್ಮಿಸಿದ್ದ. ಇಂತಹ ಬಸವಣ್ಣ ಆ ಊರು ಬಿಟ್ಟು ಹೋಗುವ ಪ್ರಸಂಗ ಬಂದಾಗ ಒಂದಿಷ್ಟೂ ವಿಚಲಿಸದೆ ಕಿರೀಟ ಕೆಳಗಿಟ್ಟ. ಬಟ್ಟೆಗಳನ್ನು ಕಳಚಿದ. ಹಿಂದೆ ತಿರುಗಿ ನೋಡದೆ ಆ ಊರ ತೊರೆದ. ಬಟ್ಟೆಗೆ ಹತ್ತಿದ ಒಂದು ಕಡ್ಡಿಯನ್ನು ಹೇಗೆ ಸರಿಸಿ ಮುಂದೆ ಹೋಗಿಬಿಡುತ್ತಾರೆಯೋ ಹಾಗೆ! ಕಿರೀಟ ತೆಗೆದು ಇಟ್ಟು ಕೂಡಲಸಂಗಮನತ್ತ ಹೊರಟುಹೋದ. ಎಷ್ಟು ನಿರ್ಲಿಪ್ತವಾಗಿರಬೇಕು! ಅವನಿಗೆ ಗೊತ್ತಿತ್ತು, ಜಗತ್ತು ಇದು ಆವರ್ತನಶೀಲ ಎಂದು. ಈ ಕುರ್ಚಿ ಮೇಲೆ ತನಗಿಂತ ಮೊದಲು ಒಬ್ಬರು ಕುಳಿತಿದ್ದರು, ಈಗ ತಾನು, ಆತ ತ್ಯಜಿಸಿದಂತೆ ತಾನೂ ತ್ಯಜಿಸಬೇಕು, ಎಂಬ ಭಾವದಿಂದ ಕುಳಿತಿದ್ದ. ಆದ್ದರಿಂದ ಅದನ್ನು ಬಿಡುವಾಗ ಮನಸ್ಸಿಗೆ ನೋವಾಗಲಿಲ್ಲ. ಬಸವಣ್ಣನನ್ನು ಯಾಕೆ ಕೊಂಡಾಡುತ್ತೇವೆ ಎಂದರೆ ತ್ಯಾಗಮೂರ್ತಿಯಾಗಿದ್ದನಾತ! ಯಾವ ಕ್ಷಣದೊಳಗಾದರೂ ತ್ಯಾಗ ಮಾಡಬಲ್ಲೆ ಅನ್ನುವ ಮನಃಸ್ಥಿತಿ ಇತ್ತು. ನಾವು ಅಧಿಕಾರಸ್ಥಾನ ಬಿಡುವಾಗ ಎಂತಹ ಕೋಲಾಹಲ! ಜಗಳವೆಷ್ಟು, ಅದೊಂದು ದೊಡ್ಡ ಹಗರಣ! ಎಂ.ಪಿ.ಗಳು, ಎಂ.ಎಲ್.ಎ.ಗಳು ಆ ಪದವಿ ಹೋದರೂ ವಾಸಮಾಡುವ ಅರಮನೆಗಳನ್ನು ಇನ್ನೂ ಬಿಟ್ಟಿಲ್ಲ. ಅನೇಕ ತಿಂಗಳು ಉರುಳಿಹೋಗಿವೆ. ಬಿಟ್ಟಿಲ್ಲ. ಭವ್ಯ ಮನೆಗಳನ್ನು ಹೇಗೆ ಬಿಡಲಿಕ್ಕೆ ಆಗುತ್ತದೆ?

ಮನುಷ್ಯ ತತ್ತ್ವಜ್ಞಾನಿ ಆಗಬೇಕಾದರೆ ಈ ತತ್ತ್ವವನ್ನು ಅರ್ಥಮಾಡಿ ಕೊಂಡಿರಬೇಕು, ಈ ಜಗತ್ತು ಆವರ್ತನಶೀಲವಾಗಿದೆಯೆಂದು. ಬಹಳ ಸುಲಭ ಸೂತ್ರ ಇದು. ಆವರ್ತನ ಸೂತ್ರ. ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ, ಯಾರದೂ ಸ್ಥಿರವಲ್ಲ, ಯಾವುದೂ! ಈ ಜಗತ್ತು ಹುಟ್ಟಿದಂದಿನಿಂದ ಅತ್ತೆ-ಸೊಸೆ ಪ್ರವಾಹ ಸಾಗಿಬಂದಿದೆ. ಯಾರೂ ಸ್ಥಿರ ಅತ್ತೆಯರೂ ಅಲ್ಲ, ಯಾರೂ ಸ್ಥಿರ ಸೊಸೆಯರೂ ಅಲ್ಲ.

ಗಡಿಯಾರ ತಿರುಗುತ್ತಿರುತ್ತದೆ. ಹಾಗೆ ಜೀವನಚಕ್ರ ತಿರುಗುತ್ತಿರುತ್ತದೆ. ಗಡಿಯಾರ ನಿಲ್ಲಿಸಬಹುದು, ಬೇಕಾದ ವೇಳೆಗೆ ನಿಲ್ಲಿಸಬಹುದು. ಆದರೆ ಜೀವನದ ಗಡಿಯಾರ ನಿಲ್ಲಿಸಲಾಗದು. ಎಂತಲೇ ಎಲ್ಲ ಚೆನ್ನಾಗಿದೆ. ಎಲ್ಲರಿಗೂ ಬೇಕಾದಾಗ ನಿಲ್ಲಿಸುವ ಸ್ವಾತಂತ್ರ್ಯವಿದ್ದಿದ್ದರೆ ಎಲ್ಲ ಅಸ್ತವ್ಯಸ್ತ ವಾಗುತ್ತಿತ್ತು ಜಗತ್ತು. ಒಬ್ಬ ಸೂರ್ಯನ ನಿಲ್ಲಿಸಿಬಿಟ್ಟ. ಒಬ್ಬ ಚಂದ್ರನ ನಿಲ್ಲಿಸಿಬಿಟ್ಟ. ಒಬ್ಬ ಗಾಳಿ ಮಳೆ ನಿಲ್ಲಿಸಿಬಿಟ್ಟ. ಗತಿ ಏನಾಗಬೇಡ? ನಮ್ಮ ಮಾತು ಕೇಳದಂತೆ ಚಳಿಗಾಲ, ಬೇಸಿಗೆ, ಮಳೆಗಾಲ ಅವು ತಮ್ಮಷ್ಟಕ್ಕೆ ತಾವು ತಿರುಗಿಕೊಂಡಿರುತ್ತವೆ. ಆದರೂ ಮನುಷ್ಯನಿಗೆ ಆವರ್ತನ ಮೀರುವ ಭ್ರಮೆ. ಚಿರವಾಗಿರುವ ಯತ್ನ.

ನಿವೃತ್ತಿಯ ವಯಸ್ಸು ಐವತ್ತು ಇತ್ತು. ಐವತ್ತೈದು ಆಯಿತು. ಈಗ ಐವತ್ತೆಂಟು ಆಗಿದೆ. ಇನ್ನೆರಡು ವರ್ಷ ಸಿಕ್ಕರೆ ಅರವತ್ತು. ರಿಟಾಯರ್ಡ್ ಆಗುವ ಮನಸ್ಸೆಲ್ಲಿ? ಸಾಯುವವರೆಗೆ ಅಲ್ಲೇ ಇರಬೇಕು ಎಂದು ಎಣಿಕೆ ಹಾಕುವ ಮನುಷ್ಯನಿಗೆ ಆವರ್ತನಚಕ್ರದಿಂದ ಹೊರಗೆ ಬರಲು ಹೇಗೆ ಸಾಧ್ಯವಾಗುತ್ತದೆ? ನಾವು ಯಾವಾಗಲೂ ಬಿಡಲು ಸಿದ್ಧರಿರಬೇಕು. ಮನೆ ಬಿಟ್ಟು ಹೊರಗೆ ಹೋಗುವಾಗ ನಾವು ಮನೆಗೆ ತಿರುಗಿ ಬರುತ್ತೇವೆ ಎಂಬ ಭಾವ ಕೂಡ ತರದೆ ಹೋಗುವುದು. ನಿಶ್ಚಿಂತ. ಇದ್ದಲ್ಲಿಯೇ ನಿಶ್ಚಿಂತ. ಹಾಗೆ ಬದುಕುವಾತನೇ ಸಂತ. ಹಾಗಿರದವ ಸಂಸಾರಿ. ಲಗ್ನ ಆದವ ಸಂಸಾರಿ, ಲಗ್ನ ಆಗದವ ಸಂನ್ಯಾಸಿ ಎಂದಲ್ಲ. ಯಾರು ಸ್ವಚ್ಛಂದವಾಗಿ ಬದುಕುತ್ತಾ ರೆಯೋ ಅವರೇ ಸಂತರು. ಯಾರು ಕಲ್ಪನೆಯ ಜಾಲದಲ್ಲಿ ಸಿಲುಕಿದ್ದಾರೆ, ಅವರು ಸಂಸಾರಿಗಳು. ಆವರ್ತನೆಯ ಪ್ರಪಂಚ-ಜಾಲ! ಜಾಲದಿಂದ ಹೊರಗೆ ಬಂದಾತನೇ ಮುಕ್ತ. ಈ ಜಾಲದಲ್ಲಿ ಸಿಕ್ಕಿಬಿದ್ದವನೇ ಪ್ರಾಪಂಚಿಕ. ಇದನ್ನು ಅರ್ಥ ಮಾಡಿಕೊಂಡು ನಿರಾಭಾರಿಯಾಗಿ ಬದುಕುವುದು.

ಮನೆಗೆ ಯಾರಾದರೂ ದೊಡ್ಡವರು ಬಂದರೆ ಕೂಡಲೆ ನಮ್ಮ ಜಾಗ ಬಿಟ್ಟು ಅವರನ್ನು ಅಲ್ಲಿ ಕೂಡಿಸುತ್ತೇವೆ. ಯಾಕೆ? ಅವರು ಬಿಟ್ಟು ಹೋಗುತ್ತಾರೆ ಎಂಬ ಭರವಸೆ. ಮನೆಗೆ ಬಂದ ಆ ಮಹಾನುಭಾವ ಶಾಶ್ವತ ಇರುತ್ತಾನೆ ಎಂದೆನಿಸಿದರೆ ಅವನನ್ನು ಕರೆಯುವವರು ಯಾರು? ನಾವೆಲ್ಲ ಅತಿಥಿಗಳು ! ಎಲ್ಲರೂ ; ನಾನು ನಿಮಗೆ ಅತಿಥಿ, ನೀವು ನನಗೆ ಅತಿಥಿ. ನೀವು ನನ್ನನ್ನು ಗೌರವಿಸುವುದು, ನಾನು ನಿಮ್ಮನ್ನು ಗೌರವಿಸುವುದು! ಪರಸ್ಪರ ಗೌರವಿಸುತ್ತಾ ಬಾಳುವುದು ಅದರಲ್ಲಿ ಉಭಯರ ಶ್ರೇಯಸ್ಸು. ಈ ಶ್ರೇಯಸ್ಸಿಗಾಗಿ ಭಗವಚ್ಚಿಂತನ.

"ನಾನು ಏರುವವನೂ ಅಲ್ಲ. ಇಳಿಯುವವನೂ ಅಲ್ಲ. ಏರೋದು ಇಳಿಯೋದು ಅದು ಭೌತಿಕ, ಸಾಮಾಜಿಕ! ಆದರೆ ಅಂತರಂಗದಲ್ಲಿರುವ ಆತ್ಮವಸ್ತು ಯಾವುದನ್ನು ಏರುವುದೂ ಇಲ್ಲ, ಯಾವುದನ್ನು ಇಳಿಯುವುದೂ ಇಲ್ಲ." ಇಷ್ಟು ನಿರ್ಲಿಪ್ತವಾಗಿ ಮನುಷ್ಯ ಒಬ್ಬ ಅತಿಥಿಯಂತೆ ವಾಸಮಾಡಲು ಕಲಿತರೆ ಅದು ಭಗವತ್ ಜೀವನ. ಅದು ಪವಿತ್ರ ಜೀವನ. ಜೀವನ ದಿವ್ಯ ಆಯಿತು.ಇಂತಹ ದಿವ್ಯ ಜೀವನದವ ಆರಾಮ ಇರುತ್ತಾನೆ. ಆದರೇನು? ಹೀಗೆ ಇರಲು ಆಗದು. ದೊಡ್ಡವರನ್ನು ಕಂಡು ಮನಸ್ಸಿಗೆ ತಾಪ! ಹಾಗಾಗಬೇಕೆಂಬ

ಬಯಕೆ. ಆಗದೆಂಬ ಸಂಕಟ. ಅದಕ್ಕಾಗಿ ಅನ್ಯಾಯದ ಧನಾರ್ಜನ ವಿಧಾನ ಅನುಸರಿಸುತ್ತಾನೆ. ಆಸೆ ಅತಿಯಾಯಿತು; ಬದುಕಿನ ನೆಮ್ಮದಿ ಮರೆ.

ನಾವು ಯಾವಾಗಲೂ ಒಂದು ಭ್ರಮಣಚಕ್ರ ನೆನೆಸಬೇಕು. ಜಾತ್ರೆಯೊಳಗೆ ಚಕ್ರದ ತೊಟ್ಟಿಲು ಮಾಡಿರುತ್ತಾರೆ. ಕೆಳಗಿನ ತೊಟ್ಟಿಲು ಮೇಲೆ ಹೋಗುತ್ತದೆ, ಮೇಲಿನ ತೊಟ್ಟಿಲು ಕೆಳಗೆ. ಅದರಲ್ಲಿ ಕುಳಿತು ನೋಡಿ. ಏರುವಾಗ ಎಷ್ಟು ಆನಂದವಾಗುತ್ತದೆ. ಅದು ಅತಿ ತುಟ್ಟತುದಿಗೆ ಹೋದ ಬಳಿಕ ಜಗತ್ತಿನ ಎತ್ತರ. ಇಳಿಯಬಾರದೆಂಬ ಆಸೆ. ಆದರೆ ಚಕ್ರ ನಿಲ್ಲದು. ಕೆಳಗಿನವ ಮೇಲೆ ಬರಬೇಕು! ಆದ್ದರಿಂದ ಮೇಲಿನವ ಕೆಳಗಿಳಿಯಬೇಕು. ನಮ್ಮ ತೊಟ್ಟಿಲು ಎಂದೆಂದಿಗೂ ಮೇಲೇ ಇರಬೇಕು ಎಂಬ ಕನಸು ಕಾಣಬಾರದು. ಅದು ಚಲಿಸುತ್ತದೆ. ಅದು ಮೇಲೆ ಹೋದರೂ ಸಂತೋಷ ಪಡಬೇಕು. ಕೆಳಗೆ ಬಂದರೂ ಸಂತೋಷ ಪಡಬೇಕು.

ಆರತಕ್ಷತೆ ಆದ ಬಳಿಕ ಮೆರವಣಿಗೆ. ವಧೂವರರು ರಥದ ಮೇಲೆ. ಶೃಂಗಾರ. ಎಲ್ಲ ಜನ ನಡೆಯುತ್ತಿದ್ದಾರೆ. ಇವರು ಮೇಲೆ ಕುಳಿತಿರುತ್ತಾರೆ. ಹೂಮಾಲೆಗಳು! ಜನ! ಕುಣಿಯುವವರು. ಹಾಡುವವರು. ಇದೆಲ್ಲಾ ನೋಡಿ ಅವರಿಬ್ಬರಿಗೆ ಅನ್ನಿಸುತ್ತದೆ, ಮೆರವಣಿಗೆ ಎಂದೂ ಮುಗಿಯಬಾರದು! ನಡೆಯುವವರು ಅನ್ನುತ್ತಾರೆ ಯಾವಾಗ ಮನೆ ಬಂದೀತು ಎಂದು. ಮೇಲೆ ಕುಳಿತವರಿಗೆ ಮುಗಿಯಬಾರದು! ಕೆಳಗೆ ಇದ್ದವರಿಗೆ ಬೇಗ ಮುಗಿಯಬೇಕು! ಇದೇ ಜಗತ್ತು! ಈ ದೃಶ್ಯವನ್ನು ಯಾವಾಗಲೂ ದೃಷ್ಟಿಯೊಳಗೆ ಇರಿಸಿದರೆ ಜೀವನ ಬಹಳ ಆಪ್ಯಾಯಮಾನ.

ವಿದ್ಯೆ, ಶಕ್ತಿ ಎಲ್ಲವೂ ಹುಲ್ಲು ಬೆಂಕಿಯಂತೆ. ಅದೆಷ್ಟು ಹೊತ್ತು ಅವು? ಅದು ಕಲ್ಲಿದ್ದಿಲಿನ ಬೆಂಕಿ ಅಲ್ಲ. ಆದ್ದರಿಂದ ಮನುಷ್ಯ ತಿಳಿದುಕೊಂಡು ಆರಾಮಾಗಿ ಇರಬೇಕು. ಎದುರಿಗೆ ಯಾವುದಾದರೂ ಒಂದು ಮಾರುತಿ ಗಾಡಿ ಹೋಯಿತು ಎನ್ನಿ; ಆಗ ಭಾವಿಸಿ – ಬೇಕಾದಷ್ಟು ಓಡಲಿ; ಒಂದು ಕಡೆ ನಿಲ್ಲಲೇಬೇಕಲ್ಲ. ರಾಕೆಟ್‌ನಲ್ಲಿ ಯಾರಾದರೂ ಹಾರಿದರೆ ಒಂದು ದಿನ ಇಳಿಯಲೇಬೇಕಲ್ಲ! ಬದುಕೆಂದರೆ ಓಡಿ ನಿಲ್ಲುವುದು; ಏರಿ ಇಳಿಯುವುದು. ಇದನ್ನು ಅರಿತರೆ ಏರಬೇಕು ಎನ್ನಿಸುವುದಿಲ್ಲ; ಏರಬಾರದೂ ಎಂದೆನಿಸುವುದಿಲ್ಲ. ಎಲ್ಲ ಸುಲಭ. ಪ್ರಸಂಗಾವಧಾನಿಯಾಗಿ ಬದುಕುವುದು. ಅದು ನಿರಾಮಯ ಬದುಕು. ಜ್ಞಾನಿ ಬದುಕು. ಅದಕ್ಕಾಗಿ ಚಿಂತನ.

ಭಗವಂತನ ಅನಾವರ್ತನದ ಚಿಂತನೆಯ ನಂತರ ಆವರ್ತನ ಜಗತ್ತಿನಲ್ಲಿ ಬದುಕುವ ಒಂದು ಸ್ಥಿತಿ ಇದು. ಈ ಆವರ್ತನ ಸೂತ್ರವನ್ನು ಬದುಕಿನಲ್ಲಿ ಬಳಸಬೇಕು. ಆವರ್ತನೆಯನ್ನು ಎಲ್ಲೆಡೆ ನೋಡುವುದು ಸಂತಸ ಕೊಡುತ್ತದೆ. ಇದು ಇಂದಿನ ಚಿಂತನ. ಆವರ್ತನವೇ ಜೀವನ. ಅನಾವರ್ತನವೇ ಆತ್ಮಚೇತನ. ಆವರ್ತನದ ಜೀವನವನ್ನು ಸಾಗಿಸುವಾಗಲೇ, ಅನಾವರ್ತನ ಚೇತನದ ಚಿಂತನ! ಅನಾವರ್ತನ ಚೇತನ ಚಿಂತನೆಯೊಂದಿಗೆ ಆವರ್ತನ ಬದುಕನ್ನು ಬಾಳಿಕೊಂಡಿರುವುದೇ ಮುಕ್ತಾವಸ್ಥೆ! ಇದು ಜೀವನಮುಕ್ತಾವಸ್ಥೆ!

□

# ಮಾರ್ಗದರ್ಶಕರು

---

**ಡಾ. ಶ್ರೀ ರವಿಶಂಕರ ಗುರೂಜೀ**
ಆರ್ಟ್ ಆಫ್ ಲಿವಿಂಗ್, ಬೆಂಗಳೂರು

**ನಾ**ನು 1983 ಇಸವಿಯಲ್ಲಿ ಪೂಜ್ಯ ರಾಜೇಂದ್ರ ಸ್ವಾಮೀಜಿಯವರ ಸಂಪರ್ಕಕ್ಕೆ ಬಂದೆ. ಅವರ ವ್ಯಕ್ತಿತ್ವ ವಿಶಿಷ್ಟವಾದುದು. ಅವರ ಬೆಳಕು ಜನಮನದಲ್ಲಿ ಹೇಗೆ ಬೆಳಗುತ್ತಿದೆ ಎಂಬುದನ್ನು ಎಲ್ಲೆಡೆಯೂ ನೋಡಬಹುದು. ಸುತ್ತೂರು ಶ್ರೀಮಠ ಧರ್ಮ, ಆಧ್ಯಾತ್ಮಗಳನ್ನು ಉಳಿಸಿಕೊಂಡು ಬಂದಿದೆ. ದಾರಿಯಿಲ್ಲದ ಊರಿಗೆ ದಾರಿಯನ್ನು ಕಲ್ಪಿಸಿ ಮಕ್ಕಳಿಗೆ ಹಳ್ಳಿಹಳ್ಳಿಗಳಲ್ಲಿ ಶಾಲೆಗಳನ್ನು ತೆರೆದು ಅವರ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ವಿಶೇಷ ಸಂಗತಿ ಎಂದರೆ ಕೇವಲ ನಗರ ಪ್ರದೇಶದಲ್ಲಿ ಮಾತ್ರವಲ್ಲ, ಹಳ್ಳಿಗಾಡಿನಲ್ಲೂ ವಸತಿನಿಲಯವನ್ನು ಶ್ರೀಗಳು ತೆರೆದಿದ್ದರು ಎಂಬುದು. ಮೇಲ್ನೋಟಕ್ಕೆ ರಾಜೇಂದ್ರ ಶ್ರೀಗಳವರು ಲೌಕಿಕದ ಬಗ್ಗೆ ಆಸ್ಥೆವುಳ್ಳವರಂತೆ ಕಂಡರೂ ಆಂತರಿಕವಾಗಿ ಆಧ್ಯಾತ್ಮದ ಬಗ್ಗೆ ತುಂಬಾ ಒಲವನ್ನು ಇಟ್ಟುಕೊಂಡಿದ್ದರು.

ಇದಕ್ಕೆ ಒಂದು ಸಣ್ಣ ಉದಾಹರಣೆ ಎಂದರೆ 1983ರಲ್ಲಿ ಮೈಸೂರಿನಲ್ಲಿ ಶಿವಯೋಗದ ಬಗ್ಗೆ ನನ್ನ ಪ್ರವಚನ ಏರ್ಪಾಡಾಗಿತ್ತು. ಅದನ್ನು ಕೇಳಲು ಪೂಜ್ಯ ರಾಜೇಂದ್ರ ಸ್ವಾಮಿಗಳು ಪ್ರತಿನಿತ್ಯ ದಯ ಮಾಡಿಸುತ್ತಿದ್ದರು. ನನಗೆ ಆಗ ಬಹಳ ಚಿಕ್ಕ ವಯಸ್ಸು. ಅವರು ದೊಡ್ಡವರು. ಅದಾಗಲೇ ಅವರ ಕೀರ್ತಿ ನಾಡಿನಾದ್ಯಂತ ಹಬ್ಬಿತ್ತು. ಅಷ್ಟು ದೊಡ್ಡ ಸ್ವಾಮಿಗಳು ನನ್ನಂಥ ಕಿರಿಯ ವಯಸ್ಸಿನ ಸ್ವಾಮಿಯೊಬ್ಬನ ಮಾತುಗಳನ್ನು ಕೇಳಲು ಬರುತ್ತಿದ್ದುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಪ್ರವಚನದ ನಂತರ ಆಧ್ಯಾತ್ಮದ ಬಗ್ಗೆ ಅನೇಕ ವಿಚಾರಗಳನ್ನು ನನ್ನೊಡನೆ ಚರ್ಚಿಸುತ್ತಿದ್ದರು. ನಾನು ಕಿರಿಯನೆಂಬ ಸಂಕೋಚದಿಂದಲೇ ಅವರೊಡನೆ ಸಂವಾದ ನಡೆಸುತ್ತಿದ್ದೆ. ಅವರ ಕಣ್ಣಲ್ಲಿದ್ದ ಪ್ರಶಾಂತತೆ, ಮುಖದಲ್ಲಿದ್ದ ದಿವ್ಯ ತೇಜಸ್ಸು, ಆಧ್ಯಾತ್ಮದಲ್ಲಿದ್ದ ಕುತೂಹಲ ಗಮನಾರ್ಹವಾದುದು. ಅಂದಿನಿಂದ ಪೂಜ್ಯರು ಮತ್ತು ನನ್ನ ನಡುವೆ ಅತ್ಯಂತ ನಿಕಟವಾದ ಸಂಪರ್ಕವೇರ್ಪಟ್ಟಿತ್ತು.

ಮೈಸೂರಿಗೆ ನಾನು ಪ್ರತಿ ಬಾರಿ ಬಂದಾಗಲೂ ಅವರನ್ನು ಭೇಟಿಯಾಗದೇ ತೆರಳುತ್ತಿರಲಿಲ್ಲ. ಒಂದು ದೃಷ್ಟಿಯಿಂದ ನನ್ನ ಬದುಕಿನ ಪಥವನ್ನು ನಿರ್ದೇಶಿಸಿದ ಗುರುಗಳಲ್ಲಿ ಅವರೂ ಒಬ್ಬರು. ನನ್ನ ಬಾಲ್ಯದ ಬಹಳ ದಿನಗಳನ್ನು ಯೋಗಿ ಮಹೇಶ್ ಅವರ ಆಶ್ರಮದಲ್ಲಿ

ಕಳೆದಿದ್ದೆ. ನನ್ನ ಯೋಗ, ಆಧ್ಯಾತ್ಮ, ಸಂಸ್ಕೃತಿಯ ಚಿಂತನೆಗಳೆಲ್ಲ ರೂಪುಗೊಂಡದ್ದು ಅಲ್ಲಿಯೇ. ಅಲ್ಲಿನ ಅನೇಕ ಭಕ್ತರು ಮತ್ತು ಸಾಧಕರು ನನ್ನನ್ನು ಯೋಗಿ ಮಹೇಶರ ಉತ್ತರಾಧಿಕಾರಿಗಳೆಂದೇ ಹೇಳುತ್ತಿದ್ದರು. ಯೋಗಿ ಮಹೇಶರ ನಿಧನಾನಂತರ ನನ್ನಲ್ಲಿ ಒಂದು ಜಿಜ್ಞಾಸೆ ಉಂಟಾಯಿತು. ಅದೇನೆಂದರೆ ನಾನು ಸ್ವತಂತ್ರವಾಗಿ ರೂಪುಗೊಳ್ಳಬೇಕೇ ಅಥವಾ ಯೋಗಿ ಮಹೇಶರ ಉತ್ತರಾಧಿಕಾರಿಯಾಗಿ ಮುಂದುವರೆಯ ಬೇಕೆ ಎಂಬುದು. ನನ್ನ ಬದುಕಿನಲ್ಲಿ ಇಂತಹ ಸಂಕೀರ್ಣ ಸಮಸ್ಯೆಗಳು ಎದುರಾದಾಗಲೆಲ್ಲ ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳು ಹಾಗೂ ಕಂಚಿಯ ಶ್ರೀಗಳೊಡನೆ ಚರ್ಚಿಸುತ್ತಿದ್ದೆ. ಅವರುಗಳು ನೀಡಿದ ಸಲಹೆ, ಸೂಚನೆಗಳನ್ನು ತಪ್ಪದೇ ಪಾಲಿಸುತ್ತಿದ್ದೆ. ಈ ಸಮಸ್ಯೆ ಎದುರಾದಾಗಲೂ ನಾನು ಪೂಜ್ಯ ಶ್ರೀ ರಾಜೇಂದ್ರ ಶ್ರೀಗಳನ್ನು ಭೇಟಿಯಾದೆ. ನನ್ನ ಮಾತು ಗಳನ್ನೆಲ್ಲಾ ಕೂಲಂಕಷವಾಗಿ ಆಲಿಸಿದ ಶ್ರೀಗಳು ಸ್ವಲ್ಪ ಹೊತ್ತು ಯೋಚಿಸಿ ನೀವು ಪ್ರತ್ಯೇಕವಾಗಿ ಆಶ್ರಮ ಮಾಡುವುದು ಒಳ್ಳೆಯದು ಎಂಬುದು ನಮ್ಮ ಅಭಿಪ್ರಾಯವೆಂದರು.

ಇದೇ ಬಗೆಯ ಅಭಿಪ್ರಾಯವನ್ನು ಕಂಚಿಯ ಶ್ರೀಗಳು ವ್ಯಕ್ತ ಪಡಿಸಿದರು. ಇಂದು ವಿಶ್ವ ಪ್ರಖ್ಯಾತವಾಗಿರುವ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಪ್ರಾರಂಭಗೊಳ್ಳಲು ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರ ಸಲಹೆಯೇ ಕಾರಣ. ಅದನ್ನು ನಾವು ನಿತ್ಯವೂ ಸ್ಮರಿಸುತ್ತೇವೆ. ಪೂಜ್ಯ ಶ್ರೀಗಳು ಸ್ಥಾಪಿಸಿರುವ ಶಿಕ್ಷಣ ಸಂಸ್ಥೆಗಳು, ಧಾರ್ಮಿಕ ಕೇಂದ್ರಗಳು ನಾಡಿನ ಸಂಸ್ಕೃತಿಗೆ ನೀಡುತ್ತಿರುವ ಕೊಡುಗೆ ಚರಿತ್ರಾರ್ಹವಾಗಿದೆ.

**ಕೃಪೆ : 'ಘನ–ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

□

ಕರಂಗಳೆ ಮನೆಯಾಗಿ, ಕರಂಗಳೆ ಕರಂಗಳಾಗಿ
ಅರ್ಪಿಸುವ ಭೇದವನಾರು ಬಲ್ಲರಯ್ಯಾ, ಚೆನ್ನಬಸವಣ್ಣನಲ್ಲದೆ?
ತನು ಪ್ರಾಣ ಇಷ್ಟಲಿಂಗ ಸಂಬಂಧಿಯಾಗಿ
ಇಂದ್ರಿಯಂಗಳೈದು ಮುಖಂಗಳಾಗಿ
ಅರ್ಪಿಸುವ ಭೇದವನಾರು ಬಲ್ಲರಯ್ಯಾ ಚೆನ್ನಬಸವಣ್ಣನಲ್ಲದೆ?
ಆನಂದಸ್ಥಾನದಲ್ಲಿ ಅನಿಮಿಷಾಕ್ಷರದ ಸಂಯೋಗ ಅರ್ಪಣದ ಭೇದವ
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಚೆನ್ನಬಸವಣ್ಣ ಬಲ್ಲ;
ಮಿಕ್ಕಿನವರಿಗೆ ಸಾಮಾನ್ಯವೆಂಬೆನೆಂಬೆ!

– ಸಿದ್ಧರಾಮೇಶ್ವರ

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಉ ॥ ಸೋಗೆದುರುಂಬು ರಂಜಿಸೆ ಲತಾಂಗಮೆ ಸೊಂಪಡರ್ದೊಪ್ಪೆ ಮಾಣದಿಂ ।
ಬಾಗಿರೆ ಬಾಳೆನುಣ್ದೊಡೆ ಮನಂಬುಗೆ ಗುಚ್ಛಪಯೋಧರಂ ಬೆಡಂ ॥
ಗಾಗಿ ವಿರಾಜಿಸಿರ್ಪ ಬನಲಕ್ಷ್ಮಿಗೆ ಭೂರಮೆ ತೋರ್ಪ ದರ್ಪಣಂ ।
ಪೂಗಳನಪ್ಪುದಲ್ಲದೊಡೆ ತತ್ಪ್ರತಿಬಿಂಬಮದಲ್ಲಿ ತೋರ್ಕುಮೇ ॥ ೬೧ ॥

**ಟೀಕೆ ॥** ಸೋಗೆದುರುಂಬು – ನವಿಲೆಂಬ, ತುರುಂಬು – ರಂಜಿಸೆ, ಲತಾಂಗಮೆ – ಬಳ್ಳಿಯೆಂಬ ಮೈಯ್ಯೆ, ಸೊಂಪಡರ್ದು – ಸುಖವಂ ತಾಳಿ ಒಪ್ಪೆ, ಮಾಣದೆ – ಬಿಡದೆ, ಬಾಳೆನುಣ್ದೊಡೆ – ಬಾಳೆಯ ಮರವೆಂಬ ನುಣ್ಣಗಿರುವ ತೊಡೆಯು, ಯಿಂಬು – ಹಿತವು, ಆಗಿರೆ ಗುಚ್ಛಪಯೋಧರ – ಗೊಂಚಲೆಂಬ ಮೊಲೆಯು, ಬೆಡಂಗಾಗಿ – ಆಶ್ಚರ್ಯಕರವಾಗಿ, ವಿರಾಜಿಸಿ – ಬೆಳಗಿ, ಇರ್ಪ ವನಲಕ್ಷ್ಮಿಗೆ – ಭೂರಮೆಯು ತೋರ್ಪ, ದರ್ಪಣಂ – ಕನ್ನಡಿಯು, ಪೂಗಳನು – ಕಮಲಾಕರವು, ಅಪ್ಪುದು – ಆಗುವುದು, ಅಲ್ಲದೊಡೆ ಕೊಳವೆ ಕನ್ನಡಿಯಲ್ಲದಿದ್ದರೆ, ತತ್ಪ್ರತಿಬಿಂಬಮದು – ಆ ವನದಿ ಪಡಿನೆಳಲು, ಅಲ್ಲಿ – ಕೊಳದಲ್ಲಿ ತೋರ್ಕುಮೆ – ತೋರಿತೇ.

**ತಾ॥** ವನವೆಂಬುವದು ಲಕ್ಷ್ಮೀದೇವಿಯ ಹಾಗಿತ್ತು. ಲಕ್ಷ್ಮಿಗೆ ಸೋಗೆಯ ಹಾಗೆ ತುರುಬು, ಲತೆಯ ಹಾಗೆ ಅಂಗವು, ಬಾಳೆಯ ಹಾಗೆ ತೊಡೆ, ಗುಚ್ಛದ ಹಾಗೆ ಮೊಲೆ, ವನಕ್ಕೆ ಸೋಗೆಯೇ ತುರುಬು, ಲತೆಯೆ ಅಂಗ, ಬಾಳೆಯೇ ತೊಡೆ, ಗುಚ್ಚವೇ ಪಯೋಧರ, ಹೀಗೆ ವನಪರವಾಗಿ ರೂಪಕಾಲಂಕಾರವು. ಲಕ್ಷ್ಮಿಪರವಾಗಿ ಉಪಮಾಲಂಕಾರವು. ರೂಪಕ ಸಮಾಸದಿಂದಲೂ ಉಪಮಿತ ಸಮಾಸದಿಂದಲೂ ಹೇಳಲ್ಪಟ್ಟಿದೆಯಾಗಿ ವನಕ್ಕೂ ಲಕ್ಷ್ಮಿಗೂ ಅಭೇದವಾಗಿ ವನವೇ ಲಕ್ಷ್ಮಿಯೆಂದು ಬಣ್ಣಿಸಲ್ಪಟ್ಟಿತು. ಅವಳಿಗೆ ಭೂರಮೆ, ಭೂಮಿಯೆಂಬ ಲಕ್ಷ್ಮಿಯು ಪೂಗಳವೆಂಬ ಕನ್ನಡಿಯನ್ನು ತೋರಿಸಿದಳು. ಪೂಗಳಶವು ಕನ್ನಡಿಯಾದ್ದರಿಂದಲೆ ಕೊಳದಲ್ಲಿ ವನದ ಪಡಿನೆಳಲ ತೋರುತ್ತಿದೆಯೆಂದು ಕೊಳದಲ್ಲಿ ದರ್ಪಣತ್ವವನ್ನು ಆರೋಪಿಸಿ ಸಮರ್ಥಿಸಿದ್ದರಿಂದ ಸಮರ್ಥನಾಲಂಕಾರವು.

ಕಂ॥ ಗುರು ಕುಜ ಸುಮನಸ್ಸುರಭಿ ।
ಸ್ಫುರಿತ ಪ್ರಮದಾಳಿ ಮಂಜುಘೋಷಾನ್ವಿತಮ ॥

ಚ್ಚರಿವೆರಸಿದ ಗಿರಿವನಮದು ।
ಸುರವನಮನೆ ಗಂಧವಾಹ ಪುನ್ನಾಗಯುತಂ ॥ ೬೨ ॥

**ಟೀಕೆ ॥** ಗಿರಿವನಮದು – ಆ ಇಂದ್ರಕೀಲದ ವನವು, ಸುರಪನನೆ – ದೇವಲೋಕ ನಂದನವೊ ಎಂಬಂತೆ, ಗುರು – ದೊಡ್ಡ, ಕುಜ–ಮರಗಳಿಂದ, ಸುಮನಃ – ಪುಷ್ಪಗಳ, ಸುರಭಿಪರಿಮಳದಿಂದ, ಸ್ಫುರಿತಂ – ತೋರುವುದು, ಗುರು – ಬೃಹಸ್ಪತಿ, ಕುಜ – ಅಂಗಾರಕ, ಸುಮನಸ್ – ದೇವರ್ಕ್ಕಳು, ಸುರಭಿ ಕಾಮಧೇನು ಇವುಗಳಿಂದ ಸ್ಫುರಿತಂ – ಹೊಳೆಯುವದು, ಪ್ರಮದಾಳಿ – ಹೆಚ್ಚು ಮದವುಳ್ಳ ತುಂಬಿಗಳ, ಮಂಜು – ಮನೋಹರವಾದ, ಘೋಷ – ಝೇಂಕಾರದಿಂದ, ಅನ್ವಿತಂ – ಕೂಡಿದ್ದು, ಪ್ರಮದಾ – ಸ್ತ್ರೀಯರ, ಅಳಿ – ಸಾಲುಳ್ಳ, ಮಂಜುಘೋಷ – ಮಂಜುಘೋಷೆ ಎಂಬ ಅಪ್ಸರೆಯಿಂದ, ಅನ್ವಿತಂ – ಕೂಡಿದ್ದು, ಗಂಧವಾಹ – ಗಾಳಿಯಿಂದಲೂ, ಪುನ್ನಾಗ – ಸುರಹೊನ್ನೆ ಮರಗಳಿಂದಲೂ, ಯುತಂ – ಕೂಡಿದ್ದ, ಪುನ್ನಾಗ – ಗಂಡಾನೆಯಾದ ಐರಾವತದಿಂದಲೂ, ಯುತಂ – ಕೂಡಿದ್ದು, ಅಥವಾ ವನವು, ಪುನ್ನಾಗ – ಪುರುಷಶ್ರೇಷ್ಠರಿಂ ಯುತವಾದ್ದು, ಅಚ್ಚರಿವೆರಸಿತು – ಆಶ್ಚರ್ಯದಿಂದ ಕೂಡಿತು, 'ವೆರಸಿದ' ಎಂದು ಗಿರಿವನಕ್ಕೆ ವಿಶೇಷಣವಾಗಿರೆ ಕೆಲವರ ಪಕ್ಷವಾಗಿದೆ.

**ತಾ ॥** ಇಂದ್ರಕೀಲವನವು ಇಂದ್ರಲೋಕದ ವನವೋ ಎಂಬಂತೆ ಶೋಭಿಸಿತೆಂದು ಪ್ರತಿ ವಿಶೇಷಣಕ್ಕು, ಉಭಯಾರ್ಥಗಳಿರುವದರಿಂದ ಶ್ಲೇಷಮೂಲಕೋತ್ಪ್ರೇಕ್ಷಾಲಂಕಾರವು ॥ ೬೨ ॥

ಚಂ ॥ ಸುರಸ ಸರೋಜ ಕೈರವ ವಿರಾಜಿಸರೋವರದಿಂ ಮಹಾಫಲೋ ।
ತ್ಕರಪರಿನಮ್ರಭೂಜತತಿಯಿಂ ಪ್ರಮದಾಳಿಸಮುಲ್ಲಸಲ್ಲತಾಂ ॥
ತ ರುಚಿರಕುಂಜಪುಂಜದಿನಲಂಕೃತಿವೆತ್ತ ಪವಿತ್ರಸತ್ರಬಂ ।
ಧುರತರಮೊಪ್ಪುಗುಂ ಸುರಭಿಮಂದಮರುತ್ಪ್ರಯುತಂ ತಪೋವನಂ ॥

**ಟೀಕೆ ॥** ಸುರಸ – ಒಳ್ಳೆಯ ರಸವುಳ್ಳ, ಸರೋಜ – ತಾವರೆಯಿಂದಲೂ, ಕೈರವ – ಬಿಳುನೈದಿಲೆಯಿಂದಲೂ, ವಿರಾಜಿ – ಹೊಳೆಯುತ್ತಿರುವ, ಸರೋವರದಿಂ ಸರೋವರದಿಂದಲೂ, ಮಹಾಫಲೋತ್ಕರ – ಹೆಚ್ಚು ಫಲಭಾರದಿಂದ, ಪರಿನಮ್ರ – ಬಗ್ಗಿದ, ಭೂಜತತಿಯಿಂ – ವೃಕ್ಷಸಮೂಹದಿಂದಲೂ, ಪ್ರಮದಾಳಿ – ಮದಿಸಿದ ತುಂಬಿವಿಂಡಿನಿಂದ, ಸಮುಲ್ಲಸತ್ – ಚನ್ನಾಗಿ ಪ್ರಕಾಶಿಸುವ, ಲತಾಂತ – ಪುಷ್ಪಗಳಿಂದ, ರುಚಿರ – ಮನೋಹರವಾದ, ಕುಂಜ – ಹೊದರುಮನೆಗಳ, ಪುಂಜದಿಂ – ಗುಂಪಿನಿಂದಲೂ, ಅಲಂಕೃತಿವೆತ್ತ – ಅಲಂಕಾರವನ್ನು ಪಡೆದು, ಪವಿತ್ರಸತ್ರ – ಪರಿಶುದ್ಧವಾದ ಯಜ್ಞದಿಂದ, ಬಂಧುರಂ – ಸುಂದರವಾದ, ಸುರಭಿಮಂದಮರುತ್ಪ್ರಯುತಂ – ಪರಿಮಳಿಸುವ ಕಿರುಗಾಳಿಯಿಂದ ಕೂಡಿದ, ತಪೋವನಂ – ತಪೋಯೋಗ್ಯವಾದ ತೋಟವು, ಒಪ್ಪುಗುಂ – ಶೋಭಿಸುವುದು.

**ತಾ ||** ಆ ವನದಲ್ಲಿ ತಾವರೆ ನೈದಿಲೆ ಕೊಳಗಳೂ, ಫಲವೃಕ್ಷಗಳೂ, ಸರಸ ಪುಷ್ಪಲತಾ ಗೃಹಗಳೂ, ಪರಿಮಳದ ಕಿರುಗಾಳಿಯೂ ಇರುವದರಿಂದ ತಪೋಯೋಗ್ಯವಾಗಿ, ಅಲ್ಲಿ ಪವಿತ್ರವಾದ ಯಜ್ಞಕಾರ್ಯ ನಡೆಯುತ್ತಿದೆ. (ಉದಾತ್ತಾಲಂಕಾರ) ||

ಉ|| ಪೂಗಿಡುಗಳ್ಗೆ ನೀರೆರೆವ ಪುಷ್ಪಕದಂಬಮನೆಯ್ದೆ ಕೋದ ಚೆ ।
ಲ್ವಾಗಿರೆ ದಂಡೆಗಟ್ಟುವ ಶಿವಾರ್ಚನೆಗರ್ಘ್ಯಜಲಂಗಳೀವ ನೀ ||
ಡಾಗದೆ ಸಾಧನಂಗುಡುವ ದಟ್ಟಮರಳ್ಚುವ ದೀಪವರ್ತಿಯುಂ ।
ಸಾಗಿಪ ತಾಪಸೇಂದ್ರರ ಕುಮಾರಿಯರೊಪ್ಪುಗುಮಲ್ಲಿ ಸಂತತಂ || ೬೪ ||

**ಟೀಕೆ ||** ಪೂಗಿಡುಗಳ್ಗೆ – ಹೂವಿನ ಗಿಡಗಳಿಗೆ, ನೀರನ್ನು ಎರೆವ – ಹುಯ್ಯುವ, ಪುಷ್ಪಗಳ, ಕದಂಬಕಮನೆ – ರಾಸಿಯನ್ನೆ, ಎಯ್ದೆ – ಚನ್ನಾಗಿ, ಕೋದು – ಕುಯ್ದು ಅಥವಾ ಪೋಣಿಸಿ, ಚೆಲ್ವಾಗಿರೆ – ಚೆನ್ನಾಗಿರುವಂತೆ, ದಂಡೆಗಟ್ಟುವ ಶಿವಾರ್ಚನೆಗೆ – ಶಿವಪೂಜೆಗೆ, ಅರ್ಘ್ಯಜಲಂಗಳು – ಹಸ್ತೋದಕಗಳನ್ನು, ಈವ – ಕೊಡುವ, ನೀಡಾಗದೆ – ತಡೆಯಾಗದೆ, ಸಾಧನಂಗುಡುವ – ಉಪಕರಣಗಳನ್ನು ಒದಗಿಸುವ, ದಟ್ಟಂ – ಸಾಂದ್ರವಾಗಿ, ಅರಳ್ಚುವ – ಪರಿಕರಗಳನ್ನು ಹರಡಿಸುವ, ದೀಪವರ್ತಿಯುಂ – ದೀವಿಗೆಯ ಬತ್ತಿಯನ್ನು, ಮುಂದಕ್ಕೆ ಸಾಗಿಪ – ತಳ್ಳುವ, ತಾಪಸೇಂದ್ರರ ಕುಮಾರಿಯರು – ಋಷಿಪುತ್ರಿಯರು, ಅಲ್ಲಿ – ಇಂದ್ರಕೀಲವನದಲ್ಲಿ, ಸಂತತಂ – ಯಾವಾಗಲೂ, ಒಪ್ಪುಗುಂ – ಒಪ್ಪುವರು (ನಿತ್ಯಕ್ರಿಯಾಪದವು).

**ತಾ ||** ಆ ವನದೊಳಗೆ ರುಷಿಪುತ್ರಿಯರು ಕೆಲವರು ಪುಷ್ಪವೃಕ್ಷಗಳಿಗೆ ನೀರೆರೆಯುವರು, ಕೆಲವರು ಹೂವನ್ನು ಕೊಯ್ದು ಶಿವಪೂಜೆಗೆ ದಂಡೆಗಟ್ಟುವರು, ಕೆಲವರು ಅಘ್ರ್ಯೋದಕಗಳನ್ನು ತರುವರು, ಕೆಲವರು ಪೂಜಾಸಾಧನಗಳನ್ನು ಅಣಿ ಮಾಡುವರು, ಮತ್ತೆ ಕೆಲವರು ದೀವಿಗೆಯನ್ನು ಬೆಳಗುವರು, ಈ ಮೇರೆ ಎಲ್ಲರೂ ಶಿವಾರಾಧನದ ಕೈಂಕರ್ಯವನ್ನು ಕಲಿಯುತಿರುವರು (ಸ್ವಭಾವೋಕ್ತ್ಯಲಂಕಾರವು) || ೬೪ ||

ಮ|| ಸ್ರ|| ಪಸಿದೈತಂದುಣ್ಬುದಾ ಪೆಣ್ಬುಲಿಯ ಮೊಲೆಯನಲ್ಲಿರ್ದ ಸಾರಂಗ ಶಾಬ ।
ದ್ವಿ ಶಿರಂ ತಾಯ್ದಪ್ಪಿ ಪಾಯ್ದೆಂಟಡಿಗೆ ಕುಟಿಕೆನೊಲ್ದೂಡಿಗೆ ದಂತಿಪೋತ್ರ ಪ್ರ ||
ಸರಕ್ಕಂಗಾಲ್ಗಳೋಳುಕ್ಕರಿದೊಡುಗರ್ಗಳಿಂ ತಿರ್ದುಗುಂ ಸಿಂಹಮದು ।
ಬ್ಬಸಮಂ ಸರ್ಪಾರ್ಭಕಕ್ಕಾತಪದೆ ತೊಲಗಿಕುಂ ಭರ್ಹಿಪಿಂಬರ್ಹಿಬೃಂದಂ || ೬೫ ||

**ಟೀಕ ||** ಅಲ್ಲಿರ್ದ ಸಾರಂಗಶಾಬಂ – ಜಿಂಕೆಯ ಮರಿಯು ಪಸಿದು, ಐತಂದು– ಬಂದು, ಆ ಪೆಣ್ಬುಲಿಯ – ಹೆಣ್ಣು ಹುಲಿಯ, ಮೊಲೆಯುಂ, ಉಣ್ಬುದು – ಉಣ್ಣುವುದು, ದ್ವಿಶಿರಂ – ಎರಡು ತಲೆಗಳುಳ್ಳದ್ದು, ಗಂಡಭೇರುಂಡದ ಹಕ್ಕಿಯೂ, ತಾಯಿ ತಪ್ಪಿ ಪಾಯ್ದೆ – ಹೋದ, ಎಂಟಡಿಗೆ – ಶರಭಕ್ಕೆ, ಕದುಟುಕನು – ಬಾಯುತ್ತವನ್ನು ಒಲ್ದು, ಊಡಿಗುಂ – ಉಣಿಸುವದು, ಸಿಂಹಂ ದಂತಿಪೋತ – ಆನೆಮರಿಗಳ, ಪ್ರಸರಕ್ಕೆ – ಗುಂಪಿಗೆ,

ಅಂಗಾಲ್ಗಲೋಳ್ – ಮುಳ್ಳುಮುರಿದೊಡೆ ಉಗುರ್ಗಳಿಂ, ತೀರ್ಚುದುಂ – ತಿದ್ದುವದು, ಸರ್ಪಾರ್ಭಕಕ್ಕೆ – ಹಾವಿನ ಮರಿಗೆ, ಆತಪದೆ – ಬಿಸಿಲಿನಿಂದ ಆದ, ಉಬ್ಬಸಮಂ– ಉಬ್ಬಸದಿಂದ, ಬರ್ಹಿವೃಂದಂ – ನವಿಲುಗಳ ಗುಂಪು, ಬರ್ಹವಿಂ – ಬಾಲದ ಗರಿಯಿಂದ, ತೊಲಗಿಕುಂ – ತಪ್ಪಿಸುವದು.

**ತಾ ॥** ವೈರವಿಲ್ಲದ ಮುನಿಗಳ ಪ್ರಭಾವದಿಂದ ಅವರ ಆಶ್ರಮದಲ್ಲಿ ಜಿಂಕೆಮರಿ ಹುಲಿಯ ಮೊಲೆಯುಣ್ಣುತ್ತೆ, ಗಂಡಭೇರುಂಡವು ಶರಭದ ಮರಿಗೆ ಆಹಾರ ಕೊಡುತ್ತೆ ಆನೆಮರಿಯ ಕಾಲಿನಲ್ಲಿ ಮುರಿದ ಮುಳ್ಳನ್ನು ಸಿಂಹವು ತನ್ನ ಉಗುರಿನಿಂದ ತೆಗೆಯುತ್ತೆ, ಬಿಸಿಲಿನಲ್ಲಿ ಬೇಯುವ ಸರ್ಪದ ಮರಿಗೆ ನವಿಲು ತನ್ನ ಗರಿಯಿಂದ ನೆಳಲನ್ನುಂಟುಮಾಡುತ್ತೆ, ಹೀಗೆ ಸಹಜದ್ವೇಷಿಗಳಾದ ಜಂತುಗಳು ಕೂಡಾ ನಿರ್ವೈರವಾಗಿ ಪರಸ್ಪರೋಪಕಾರಮಂಗೈಯುತ್ತಿರುವವು ಎಂಬುದರಿಂದ ತಪೋವನ ಮಹಿಮೆಯನ್ನು ಬಣ್ಣಿಸಲಾಗಿದೆ. (ಅತಿಶಯೋಕ್ತ್ಯಲಂಕಾರವು) ॥ ೬೫ ॥

ಕಂ॥ ರವಿ ಬಿಸುಗದಿರಂ ಕವಿಯಂ ।
ದವಾಗ್ನಿ ಸವಿಧ ಸ್ಥಳಂಗಳೋಳ್ಮೈದೋರಂ ॥
ಪವನಂ ಬಿರುಬಿಂ ಬೀಸಂ ।
ಆ ವನವರೆಡೆಯಾಡಲಮ್ಮರಾ ಮುನಿವನದೋಳಾ ॥ ೬೬ ॥

**ಟೀಕೆ ॥** ಆ ಮುನಿಗಳ ವನದೋಳ್, ರವಿ – ಸೂರ್ಯನು, ಬಿಸಗದಿರಂ – ಉಷ್ಣ ಕಿರಣವನ್ನು, ಕರೆಯಂ – ಸುರಿಸುವುದಿಲ್ಲ, ದವಾಗ್ನಿ – ಕಾಡುಕಿಚ್ಚು, ಸವಿಧಸ್ಥಳಂಗಳೋಳ್ – ಸಮೀಪ ಸ್ಥಳಗಳಲ್ಲಿ, ಮೈದೋರಂ – ಕಾಣಿಸುವದಿಲ್ಲ. ಪವನಂ – ಗಾಳಿಯು, ಬಿರುಬಿಂ – ಬಲವಾದ ವೇಗದಿಂದ, ಬೀಸಂ – ಬೀಸುವದಿಲ್ಲ, ಜವನವರು – ಯಮನ ಕಡೆಯವರು, ಎಡೆಯೊಡಲು ಅಮ್ಮರು – ಸಂಚರಿಸಲಾರರು.

**ತಾ ॥** ಆ ವನದಲ್ಲಿ ಮುನಿಗಳಿಗೆ ತಪೋವಿಘ್ನವಾದೀತೆಂದು ಹೆದರಿ, ಸೂರ್ಯಾಗ್ನಿ ವಾಯುಗಳು ಕೂಡಾ ಉಪದ್ರವಂ ಮಾಡದೆ ಅನುಕೂಲರಾಗಿ ಪ್ರವರ್ತಿಸುವರು. (ಅತಿಶಯೋಕ್ತ್ಯಲಂಕಾರವು) ॥ ೬೬ ॥

(ಮುಂದುವರಿಯುವುದು)

# ಶೂನ್ಯಸಂಪಾದನೆಗಳು : ಮರುಚಿಂತನೆ ಮತ್ತು ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು

ಡಾ. ಬಿ. ನಂಜುಂಡಸ್ವಾಮಿ

ಪ್ರಪಂಚದ ಧಾರ್ಮಿಕ ಗ್ರಂಥಗಳಲ್ಲಿ "ಶೂನ್ಯಸಂಪಾದನೆ " ಗ್ರಂಥಕ್ಕೆ ವಿಶೇಷವಾದ ಸ್ಥಾನವಿದೆ. ಇಂತಹ ಮಹತ್ತ್ವದ ಗ್ರಂಥದ ಮೇಲೆ ನೂರಾರು ಲೇಖನಗಳು, ಹತ್ತಾರು ಗ್ರಂಥಗಳು ಬಂದಿವೆ. ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯಸಂಪಾದನೆ ಐದು ಸಂಪುಟಗಳಲ್ಲಿ ಆಂಗ್ಲ ಭಾಷೆಗೆ ಭಾಷಾಂತರಗೊಂಡಿದೆ. ಇಂಗ್ಲಿಷ್ ಬಲ್ಲವರು ಮೂಲ ಕನ್ನಡ ವಚನವನ್ನು ಆಂಗ್ಲ ಭಾಷೆಯಲ್ಲಿ, ಅದರ ಭಾಷಾಂತರವನ್ನು ಕೊಟ್ಟಿರುವುದರಿಂದ ಆಂಗ್ಲ ಭಾಷೆ ಬಲ್ಲವರು ಸ್ವಲ್ಪ ಕಷ್ಟಪಟ್ಟು ಈ ಮಹತ್ತ್ವದ ಗ್ರಂಥವನ್ನು ಅಧ್ಯಯನ ಮಾಡಬಹುದು. ಇತ್ತೀಚೆಗೆ ಮೈಸೂರಿನ ಸುತ್ತೂರು ಮಠದ ಪ್ರಕಾಶನದ ವತಿಯಿಂದಲೂ ಶೂನ್ಯಸಂಪಾದನೆಗೆ ಸಂಬಂಧಪಟ್ಟ ಒಂದೆರಡು ಇಂಗ್ಲಿಷ್ ಪುಸ್ತಕಗಳು ಬಂದಿವೆ. ತೆಲುಗು ಭಾಷೆಗೆ ಲಿಂ॥ ಡಾ. ಜೋಳದರಾಶಿ ದೊಡ್ಡನಗೌಡರಿಂದ ಶೂನ್ಯಸಂಪಾದನೆ ಭಾಷಾಂತರಗೊಂಡಿದೆ. ಇತ್ತೀಚೆಗೆ ಸಿರಿಗೆರೆ ಮಠದಿಂದ ಶೂನ್ಯ ಸಂಪಾದನೆ ಮರಾಠಿ ಭಾಷೆಗೆ ಭಾಷಾಂತರಗೊಂಡಿದೆ. ಕನ್ನಡ ಭಾಷೆ ಬಲ್ಲವರು ಶೂನ್ಯಸಂಪಾದನೆ ಗ್ರಂಥವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅದರ ಮಹತ್ತ್ವವನ್ನು ವಿಶ್ವಕ್ಕೆ ಸಾರಬೇಕಾಗಿದೆ. ಈಗ ನಮಗೆ ಲಭ್ಯವಿರುವ ನಾಲ್ಕು ಶೂನ್ಯಸಂಪಾದನೆಗಳು ಮುದ್ರಣವಾಗಿ ಅಧ್ಯಯನಕ್ಕೆ ಲಭ್ಯವಾಗಿವೆ. ದ್ವೈತ ಸಿದ್ಧಾಂತವನ್ನು ಅಧ್ಯಯನ ಮಾಡುವವರು "ಶ್ರೀಮನ್ ನ್ಯಾಯಸುಧಾ" ಗ್ರಂಥದ ಬಗ್ಗೆ ಅಪರಿಮಿತವಾದ ಗೌರವ, ಶ್ರದ್ಧೆ ಇಟ್ಟುಕೊಂಡಿರುತ್ತಾರೆ. ಸುಧಾ ಗ್ರಂಥವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಗ್ರಂಥದ ಬಗ್ಗೆ ಬಂದಿರುವ ಸಂಸ್ಕೃತ ಟೀಕೆಯ ಸಹಾಯದಿಂದ ಭಕ್ತರಿಗೆ ತಲಸ್ಪರ್ಶಿಯಾಗಿ ತಿಳಿಸಲು ವಿದ್ವಾಂಸರು ಪ್ರಯತ್ನ ಪಡುತ್ತಾ ಇದ್ದಾರೆ. ಅಂತಹ ಸುಧಾಗ್ರಂಥಕ್ಕೆ ಸರಿಸಮಾನವಾದ ಇನ್ನೊಂದು ಗ್ರಂಥವೆಂದರೆ 'ಶೂನ್ಯಸಂಪಾದನೆ'. ಈ ಗ್ರಂಥವನ್ನು ಕನ್ನಡ ಬಲ್ಲ, ಎಲ್ಲಾ ಸಮಾಜದ ವಿದ್ವಾಂಸರು ಅದರಲ್ಲೂ ಸಂಸ್ಕೃತ ವಿದ್ವಾಂಸರು ಅಧ್ಯಯನ ಮಾಡಬೇಕು. ಆ ರೀತಿ ಅವರೆಲ್ಲಾ ಚಿಕಿತ್ಸಕ ಬುದ್ಧಿಯಿಂದ "ಶೂನ್ಯಸಂಪಾದನೆ" ಗ್ರಂಥವನ್ನು ಅಧ್ಯಯನ ಮಾಡಿ ಎಲ್ಲಾ ಭಾಷೆಗಳಲ್ಲಿ ವಿಸ್ತೃತವಾದ ಪರಿಚಯ ಲೇಖನವನ್ನು ಬರೆಯಬೇಕು.

ಕನ್ನಡ ನಾಡಿನ ಹಿರಿಯ ವಿದ್ವಾಂಸರು, ಘನ ಪಂಡಿತರೂ ಆದ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಕಳೆದ ಹಲವು ವರ್ಷಗಳಿಂದ ಶೂನ್ಯಸಂಪಾದನೆಯನ್ನು

ಅನುಸಂಧಾನ ಮಾಡಿಕೊಂಡು ಬಂದಿದ್ದರು. ಈ ಬಗ್ಗೆ ಹಲವು ಗ್ರಂಥಗಳನ್ನು ಬರೆದಿದ್ದರು. ಇವರೆಗೂ ಮುದ್ರಣವಾಗದಿದ್ದ ಹಲಗೆಯಾರ್ಯನ ಶೂನ್ಯಸಂಪಾದನೆಯನ್ನು ಡಾ. ಎಸ್. ವಿದ್ಯಾಶಂಕರ ಜೊತೆಗೂಡಿ ಅವರು ಸಂಪಾದಿಸಿಕೊಟ್ಟಿದ್ದಾರೆ. ಶೂನ್ಯಸಂಪಾದನೆ ಕುರಿತು ಹಲವು ಗ್ರಂಥಗಳು ಮತ್ತು ಲೇಖನಗಳನ್ನು ಬರೆದು, ಬಸವಾದಿ ಪ್ರಮಥರ ವಚನಗಳ ವಿಶ್ಲೇಷಣೆ ಮಾಡಿದ್ದಾರೆ. ಈ ಬಗ್ಗೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ ಸೇವೆ ಪ್ರಶ್ನಾತೀತವಾದದ್ದು. "ಶೂನ್ಯಸಂಪಾದನೆ" ಗ್ರಂಥವನ್ನು ಅನುಸಂಧಾನ ಮಾಡಲು ಪ್ರಾರಂಭವಾದ ಘಟನೆಯನ್ನು ಲೇಖಕರ ಮಾತಿನಲ್ಲಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರೆ ಪ್ರಸ್ತಾಪಿಸಿದ್ದಾರೆ

ಪರಮಪೂಜ್ಯ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಡಾ. ಶ್ರೀ ಶಿವಕುಮಾರಸ್ವಾಮಿಗಳು ತಮ್ಮ ಹಳೆಯ ಮಠದ ಪ್ರಾಂಗಣದಲ್ಲಿ ಪ್ರತಿ ಹುಣ್ಣಿಮೆ ದಿನ ಸಂಜೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ ಉಪನ್ಯಾಸವನ್ನು ಏರ್ಪಡಿಸಿದ್ದರು. ಒಟ್ಟು ಹದಿಮೂರು ಹುಣ್ಣಿಮೆಯಲ್ಲಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದರು. ಈ ಸೇವೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ ಉಪನ್ಯಾಸದ ನಂತರ ಲಿಂ॥ ಸಂಗಮದ ಅವರು, ಅನಂತರ ಪ್ರೊ. ರಾಚಪ್ಪನವರು, ಶಿವಾನುಭವಿ ಎಂ. ಚಂದ್ರಪ್ಪನವರು ನಡೆಸಿಕೊಟ್ಟರು.

"ಶೂನ್ಯಸಂಪಾದನೆಗಳು ಮರುಚಿಂತನೆ" ಗ್ರಂಥ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ "ಶ್ರೀ ಬಸವೇಶ್ವರ ಪೀಠದ ಬೆಳ್ಳಿಹಬ್ಬದ ಪ್ರಕಟಣೆ". ಶ್ರೀ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀ ಬಸವೇಶ್ವರ ಪೀಠದಿಂದ 2003ರಲ್ಲಿ ಪ್ರಕಟವಾದ XI+ 111 ಪುಟದ ಪುಸ್ತಕ, ಬೆಳ್ಳಿಹಬ್ಬದ ಪ್ರಕಟಣೆಗಳ ಸಂಪಾದಕರು ಡಾ. ವೀರಣ್ಣ ರಾಜೂರ ಮತ್ತು ಶ್ರೀ ಬಸವರಾಜ ಹೂಗಾರರವರು. 'ಲೇಖಕರ ಮಾತು' ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಅವನ್ನು ಯಥಾವತ್ತಾಗಿ ಕೊಡಲಾಗಿದೆ.

"ಶೂನ್ಯಸಂಪಾದನೆಗಳು : ಒಂದು ಮರುಚಿಂತನೆ" ಈ ಗ್ರಂಥ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ನೀಡಿದ ಮೂರು ವಿಶೇಷೋಪನ್ಯಾಸಗಳ ತಿರುಳನ್ನು ಒಳಗೊಂಡಿದೆ.

ಈ ವಿಶೇಷೋಪನ್ಯಾಸಗಳ ಯೋಜನೆಯಲ್ಲಿ ನಾನು ತೊಡಗಿಕೊಂಡದ್ದು ಒಂದು ಯೋಗಾಯೋಗ. ಶ್ರೀ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರಸ್ವಾಮಿಗಳ ಅಪೇಕ್ಷೆಯಂತೆ ಶೂನ್ಯಸಂಪಾದನೆಗಳನ್ನು ಕುರಿತು ಹದಿಮೂರು ಹುಣ್ಣಿಮೆಗಳಲ್ಲಿ ವಿಶೇಷೋಪನ್ಯಾಸಗಳನ್ನು ನೀಡಿದೆ. ಕೊನೆಯ ದಿನದ ಉಪನ್ಯಾಸದ ಮುಖ್ಯ ಅತಿಥಿ ಡಾ. ಜಿ.ಎಸ್. ಕಾಪಸೆಯವರು.

ಭಾಷಣ ಮುಗಿದಾದ ಮೇಲೆ ಅವರು ಧಾರವಾಡದಲ್ಲಿ ಶೂನ್ಯಸಂಪಾದನೆಯನ್ನು ಕುರಿತು ಭಾಷಣವೊಂದನ್ನು ನೀಡಲು ಆಹ್ವಾನಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಭೆಗೆ ಹೋಗಿದ್ದ ನಾನು ಮಿತ್ರ ಡಾ. ಕಲುಬುರ್ಗಿ ಹಾಗೂ ಡಾ.ಜಿ.ಎಸ್.

ಕಾಪಸೆಯವರನ್ನು ಕಂಡಾಗ ಡಾ. ಕಲಬುರ್ಗಿಯವರು ನಮ್ಮ ಕನ್ನಡ ಅಧ್ಯಯನ ಪೀಠದಲ್ಲೇ ಏಕೆ ಮೂರು ವಿಶೇಷೋಪನ್ಯಾಸಗಳನ್ನು ನೀಡಬಾರದೆಂದು ಕೇಳಿದರು. ಅಲ್ಲೇ ಇದ್ದ ಅಧ್ಯಯನ ಪೀಠದ ಅಧ್ಯಕ್ಷರಾದ ಡಾ. ವೀರಣ್ಣ ರಾಜೂರರೂ ಆಗ್ರಹಪಡಿಸಿದರು. ಹೀಗಾಗಿ ಈ ಉಪನ್ಯಾಸಗಳನ್ನು ನೀಡಿ ಈಗ ಗ್ರಂಥರೂಪದಲ್ಲಿ ಕೊಡುತ್ತಿದ್ದೇನೆ.

ಈ ಗ್ರಂಥಕ್ಕೆ ಮೂಲ ಪ್ರೇರಣೆ ಶ್ರೀ ಸಿದ್ಧಗಂಗಾ ಮಠದಲ್ಲಿ ನಾನು ನೀಡಿದ ಹದಿಮೂರು ವಿಶೇಷ ಉಪನ್ಯಾಸಗಳು. ಮತ್ತೆ ಈ ಬಗೆಗೆ ಅಧ್ಯಯನ ಆರಂಭಿಸುತ್ತಿದ್ದಂತೆ ಅಗತ್ಯವಾದ ಸಾಮಗ್ರಿಗಳನ್ನೊದಗಿಸಿದವರು. ಡಾ. ಎಸ್. ವಿದ್ಯಾಶಂಕರ ಹಾಗೂ ವಿದ್ವಾಂಸರಾದ ಎಸ್. ಶಿವಣ್ಣನವರು. ಈ ಗ್ರಂಥದ ಮುದ್ರಣ ಪ್ರತಿಯನ್ನು ಸಿದ್ಧಗೊಳಿಸುವಾಗ ಡಾ. ವಿದ್ಯಾಶಂಕರರು ವಹಿಸಿದ ಆಸಕ್ತಿ ಹಾಗೂ ತೋರಿದ ಅಭಿಮಾನಗಳು ಅವಿಸ್ಮರಣೀಯ" ಎಂದಿದ್ದಾರೆ.

ಪ್ರಕಟಿತ ಕೃತಿಯಲ್ಲಿ ಐದು ವಿಭಾಗಗಳು ಇದ್ದು ಅವು ಕ್ರಮವಾಗಿ 1. ಹಿನ್ನೆಲೆ 2. ಶೂನ್ಯಸಂಪಾದನೆಗಳು ಎಷ್ಟು? ಮತ್ತು ಯಾವುವು? 3. ಒಂದು ನಾಲ್ಕಾಗಲು ಕಾರಣಗಳು 4. ಮೂಲ ಸಂಪಾದನೆ ಮತ್ತು ಪರಿಷ್ಕರಣಗಳಿಗಿರುವ ಸಂಬಂಧ 5. ಧರ್ಮಗ್ರಂಥವೊ? ಸಾಹಿತ್ಯಗ್ರಂಥವೊ? ಮತ್ತು ಅನುಬಂಧ ಇಷ್ಟು ವಿಷಯಗಳನ್ನು ಒಳಗೊಂಡಿದೆ.

**1. ಹಿನ್ನೆಲೆ :** ಬಸವಣ್ಣ ಕಲ್ಯಾಣವನ್ನು ಬಿಡುತ್ತಿದ್ದಂತೆ ಇಡೀ ಚಳುವಳಿ ಮಂಜಿನಂತೆ ಕರಗಿಹೋದ ಆ ಭಯಾನಕ ಸಂಗತಿ ಯಾರನ್ನಾದರೂ ಚಕಿತಗೊಳಿಸುತ್ತದೆ. ಹಾಗೆಯೇ ಬಸವಣ್ಣನಿಲ್ಲದ ಶರಣ ಸಮುದಾಯ ಶ್ರೀಶೈಲ, ಉಳವಿ, ಎಣ್ಣೆಹೊಳೆ, ಕೋಡಿಮಠ, ಚಿಕ್ಕೋಡಿಮಠ, ಶಿವಗಂಗೆ ಮೊದಲಾದ ಕಡೆಗಳಲ್ಲಿ ಹೋಗಿ ಜೀವ ಉಳಿಸಿಕೊಳ್ಳಲು ಹಾಗೂ ವಚನಗಳನ್ನುಳಿಸಿಕೊಳ್ಳಲು ಹೆಣಗಾಡುವ ಪರಿಸ್ಥಿತಿಯೊದಗಿತು. ಈ ಆತಂಕಕ್ಕೆ ಇನ್ನೂ ಬಲವಾದ ಪೆಟ್ಟನ್ನು ನೀಡಿದ್ದು ಮಲ್ಲಿಕಾಫರನ ದಾಳಿ. ಆ ದಾಳಿಯಿಂದ ವಚನ ಸಾಹಿತ್ಯವೇ ಅಲ್ಲದೆ ಮಿಕ್ಕ ಧರ್ಮಸಾಹಿತ್ಯ ಗ್ರಂಥಗಳೂ ವಿಪುಲವಾಗಿ ನಾಶಗೊಂಡವು.

ಹನ್ನೆರಡನೆಯ ಶತಮಾನದ ಶರಣರ ವಚನಗಳು ಹಾಗೂ ಜೀವನ ಸ್ವರ್ಗ ನರಕಗಳ ಕನಸಿಗಾಗಲಿ, ಕೈಲಾಸ, ವೈಕುಂಠಗಳ ಪ್ರಲೋಭನೆಗಾಗಲಿ ಒಳಗಾದುವುಗಳಲ್ಲ. ಲೋಕದ ಅರ್ಥಪೂರ್ಣತೆಯನ್ನು, ದೇಹದ ದೌರ್ಬಲ್ಯ ಹಾಗೂ ಶಕ್ತಿಗಳನ್ನು, ಈ ಜೀವನದ ಸಾಧ್ಯತೆಗಳನ್ನು, ಲೋಭ, ಮೋಹ, ಮದ, ಮಾತ್ಸರ್ಯ, ಕಾಮ, ಕ್ರೋಧಗಳ ಆಳದಲ್ಲಿರುವ ಜೀವಚೈತನ್ಯದ ರಹಸ್ಯಗಳನ್ನು ಅನ್ವೇಷಿಸಲು ಹೊರಟು ಕ್ರಾಂತಿಕಾರಕವಾಗಿದ್ದುವು. ಅಂಥ ಒಂದು ಕ್ರಾಂತಿ ಅರ್ಧದಲ್ಲಿ ನಿಂತಾಗ, ಬಸವಣ್ಣನಂಥ ಪ್ರವಾದಿಯು ದಿಙ್ಮೂಢನಾಗುವಂತಾದಾಗ, ಅಲ್ಲಮಾದಿಗಳ ಹೆಸರೇ ಇಲ್ಲದಂತಾದಾಗ, ಹುಚ್ಚೆದ್ದ ಅಧಿಕಾರಲಾಲಸೆ, ಸಮಯಸಾಧಕತನಗಳಿಗೆ, ಮೂಲಭೂತವಾದಿಗಳು ಕೊಟ್ಟ ಬೆಂಬಲದ ಫಲವಾಗಿ ಮಹತ್ಪ್ರಳಯವೇ ಆಗಿಬಿಟ್ಟಿತು. ಆ ಪ್ರಳಯದಲ್ಲಿ ಶರಣರ ಸಾಹಿತ್ಯಸಾಮಗ್ರಿಗಳು ನಾಶವಾದ ಹಾಗೆ ಶರಣರೂ ತಲೆತಪ್ಪಿಸಿಕೊಳ್ಳುವಂತಾದದ್ದೂ ದುರಂತದ ಕತೆ.

ಆದರೆ ಆ ದುರಂತದ ಬೆನ್ನಲ್ಲಿಯೇ ಕಳೆದುಹೋದ ಕನಸುಗಳನ್ನು, ಕನಸುಗಳಿಗೆ

ಕಾರಣವಾಗಿದ್ದ ಶರಣರ ಬದುಕನ್ನು, ಶರಣರ ಬದುಕಿನ ಭಾಗವಾಗಿದ್ದ ವಚನಸಾಹಿತ್ಯವನ್ನು ಜೊತೆಜೊತೆಗೆ ಪರಂಪರೆಯಾಗಿ ಮಠ–ಮನೆಗಳಲ್ಲಿ ನಡೆಯುತ್ತಿದ್ದ 'ಸೂಳ್ನುಡಿ' ಪರಂಪರೆ ಹಾಗೂ ಸಾಹಿತ್ಯ ಪ್ರಸಂಗಗಳ ಪದ್ಧತಿಗಳನ್ನು ಪ್ರತ್ಯಭಿಜ್ಞಾನ ಮಾಡಿಕೊಳ್ಳಲು ನಡೆದ ಯತ್ನ ಮಾತ್ರ ಅಭೂತಪೂರ್ವವಾದದ್ದು.

ಈ ಯತ್ನಗಳ ಒಂದು ತುದಿಗೆ ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮನಾಥ, ಭೀಮಕವಿಗಳಂಥವರಿದ್ದರೆ, ಇನ್ನೊಂದು ತುದಿಗೆ ಮಠಗಳಲ್ಲಿ ಹಾಗೂ ಸಂಸ್ಕೃತಿ ಸಂರಕ್ಷಕರ ನೆಲೆಗಳಲ್ಲಿ ನಡೆದ ಪ್ರಯತ್ನಗಳ ಪೂರ್ಣ ವಿವರ ನಮಗೆ ದೊರೆಯುವುದು ಕಷ್ಟ. ಆದರೆ ಈ ಕಾಣ್ಕೆಯನ್ನು ಕಂಡರಿಸಿಕೊಳ್ಳುವ ಯತ್ನ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದ ಮೇಲೆ ಗರಿಗೆದರಿಕೊಂಡಿತು. ಒಂದರ್ಥದಲ್ಲಿ ಇವುಗಳೆಲ್ಲ ಹನ್ನೆರಡನೆಯ ಶತಮಾನದ 'ಕನಸನ್ನು' ಕಂಡರಿಸುವ ಬಹುಮುಖಿ ಯತ್ನಗಳು.

ಶೂನ್ಯಸಂಪಾದನೆಯ ಶಿಲ್ಪವನ್ನು ಗಮನಿಸಿದಾಗ ಶರಣರ ಗೋಷ್ಠಿ, ಮಾಹೇಶ್ವರ ಗೋಷ್ಠಿಗಳೇ ಸದ್ಗೋಷ್ಠಿಗಳಾಗಿ ರೂಪಗೊಳ್ಳುವ ಒಂದು ಹಂತದಲ್ಲಿ ಈ ಪರಂಪರೆಯ ಈಗಿನ ಶ್ರೀಮಂತಿಕೆಗೆ ಪೂರಕವಾಗುವ ಅಂಶಗಳು ಮಾತ್ರ ಬಹುಮುಖಿಯಾಗಿರುವಂತೆ ತೋರುತ್ತವೆ.

ಹರಿಹರ ಶರಣರನ್ನು ಕುರಿತು ಬರೆದ ರಗಳೆಗಳು ಮೊದಲು ಇಂಥ ಒಂದು ಪರಂಪರೆಗೆ ಅಗತ್ಯವಾದ ಶರಣರ ಕತೆಗಳನ್ನು ಒಂದೆಡೆ ಕಟ್ಟಿಕೊಟ್ಟುದೇ ಅಲ್ಲದೆ ಅವುಗಳ ಕಥನ ಭಾಗದಲ್ಲಿ ಬಸವ–ಅಲ್ಲಮ, ಅಲ್ಲಮ–ಸಿದ್ಧರಾಮ ಹೀಗೆ ಶರಣರು ಪರಸ್ಪರ ಸಂಧಿಸಿದ ಸಂದರ್ಭಗಳ ನಾಟಕೀಯಾಂಶಗಳನ್ನು ಪ್ರಥಮವಾಗಿ ಸೂಚಿಸಿದ ರಾಘವಾಂಕ, ತನ್ನ ಸಿದ್ಧರಾಮ ಚಾರಿತ್ರದಲ್ಲಿ ಅಲ್ಲಮ ಮತ್ತು ಸಿದ್ಧರಾಮರಿಬ್ಬರೂ ಪರಸ್ಪರ ಮಹಾನುಭಾವರಾಗಿ ಪರಸ್ಪರ ಗೌರವಾದರಗಳನ್ನು ಪಡೆಯುವ ಶರಣರಾಗಿ, ಸಮಾವೇಶವಾಗುವ ನಾಟಕೀಯ ಸಂದರ್ಭವನ್ನು ಕಲಾತ್ಮಕವಾಗಿ ಹಾಗೂ ಔಚಿತ್ಯಪೂರ್ಣವಾಗಿ ಚಿತ್ರಿಸಿದ. ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿಗಳು ಬಸವನ ಬದುಕಿನೊಂದಿಗೆ ಹೆಣೆದುಕೊಂಡ ಶರಣರ ಕತೆಗಳನ್ನು ಕಾವ್ಯಮಯವಾಗಿ ನಿರೂಪಿಸಿದರು. ಬಹುಶಃ ಈ ಎಲ್ಲಾ ಪರಂಪರೆಗಳ ಆಳವಾದ ಅರಿವಿನೊಂದಿಗೆ ಶಿವಗಣಪ್ರಸಾದಿ ಮಹಾದೇವಯ್ಯನ ಪ್ರತಿಭೆ ಅತ್ಯದ್ಭುತವಾಗಿ ಗರಿಗೆದರಿರಬೇಕು. ಒಂದು ಕಡೆಗೆ ಹನ್ನೆರಡನೆಯ ಶತಮಾನದಲ್ಲಿ ಭಾರತವನ್ನೆಲ್ಲಾ ಆಕರ್ಷಿಸಿದ್ದ ಧರ್ಮವೊಂದರ ಬೆಳಕು, ಮತ್ತೊಂದು ಕಡೆ ಆ ಧರ್ಮಕ್ಕೆ ಕಾರಣವಾಗಿದ್ದ ಆಚಾರವೇ ಪ್ರಧಾನವಾಗಿದ್ದ ಶಿವಶರಣರ ಬದುಕು–ಇವುಗಳಿಂದ ದೀಪ್ತವಾಗಿ ಕನ್ನಡದ ಧರ್ಮವಾಗಿ, ವಚನಾಗಮವಾಗಿ, ಶೂನ್ಯಸಂಪಾದನೆ ಮೈತಾಳಿರಬೇಕು. ಹೀಗೆ ಮೈತಾಳುವಾಗಲೇ ಮಹಾದೇವಯ್ಯನ ಧಾರ್ಮಿಕ ಶ್ರದ್ಧೆ ಖಚಿತತೆಗಳು ಪ್ರತಿಭಾಪೂರ್ಣವಾಗಿ ಒಂದು ವಿಶಿಷ್ಟ ಅಭಿವ್ಯಕ್ತಿಯನ್ನು ಸಾಧಿಸಿರಬೇಕು. ಏಕೆಂದರೆ ಪ್ರಜ್ಞಾಪೂರ್ವಕವಾಗಿಯೇ ಆತ ಮುಕ್ತಕವಾದ ವಚನಗಳನ್ನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರುವೆ ಮಾಡಿ

ಸದ್ಗೋಷ್ಠಿ ಕಥಾಪ್ರಸಂಗವನ್ನು ಸಮರ್ಪಿಸಿದುದಾಗಿ ಹೇಳುತ್ತಾನೆ. ಈ ಶರಣರು ಜಗದಾಚಾರ್ಯರು ಆತನಿಗೆ 'ಮಹಾಗಣಂಗಳು' ಶಿವಗಣಂಗಳು. ಮುಂದಿನ ಶೂನ್ಯಸಂಪಾದನೆಕಾರರ ಪಾಲಿಗಂತೂ ಇವರು ಅಮರಗಣಂಗಳು, ಪುರಾತನರು, ಅಖಿಲ ಪುರಾತನರು, ಇಲ್ಲಿ ಬಳಕೆಯಾಗಿರುವ ದ್ರವ್ಯ ಕೇವಲ ವಚನವಾಗಿಲ್ಲ, ವಚನಾಗಮವಾಗಿದೆ. ಶಿವಗುರುವಚನಾಮೃತವಾಗಿದೆ. ಅಂದರೆ ಶೂನ್ಯಸಂಪಾದನೆ 'ಆಗಮವೂ ಅಹುದು; ಅಮೃತವೂ ಅಹುದು, ವೀರಶೈವಾಚಾರ ಸಿದ್ಧಾಂತವೂ ಅಹುದು; ಮತ್ತೆ ಮಹಾನುಭಾವ ಪ್ರಸಂಗಮಂ ಮಾಡಿದ ಸರ್ವಕರಣ ಶೂನ್ಯಸಂಪಾದನೆಯ ಸದ್ಗೋಷ್ಠಿ ಕಥಾಪ್ರಸಂಗ ಕೂಡ ಆದದ್ದು' ಎಂದು ಹೇಳಿರುವ ಮಾತುಗಳನ್ನು ಸಾಕಷ್ಟು ಪ್ರಜ್ಞಾಪೂರ್ವಕವಾಗಿಯೇ ಬಳಸಲಾಗಿದೆಯೆಂದು ತೋರುತ್ತದೆ.

**ಶೂನ್ಯಸಂಪಾದನೆಗಳು ಎಷ್ಟು? ಮತ್ತು ಯಾವವು?:** ಈ ವಿಭಾಗದಲ್ಲಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ವಿವರವಾಗಿ ಚರ್ಚಿಸಿದ್ದಾರೆ. ಪ್ರಾರಂಭದಲ್ಲಿ "ಫ.ಗು. ಹಳಕಟ್ಟಿಯವರು ಸಂಪಾದಿಸಿದ ಗೂಳೂರು ಸಿದ್ಧವೀರಣ್ಣಾಚಾರ್ಯರ ಪ್ರಭುದೇವರ ಶೂನ್ಯಸಂಪಾದನೆ ಪ್ರಕಟವಾದದ್ದು ೧೯೩೦ರಲ್ಲಿ. 'ಗೂಳೂರು ಸಿದ್ಧವೀರಣ್ಣಾಚಾರ್ಯರು ಈ ಶೂನ್ಯಸಂಪಾದನೆ ರಚಿಸಿದ ಪದ್ಧತಿಯು ಹೊಸ ಮಾದರಿಯದಾಗಿರುತ್ತದೆ. ಈ ಪದ್ಧತಿಯನ್ನು ಅವನ ಹಿಂದೆ ಯಾರೂ ಅನುಸರಿಸಿದಂತೆ ತೋರಿಬರುವುದಿಲ್ಲ' ಎಂದು ಹಳಕಟ್ಟಿಯವರು ಅದರ ಪ್ರಸ್ತಾವನೆಯಲ್ಲಿ ಹೇಳಿದ್ದರು. ಅಷ್ಟೇ ಏಕೆ, 1958ರಲ್ಲಿ ಶೂನ್ಯಸಂಪಾದನೆಯ ಪರಿಷ್ಕೃತ ಆವೃತ್ತಿಯನ್ನು ತಂದು, 1997ರಲ್ಲಿ 'ಶೂನ್ಯಸಂಪಾದನೆಯ ಪರಾಮರ್ಶೆ' ಬೃಹದ್ಗ್ರಂಥವನ್ನು ರಚಿಸಿದ ಪ್ರೊ. ಎಸ್.ಎಸ್. ಭೂಸನೂರಮಠ ಅವರು ಕಣ್ಣಲ್ಲಿ ಕಣ್ಣಿಟ್ಟು ನೋಡದಿದ್ದರೆ ಗೂಳೂರು ಸಿದ್ಧವೀರಣ್ಣನೊಬ್ಬನೇ ಶೂನ್ಯಸಂಪಾದನೆಯ ಕರ್ತೃ ಎಂಬ ಭ್ರಮೆಗೆ ಒಳಗಾಗುವಂತೆ ಮಾಡಿದ್ದು ಉಂಟು. ಈ ಹಿನ್ನೆಲೆಯಲ್ಲಿ ನೋಡಿದರೆ 'ಪ್ರಬುದ್ಧ ಕರ್ಣಾಟಕ' ಸಂಪುಟ 15, ಸಂಚಿಕೆ 4ರಲ್ಲಿ ಎಂ.ಆರ್. ಶ್ರೀನಿವಾಸಮೂರ್ತಿಯವರು ಬರೆದ "ಶೂನ್ಯಸಂಪಾದನೆಗಳು" ಎಂಬ ಕಿರುಲೇಖನ ಬಹಳ ಮುಖ್ಯವಾದದ್ದು. ಈ ಲೇಖನದಲ್ಲಿ ಅವರು "ಶೂನ್ಯಸಂಪಾದನೆ" ಎಂಬ ಸಂಕಲನಗಳು ಐದು ಇರಬೇಕೆಂದು ಹೇಳಿದ್ದಾರೆ. ಉತ್ತಂಗಿ ಚನ್ನಪ್ಪನವರದೂ ಇದೇ ರೀತಿಯ ಅಭಿಪ್ರಾಯವಾಗಿದೆ. ಡಾ. ಆರ್.ಸಿ. ಹಿರೇಮಠರ ಅಭಿಪ್ರಾಯವೂ ಸಂಖ್ಯೆ ಹಾಗೂ ಸಂಪಾದಕರ ಹೆಸರುಗಳ ವಿಚಾರದಲ್ಲಿ ಇದೇ ರೀತಿಯಾಗಿದ್ದರೂ ಅವುಗಳ ಕಾಲಾನುಕ್ರಮಣಿಕೆಯಲ್ಲಿ ಸ್ವಲ್ಪ ಭಿನ್ನವಾಗುತ್ತದೆ. ಅಂದರೆ, ಹಲಗೆಯಾರ್ಯನೇ ಕೊನೆಯ ಶೂನ್ಯಸಂಪಾದನಕಾರನಾಗುತ್ತಾನೆ.

ಶೂನ್ಯಸಂಪಾದನೆಗಳ ಸಂಖ್ಯೆ ಹಾಗೂ ಕರ್ತೃಗಳ ಬಗೆಗೆ ನಿರ್ಣಾಯಕ ಎನ್ನಬಹುದಾದ ಅಭಿಪ್ರಾಯ ಮೂಡಿಬಂದದ್ದು ಡಾ. ಎಂ. ಚಿದಾನಂದಮೂರ್ತಿ ಅವರ 'ಶೂನ್ಯಸಂಪಾದನೆಯುನ್ನು ಕುರಿತು' ಎಂಬ ಗ್ರಂಥದಲ್ಲಿ. ಇದರ ಪ್ರಕಾರ ಶೂನ್ಯಸಂಪಾದನೆಗಳು ನಾಲ್ಕು, ಮೊದಲನೆಯದು ಶಿವಗಣಪ್ರಸಾದಿಯದು, ಎರಡನೆಯದು

ಹಲಗೆಯಾರ್ಯನದು, ಮೂರನೆಯದು ಗುಮ್ಮಳಾಪುರದ ಸಿದ್ಧಲಿಂಗ ಯತಿಯದು ಮತ್ತು ನಾಲ್ಕನೆಯದು ಸಿದ್ಧವೀರಣ್ಣನದು. ಮುಂದೆ ಇದೇ ಪುಸ್ತಕದಲ್ಲಿ ಚರ್ಚೆ ಮಾಡುತ್ತಾ "ಕೆಂಚವೀರಣ್ಣೊಡೆಯುನದೆಂಬ ಶೂನ್ಯಸಂಪಾದನೆ" ಇಲ್ಲವೆಂಬುದಕ್ಕೆ ಡಾ. ಚಿದಾನಂದಮೂರ್ತಿಯವರು ಕೊಡುವ ಕಾರಣಗಳೂ ಸರಿಯಾಗಿಯೇ ಇವೆ.

ಡಾ. ಎಲ್. ಬಸವರಾಜು ಅವರ ಅಭಿಪ್ರಾಯದಲ್ಲಿಯೂ ಶೂನ್ಯಸಂಪಾದನೆಗಳು ನಾಲ್ಕೇ ಆಗಿವೆ. ಡಾ. ಆರ್.ಸಿ. ಹಿರೇಮಠ ಅವರು ಶೂನ್ಯಸಂಪಾದನೆಗಳು ಐದು ಎಂದಿರುವುದೂ ಮತ್ತು ಹಲಗೆಯಾರ್ಯನ ಶೂನ್ಯಸಂಪಾದನೆಯನ್ನು ಕಾಲಮಾನದಲ್ಲಿ ಕೊನೆಯದೆಂದು ಗ್ರಹಿಸಿರುವುದೂ ಅಂಗೀಕಾರಾರ್ಹವೆಂದು ಅನ್ನಿಸುವುದಿಲ್ಲ.

"ಶೂನ್ಯಸಂಪಾದನೆ" ಪ್ರಕಟಣೆಯ ಇತಿಹಾಸವನ್ನು ಕಿರಿಯ ವಿದ್ವಾಂಸರು ಕರಾರುವಾಕ್ಕಾಗಿ ರಚಿಸಬೇಕು. 2013ರ ಕಾಲಮಾನದೊಳಗೆ ಶಿವಗಣಪ್ರಸಾದಿ ಮಹಾದೇವಯ್ಯನು ರಚಿಸಿದ ಡಾ. ಎಲ್. ಬಸವರಾಜುರವರ ಮೂರು ಮುದ್ರಣಗಳು ಬಂದಿವೆ. ಡಾ. ಆರ್.ಸಿ. ಹಿರೇಮಠರದು ಒಂದಾವೃತ್ತಿ ಹಲಗೆಯಾರ್ಯನದು; ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಡಾ. ಎಸ್. ವಿದ್ಯಾಶಂಕರ ಇವರು ಸಂಪಾದಿಸಿದ ಈ ಕೃತಿ ದ್ವಿತೀಯ ಮುದ್ರಣ ಕಂಡಿದೆ. ಗುಮ್ಮಳಾಪುರದ ಸಿದ್ಧಲಿಂಗ ಯತಿಯದು ಡಾ. ಆರ್.ಸಿ. ಹಿರೇಮಠರಿಂದ ಸಂಪಾದನೆಗೊಂಡು ಇದುವರೆಗೆ ಒಂದೇ ಮುದ್ರಣ ಕಂಡಿರುವುದು. ಗೂಳೂರು ಸಿದ್ಧವೀರಣ್ಣೊಡೆಯರದು ಡಾ. ಫ.ಗು. ಹಳಕಟ್ಟಿಯವರಿಂದ ಮೊದಲು ಸಂಪಾದನೆಗೊಂಡು ಪ್ರಕಟವಾಯಿತು. ಅನಂತರ ಅದೇ ಪುಸ್ತಕ ಲಿಂ॥ ಡಾ. ಫ.ಗು. ಹಳಕಟ್ಟಿಯವರ ಸಮಗ್ರ ಸಾಹಿತ್ಯದಲ್ಲಿ ಮರುಮುದ್ರಣವಾಯಿತು. ಲಿಂ॥ ಡಾ. ಭೂಸನೂರ ಮಠರವರಿಂದ ಪರಿಷ್ಕೃತಗೊಂಡು ಅವರು ಬದುಕಿದ್ದಾಗಲೇ ಎರಡು ಮುದ್ರಣ ಕಂಡಿದ್ದು, ಅವರು ಶಿವೈಕ್ಯವಾದ ನಂತರ ಎರಡು ಸಾರಿ ಮುದ್ರಣಗೊಂಡಿದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಐದು ಸಂಪುಟಗಳಲ್ಲಿ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಭಾಷಾಂತರಗೊಂಡು ಸಂಪೂರ್ಣ ಕೃತಿ ಪ್ರಕಟವಾಗಿದೆ.

ಶೂನ್ಯಸಂಪಾದನೆಗೆ ಸಂಬಂಧಪಟ್ಟ ಕೆಲವು ಪ್ರಮುಖ ಲೇಖನಗಳು ಇತ್ತೀಚೆಗೆ ಮುದ್ರಣಗೊಂಡಿವೆ. ಇವು ಅಭ್ಯಾಸಯೋಗ್ಯವಾಗಿದ್ದು ಅವುಗಳ ವಿವರ ಇಂತಿವೆ.

1. ಗುಬ್ಬಿ ಮಲ್ಲಣ್ಣನ "ಗಣಭಾಷ್ಯ ರತ್ನಮಾಲೆ"; ಶಿವಗಣ ಪ್ರಸಾದಿ ಮಹಾದೇವಯ್ಯಗಳ "ಶೂನ್ಯಸಂಪಾದನೆ" ಸಮಾಪ್ತಿ ವಾಕ್ಯ ಲೇಖಕ ಡಾ. ಬಿ. ನಂಜುಂಡಸ್ವಾಮಿ, "ಶರಣ ಕಿರಣ" ಅಖಿಲ ಭಾರತ 5ನೆಯ ಶಾರಣ ಸಾಹಿತ್ಯ ಸಮ್ಮೇಳನ ಬೆಳಗಾವಿ ಪ್ರಧಾನ ಸಂಪಾದಕರು ಡಾ. ಗುರುಲಿಂಗ ಕಾಪಸೆ – 1999.

2. ಹಲಗೆಯಾರ್ಯನ ಬಗೆಗಿನ ಇತ್ತೀಚಿನ ಶೋಧನೆಗಳು, ಡಾ. ಬಿ. ನಂಜುಂಡಸ್ವಾಮಿ, ಬಸವಪಥ, ಸಂಪುಟ 22, ಸಂಚಿಕೆ 12, ಮಾರ್ಚ್, 2001

3. ಶೂನ್ಯಸಂಪಾದನೆಯ ಪುಷ್ಪಿಕೆಗಳು ಸಂಗ್ರಾಹಕ ಎಸ್. ಶಿವಣ್ಣಿ, ಬಸವಪಥ, ಸಂಪುಟ 23, ಸಂಚಿಕೆ 8, ನವೆಂಬರ್, 2001

4. ಶೂನ್ಯಸಂಪಾದನೆಗಳು ಎಷ್ಟು? ಕಾಲಾನುಕ್ರಮ ಯಾವುದು? ಡಾ. ಎಂ.ಎಂ. ಕಲಬುರ್ಗಿ, ಬಸವಪಥ, ಸಂಪುಟ 28, ಸಂಚಿಕೆ 4, ಜುಲೈ, 2006

5. ಹಲಗೆಯಾರ್ಯನ ಶೂನ್ಯಸಂಪಾದನೆ – ಒಂದು ಟಿಪ್ಪಣಿ, ಡಾ. ಬಿ. ನಂಜುಂಡಸ್ವಾಮಿ, ಬಸವಪಥ, ಸಂಪುಟ 28, ಸಂಚಿಕೆ 6, ಸೆಪ್ಟೆಂಬರ್ 2006.

6. ಹಲಗೆಯಾರ್ಯನ ಶಿಷ್ಯ ಕೆಂಚವೀರಣ್ಣೊಡೆಯ ಶೂನ್ಯಸಂಪಾದನೆ ರಚಿಸಿದ್ದನೆ? ಡಾ. ಬಿ. ನಂಜುಂಡಸ್ವಾಮಿ, ಬಸವಪಥ, ಸಂಪುಟ 29, ಸಂಚಿಕೆ 1, ಏಪ್ರಿಲ್ 2007.

ಕನ್ನಡನಾಡಿನ ಹಲವು ಪತ್ರಿಕೆಗಳಲ್ಲಿ ಇನ್ನೂ ಕೆಲವು ಲೇಖನಗಳು ಪ್ರಕಟಗೊಂಡಿರ ಬಹುದು. ಆ ಎಲ್ಲ ಲೇಖನಗಳ ವಿವರಗಳನ್ನು ಸಂಗ್ರಹಿಸಬೇಕಾಗಿದೆ. ಈ ಹಿಂದೆ ಡಾ. ಆರ್.ಸಿ. ಹಿರೇಮಠರ ವಾದವನ್ನೇ ಇನ್ನಷ್ಟು ಹೆಚ್ಚಿನ ವಿವರದೊಂದಿಗೆ ಡಾ. ಎಂ.ಎಂ. ಕಲಬುರ್ಗಿಯವರು ಬರೆದ ಲೇಖನವೆ ಶೂನ್ಯಸಂಪಾದನೆಗಳು ಎಷ್ಟು? ಕಾಲಾನುಕ್ರಮ ಯಾವುದು? ಅದಕ್ಕೆ ಅದು ಹೀಗಲ್ಲ ಹಾಗೆ ಎಂದು ಬರೆದ ಉತ್ತರವೇ 'ಹಲಗೆಯಾರ್ಯನ ಶೂನ್ಯಸಂಪಾದನೆ – ಒಂದು ಟಿಪ್ಪಣಿ'.

**ಒಂದು ನಾಲ್ಕಾಗಲು ಕಾರಣ :** ಹಲಗೆಯಾರ್ಯ ತನ್ನ ಶೂನ್ಯಸಂಪಾದನೆಯನ್ನು ಪರಿಷ್ಕರಿಸಲು ನೀಡುವ ಕಾರಣ "ಸಿದ್ಧರಾಮೇಶ್ವರದೇವರು ಮೊದಲಾದವರ ಶೈವಮಾರ್ಗವಂ ಬಿಡಿಸಿ, ವೀರಶೈವ ದೀಕ್ಷೆಯಿಂದ ಅಂಗಲಿಂಗ ಸಂಗ ಸಮರಸವಾದ ಸಂಪಾದನೆಯ ವಚನ, ಗುಮ್ಮಳಾಪುರದ ಸಿದ್ಧಲಿಂಗಯತಿ ಹೇಳುವುದು ಹೀಗೆ:

".......ಶಿವಗಣಪ್ರಸಾದಿ ಮಹಾದೇವಯ್ಯಗಳು ಶೂನ್ಯಸಂಪಾದನೆಯ ರಚಿಸಲು ಅಲ್ಲಿ ಸಿದ್ಧರಾಮಯ್ಯ ದೇವರಿಗೆ ದೀಕ್ಷಾಕ್ರಮವಿಲ್ಲದಿರಲು, ಇದಕ್ಕೆ ಕೆಂಚವೀರಣ್ಣೊಡೆಯ ದೇವರು ಪುರಾತನರ ವಚನವಿಡಿದು ಸಾವಿರದ ಏಳನೂರು ವಚನಂಗಳಿಂದ ಸಿದ್ದರಾಮೇಶ್ವರದೇವರಿಗೆ ದೀಕ್ಷಾಕ್ರಮದ ಭೇದವನು ಪ್ರತಿಷ್ಠಿಸಲು."

ಇದನ್ನೇ ಗೂಳೂರು ಸಿದ್ದವೀರಣ್ಣ ಹೇಳುವುದು ಹೀಗೆ : ".....ಇಲ್ಲಿ ವಚನ ಕ್ರಮ ತಪ್ಪಿದರೆ ನಿಮ್ಮ ಪರಿಜ್ಞಾನದಿಂದ ತಿದ್ದಿಕೊಂಬುದು ಎನ್ನಲಾಗಿ, ಆ ವಾಕ್ಯವಿಡಿದು ಗುಮ್ಮಳಾಪುರದ ಸಿದ್ಧಲಿಂಗದೇವರು, ಅಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷಾಕ್ರಮ ವಿಲ್ಲದಿರಲು, ಬಸವಾದಿ ಪ್ರಮಥರ ವಚನ ಪ್ರಸಿದ್ಧವಾಗಿ ಸೇರಿಸಿದರು."

ಮೂವರು ಪರಿಷ್ಕರಣಕಾರರು ಸಿದ್ಧರಾಮನಿಗೆ ದೀಕ್ಷೆಯಿಲ್ಲದಿದ್ದುದಕ್ಕೆ ಪರಿಷ್ಕರಿಸಿದೆವೆಂದು ಹೇಳುವಾಗ, ಶಿವಗಣಪ್ರಸಾದಿಯು "ವಚನಕ್ರಮ ಸೇರುವೆ ತಪ್ಪುಳ್ಳಡೆ ನಿಮ್ಮ ಪರಿಜ್ಞಾನದಿಂ ತಿದ್ದಿ ಈ ವಚನಾನುಭಾವ ಪ್ರಸಂಗಮಂ ಮಾಡಿ ಸುಖಿಸುವುದು" ಎಂದು ಮಾತಿನ ಸೆರಗನ್ನೇ ಹಿಡಿದು ಮುಂದುವರೆದಿದ್ದಾರೆ. ಮೂವರು ಪರಿಷ್ಕರಣಕಾರರು

ಹೇಳಿರುವ ಮಾತನ್ನೇ ಆಧಾರ ಮಾಡಿಕೊಂಡಂತೆ ಎಂ.ಆರ್.ಶ್ರೀಯವರೂ "ಮೇಲೆ ಹೇಳಿದ ಪರಿಷ್ಕರಣಗಳಿಗೆ ಮುಖ್ಯವಾದ ಕಾರಣ ಸಿದ್ಧರಾಮನ ದೀಕ್ಷೆ" ಎಂದು ಹೇಳಿದರು. 'ಸಿದ್ಧರಾಮ ಚಾರಿತ್ರ'ದ ಪೀಠಿಕೆಯಲ್ಲಿ ಇದೊಂದು ಸಮಸ್ಯೆಯಾಗಿ ಕಾಡಿತು. "ಸಿದ್ಧರಾಮ ಚಾರಿತ್ರ್ಯವನ್ನು ಓದಿ ಮುಗಿಸಿದ ಮೇಲೆ ಅಲ್ಲಿ ಚಿತ್ರಿತವಾಗಿರುವ ಸಿದ್ದರಾಮನು ಶೈವನೇ ಅಥವಾ ವೀರಶೈವನೇ ಎಂಬ ಮಹತ್ವದ ಸಮಸ್ಯೆ ತಲೆದೋರುತ್ತದೆ" ಎಂದ ಡಿ.ಎಲ್.ಎನ್. ಅವರು 'ಹೀಗೆ ಭವಿಯಾಗಿದ್ದ ಸಿದ್ಧರಾಮನನ್ನು ಇಷ್ಟಲಿಂಗಧಾರಣೆ ಷಟ್‌ಸ್ಥಲೋಪದೇಶ ಗಳಿಂದ ವೀರಶೈವನನ್ನಾಗಿ ಮಾಡುವುದರಲ್ಲಿ 'ಶೂನ್ಯಸಂಪಾದನೆ' ಕೃತಕೃತ್ಯವಾಗಿದೆ" ಎಂದು ಅಭಿಪ್ರಾಯಪಟ್ಟರು. ಇದೇ ಜಾಡಿನಲ್ಲಿ ಡಾ. ಎಂ. ಚಿದಾನಂದಮೂರ್ತಿಯವರು "ಶೂನ್ಯಸಂಪಾದನೆ ಪಾಠಭೇದಗಳಿಗೆ ಅತಿ ಮುಖ್ಯವಾದ ಕಾರಣ ಸಿದ್ಧರಾಮನ ದೀಕ್ಷೆ ಎಂದು ಶ್ರೀ ಎಂ.ಆರ್. ಶ್ರೀಯವರು ಸರಿಯಾಗಿ ಗುರುತಿಸಿದ್ದಾರೆ ಎಂದರು. ಎಂ.ಆರ್.ಶ್ರೀ. ಮತ್ತು ಡಿ.ಎಲ್.ಎನ್.ರವರು ಹೇಳುವಂತೆ "ಸಿದ್ಧರಾಮನ ದೀಕ್ಷೆಯೇ ಈ ಪರಿಷ್ಕರಣ ಗಳಿಗೆ ಮುಖ್ಯ ಕಾರಣ ಎಂಬ ಅಭಿಪ್ರಾಯ ಸರಿಯಲ್ಲ. ಶೂನ್ಯಸಂಪಾದನೆಯನ್ನು ಕುರಿತು ಬರೆದಿರುವ ಶ್ರೀ ಮೂರ್ತಿಗಳವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಕೂಡ ಆಶ್ಚರ್ಯವೇ" ಎಂದು ಡಾ. ತಿಪ್ಪೇರುದ್ರಸ್ವಾಮಿಯವರು ಅಭಿಪ್ರಾಯಪಟ್ಟರು.

ಈ ವಿಷಯದ ಚರ್ಚೆ ಎರಡು ಮುಖ್ಯಾಂಶಗಳನ್ನೊಳಗೊಂಡಿದೆ. ಒಂದನೆಯದು ರಾಘವಾಂಕನು ಚಿತ್ರಿಸಿರುವ ಸಿದ್ಧರಾಮ ಶೈವನೆ ಅಥವಾ ವೀರಶೈವನೆ ಎಂಬುದು. ಈ ಪ್ರಶ್ನೆಯನ್ನೆತ್ತಿದವರು ಪ್ರೊ. ಡಿ.ಎಲ್.ಎನ್. ಅವರು.

"ಅವನು ಶೈವನಾಗಲಿ ವಿರಶೈವನಾಗಿರಲಿ ಕಾವ್ಯಕ್ಕೆ ಯಾವ ಕುಂದೂ ಅಗ್ಗಳಿಕೆಯೂ ಉಂಟಾಗುವ ಹಾಗಿಲ್ಲ; ಅವನ ಪಾತ್ರದ ಉನ್ನತಿಗೆ ಭಂಗ ಬರುವುದಿಲ್ಲ" ಎಂದು ಮತ್ತೆ ಅವರೇ ಪೀಠೀಕೆಯಲ್ಲಿ ಪ್ರಸ್ತಾಪಿಸಿದ್ದಾರೆ. ರಾಘವಾಂಕನ ಕಾವ್ಯದಲ್ಲಿ ಚಿತ್ರಿತವಾಗಿರುವ ಸಿದ್ದರಾಮನ ಬಗೆಗೆ ಅಂದರೆ ಶೈವನೋ ಅಥವಾ ವೀರಶೈವನೋ ಎಂಬ ಸಮಸ್ಯೆಯ ಕಡೆ ಗಮನ ಹರಿದಿದೆ. ಡಿ.ಎಲ್.ಎನ್. ಅವರು ಸಿದ್ಧರಾಮ ಚಾರಿತ್ರದ ಮರುಮುದ್ರಣದ ಪ್ರತಿಯಲ್ಲಿ ಸಮಸ್ಯೆಯ ಭಾಗವನ್ನು ಕೈಬಿಟ್ಟರು. ಅಷ್ಟೇ ಅಲ್ಲ, ಸಿದ್ಧರಾಮ ವೀರಶೈವನೆಂಬುದನ್ನು ಒಪ್ಪಿ ಪ್ರಬುದ್ಧ ಕರ್ಣಾಟಕದಲ್ಲಿ ಲೇಖನವನ್ನು ಬರೆದರು.

ಶೈವನಾದ ಸಿದ್ಧರಾಮನನ್ನು ವೀರಶೈವನನ್ನಾಗಿಸುವುದೇ ಶೂನ್ಯಸಂಪಾದನೆಗಳ ಪರಿಷ್ಕರಣಗಳಿಗೆ ಮುಖ್ಯ ಕಾರಣ ಎಂಬ ಅಭಿಪ್ರಾಯ ಮೂವರು ಪರಿಷ್ಕರಣಕಾರರಲ್ಲಿ ಇದೆ. ಇದನ್ನೇ ಎಂ.ಆರ್. ಶ್ರೀ, ಡಿ.ಎಲ್.ಎನ್. ಮತ್ತು ಚಿದಾನಂದಮೂರ್ತಿ ಗಟ್ಟಿಯಾಗಿ ಹಿಡಿದುಕೊಂಡಂತೆ ತೋರುತ್ತದೆ. ಹಲಗೆಯಾರ್ಯ ಮೊದಲು ಶೂನ್ಯಸಂಪಾದನೆಯನ್ನು ಪರಿಷ್ಕರಿಸಿದನು. ಆತ 'ಸಿದ್ಧರಾಮಯ್ಯದೇವರು ಮೊದಲಾದವರ ಶೈವಮಾರ್ಗವಂ ಬಿಡಿಸಿ ವೀರಶೈವ ದೀಕ್ಷೆ ನೀಡುವುದಕ್ಕೆಂದು ಪರಿಷ್ಕರಣ ಮಾಡಿದ ಸೂಚನೆಯನ್ನು ನೀಡುತ್ತಾನೆ. ಆತನ ಕೃತಿಯನ್ನು ಅವಲೋಕಿಸಿದರೆ ಈ ಮಾತು ಸಹಜವಾಗಿಯೂ ತೋರುವಂತಿದೆ.

ಏಕೆಂದರೆ ಆತನ ಕೃತಿಯಲ್ಲಿ ಸಿದ್ಧರಾಮನ ದೀಕ್ಷೆಯೊಂದೇ ಮುಖ್ಯವಾಗಿಲ್ಲ. ಮಹಾದೇವಿಯಕ್ಕ, ಮರುಳಶಂಕರದೇವ ಹಾಗೂ ನುಲಿಯ ಚಂದಯ್ಯರ ದೀಕ್ಷೆಯೂ ಪ್ರಧಾನವಾಗುತ್ತದೆ. ಸಿದ್ಧರಾಮನ ದೀಕ್ಷಾಪ್ರಸಂಗ ಆತನ ಪೂರ್ವವೃತ್ತಾಂತ ಕಥೆಗಳನ್ನೂ ಒಳಗೊಂಡು ವಿಸ್ತಾರವಾಗಿದೆ. ಹಾಗೆಯೇ ಮರುಳಶಂಕರದೇವರ ಪ್ರಸಂಗದಲ್ಲಿ ತಾನೇ ಸೇರಿಸಿದ ಮರುಳಶಂಕರದೇವರ ವಚನ. 'ಶ್ರೀಗುರು ಶಿಷ್ಯರಿಗೆ ಕರುಣದಿಂದ ಉಪದೇಶ ಮಾಡಬೇಕೆಂದು ಬಂದು ಮೂರ್ತಿಗೊಂಡು' ಎಂದು ಆರಂಭವಾಗಿ ಆದಿಲಿಂಗ ಅನಾದಿಲಿಂಗ ಹರ್ಷಲಿಂಗ ಅಮೃತಲಿಂಗ ಅಗೋಚರಲಿಂಗ ಅಪ್ರತಿಮಲಿಂಗ ಅನಾಮಯ ಲಿಂಗ ಅಭೇದ್ಯಭೇದಕಲಿಂಗ ಅಸಾಧ್ಯಸಾಧಕಲಿಂಗ... ಲಿಂಗಾಂಕಿತವನೇಕೀಕರಿಸಿ ಬಂದು ಇಷ್ಟಲಿಂಗವ ಮಾಡಿ ಆ ಶಿಷ್ಯನ ಹಸ್ತದಲ್ಲಿ ನಿಕ್ಷೇಪವ ಮಾಡಿದನು.... ಈ ಮಾತುಗಳಲ್ಲಿ ದೀಕ್ಷೆ ವಿಚಾರವನ್ನು ಎತ್ತಿ ಹಿಡಿದಿರುವುದನ್ನು ನೋಡಬಹುದು.

ಅದೇ ರೀತಿ ಮಹದೇವಿಯಕ್ಕನ ಪ್ರಸಂಗದಲ್ಲಿಯೂ "ಪಂಡಿತಾರಾಧ್ಯರ ಕೈಯಲ್ಲಿ ದೀಕ್ಷೆಯಾಗಿ, ಇಷ್ಟಲಿಂಗವಂ ಪಡೆದು... ಕರಸ್ಥಲದ ಲಿಂಗಧ್ಯಾನದಲ್ಲಿ ದಿಟ್ಟಿ ನೆಟ್ಟೆ" ಎಂದು ವರ್ಣಿಸುವಲ್ಲಿ ಅದಕ್ಕೂ ಮಿಗಿಲಾಗಿ, ನುಲಿಯ ಚಂದಯ್ಯನ ಪ್ರಸಂಗದಲ್ಲಿ 'ದೀಕ್ಷೆ' ಹಾಗೂ ಇಷ್ಟಲಿಂಗಧಾರಣೆಯ ಪ್ರಾಧಾನ್ಯವನ್ನು ಎತ್ತಿಹಿಡಿದಿದ್ದಾನೆ. ಹಲಗೆಯಾರ್ಯ ಹೇಳುವಂತೆ, ಆತನ ಪರಿಷ್ಕರಣಕ್ಕೆ ಕಾರಣ ಸಿದ್ಧರಾಮನ ದೀಕ್ಷೆಯೊಂದೇ ಅಲ್ಲ; ಶೈವದಿಂದ ವೀರಶೈವವಾಗಲು ಅಗತ್ಯವಾದ ದೀಕ್ಷೆ ಹಾಗೂ ಇಷ್ಟಲಿಂಗಧಾರಣೆಯ ವಿಷಯವನ್ನು ಹೇಳುವುದೂ ಅಷ್ಟೇ ಮುಖ್ಯವಾಗಿತ್ತು. ಇದು ಒಂದು ಧಾರ್ಮಿಕ ವಿಧಿಯಾದರೂ ವರ್ಣಾಶ್ರಮ ಧರ್ಮದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ದೂರಮಾಡುವ, ಮನುಷ್ಯರಲ್ಲಿ ಸಮಾನತೆಯ ಭಾವನೆಯನ್ನುಂಟುಮಾಡುವ, ಸ್ತ್ರೀ–ಪುರುಷ ಭೇದವಿಲ್ಲದೆ ಮಾನವ ಘನತೆಯನ್ನು ಎತ್ತಿಹಿಡಿಯುವ ಕ್ರಾಂತಿಕಾರಕ 'ವಿಧಿ'ಯೆಂದು ಗ್ರಹಿಸಬೇಕಾಗಿದೆ.

ಇನ್ನು ಎರಡನೆಯ ಪರಿಷ್ಕರಣಕ್ಕೆ ಬಂದರೆ ಮತ್ತೊಂದು ಪ್ರಮುಖ ತಿರುವನ್ನು ಅಲ್ಲಮನ ಜನ್ಮ ಪ್ರಸಂಗ ಕುರಿತಾದ ಹೊಸ ತಾತ್ವಿಕ ನಿಲುವಿನಿಂದ ಪಡೆದುಕೊಳ್ಳುತ್ತದೆ. ಗುಮ್ಮಳಾಪುರದ ಸಿದ್ಧಲಿಂಗಯತಿ ತನ್ನ ಗುರುವಾದ, ಬೋಳಬಸವೇಶ್ವರನ ಗುರುವಾದ ತೋಂಟದ ಸಿದ್ಧಲಿಂಗನ ವಚನದ ಸ್ಫೂರ್ತಿಯಿಂದ ಎಂಬಂತೆ "ಇದೇನು ಕಾರಣ ಮರ್ತ್ಯಕ್ಕೆ ಬಂದರೆಂದು ಸಂಕಲ್ಪಿಸಿ ಶಾಪದಿಂದ ಬಂದರೆಂದು ಆವಾವನೊಬ್ಬನು ನುಡಿವುತ್ತಿದ್ದಾನು ಅವನು ಇಪ್ಪತ್ತೆಂಟು ಕೋಟಿ ಜನ್ಮದಲ್ಲಿ ರವಿಶಶಿಯುಳ್ಳನ್ನವರ ನರಕವನ್ನನುಭವಿಸುತಿರ್ಪನು" ಎಂದು ಅಲ್ಲಮಾದಿಗಳ ಜನ್ಮ ಪ್ರಸಂಗವನ್ನು ಬೇರೊಂದು ರೀತಿಯಲ್ಲಿ ನಿರೂಪಿಸಿದ್ದನ್ನು ನೋಡಿದರೆ 'ದೀಕ್ಷಾ' ಪ್ರಸಂಗದಂತೆ ಶರಣರನ್ನು ಕುರಿತ ಧೋರಣೆಯೂ ಹೆಚ್ಚು ಹೆಚ್ಚು ಪರಿಷ್ಕೃತವಾದದ್ದನ್ನು ಗಮನಿಸುತ್ತೇವೆ. ಇದಕ್ಕಿಂತ ಆಶ್ಚರ್ಯದ ಸಂಗತಿ ಎಂದರೆ ಪರಿಷ್ಕರಣ ಕೇವಲ ದೀಕ್ಷೆಗೆ ಸೀಮಿತವಾಗಿಲ್ಲ.

(ಮುಂದುವರಿಯುವುದು)

# ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಗಣಾಚಾರ

ಡಾ. ಶಶಿಕಾಂತ ಪಟ್ಟಣ

ವಿಶ್ವದ ಶ್ರೇಷ್ಠ ವಚನಕಾರ, ವೀರಗಣಾಚಾರಿ, ಬಂಡಾಯ ಪ್ರವೃತ್ತಿಯ ವಚನಕಾರ, ನೇರ ನಿಷ್ಠುರಿ ವಚನಕಾರ, ಅರಿವೇ ಗುರು, ಆಚಾರವೇ ಲಿಂಗ, ಅನುಭವವೇ ಜಂಗಮ ಎಂದು ಜಗತ್ತಿಗೆ ಸಾರಿದ ನಂಬಿಕೆಯ ಅಂಬಿಗ, ಲಿಂಗತತ್ವ ನಂಬಿಗ, ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ವಿಚಾರಧಾರೆ ಉಳಿದ ಶರಣರಿಗಿಂತ ತುಂಬ ಭಿನ್ನವಾಗಿವೆ.

ಸಾತ್ವಿಕ ಸಿಟ್ಟು, ಆಕ್ಷೇಪ ಗುಣ, ವಿಡಂಬನೆ, ಕಠೋರ ಟೀಕೆಗೆ ಶರಣಗಣದಲ್ಲಿಯೇ ಅಗ್ರಗಣ್ಯ ಅಂಬಿಗರ ಚೌಡಯ್ಯ.

ಅಂಬಿಗರ ಚೌಡಯ್ಯ ಬಸವಣ್ಣನವರ ಅನುಯಾಯಿ. ಸಾವಿರಾರು ವರ್ಷಗಳಿಂದ ಧರ್ಮ, ದೇವರುಗಳ ಬಗೆಗೆ ಜನಸಮೂಹದಲ್ಲಿದ್ದ ಮೂಢನಂಬಿಕೆಗಳನ್ನೆಲ್ಲ ಗುರು ಬಸವಣ್ಣನವರೊಂದಿಗೆ ಚರ್ಚಿಸುತ್ತಲೇ ಅಂಬಿಗರ ಚೌಡಯ್ಯ ಅವುಗಳನ್ನು ಹೊಡೆದೋಡಿಸುವಂಥ ವಿಚಾರಪರವೂ, ವಾಸ್ತವವೂ ಆದ ಅಂಶಗಳನ್ನು ಜನಮನದಲ್ಲಿ ಮೂಡಿಸಿದರು. ಧರ್ಮ–ದೇವರು ಕೇವಲ ಶ್ರೀಮಂತರ ಸ್ವತ್ತಾಗಿದ್ದ ಅಂದಿನ ಸಂದರ್ಭದಲ್ಲಿ ಪೂಜೆ, ಮೋಕ್ಷಗಳು ಕೇವಲ ನೇಮವಂತರ, ಸಂಪ್ರದಾಯಸ್ಥ ಬ್ರಾಹ್ಮಣರ ಹತೋಟಿಯಲ್ಲಿದ್ದ ಮತ್ತು ಭಾಷ್ಯಕಾರರು ಹೇಳಿದ್ದೇ ಸರಿಯೆನ್ನುವ ವ್ಯವಸ್ಥೆಯ ಹಿನ್ನೆಲೆಯಲ್ಲಿ ಚೌಡಯ್ಯ ಈ ಮೂವರನ್ನೂ ಕ್ರೂರಕರ್ಮಿಗಳೆಂದು, ಸಂದೇಹಿಗಳೆಂದು ಕಟುವಾಗಿ ಟೀಕಿಸುವ ಮೂಲಕ ಇವರು ಹೋದ ದಾರಿಯಲ್ಲಿ ಯಾರೂ ಹೋಗಬಾರದೆಂದು ಸ್ಪಷ್ಟಪಡಿಸುತ್ತಾನೆ. ಇವನ ವಚನಗಳು ತುಂಬಾ ಕಠೋರವಾಗಿರುವುದು ಅವರ ಆತ್ಮ– ಬಲವನ್ನು ಹಾಗೂ ಸತ್ಯವನ್ನು ಪ್ರತಿಪಾದಿಸುವಲ್ಲಿ ಹೊಂದಿದ್ದ ಧೈರ್ಯವನ್ನು ತೋರಿಸುತ್ತವೆ. ಈತನ ಜೀವನದ ವಿವರಗಳನ್ನು ಸಾಹಿತ್ಯಚರಿತ್ರಕಾರರು ಈ ಕೆಳಕಂಡಂತೆ ಗುರುತಿಸಿದ್ದಾರೆ:

ಹೆಸರು: ಚೌಡಯ್ಯ

ಊರು: ಚೌಡದಾನಪುರ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ.

ಕಸುಬು: ದೋಣಿಯನ್ನು ನದಿ/ಹೊಳೆ/ತೊರೆಯಲ್ಲಿ ನಡೆಸುವುದು.

ದೊರೆತಿರುವ ವಚನಗಳು: 273

**ಗಣಾಚಾರ**

ಇದು ಸತ್ಯದ ಪ್ರತಿಪಾದನೆಯನ್ನು ವ್ಯಂಗ್ಯ, ವಿಡಂಬನೆ, ತೀವ್ರ ಟೀಕೆಗಳ ಮೂಲಕ ತನ್ನ ಸಾತ್ವಿಕ ಸಿಟ್ಟನ್ನು ಆಕ್ಷೇಪ ಮತ್ತು ಪ್ರತಿಭಟನೆಗಳ ಮೂಲಕ, ಶಾಂತಿಯುತವಾಗಿ ಮತ್ತು ಅಹಿಂಸಾತ್ಮಕವಾಗಿ ತೋರಿಸುವ ಆಚಾರವು. ಲಿಂಗಾಚಾರ ಸದಾಚಾರ ಶಿವಾಚಾರ ಮತ್ತು ಭೃತ್ಯಾಚಾರಗಳು ಧರ್ಮಸಂಹಿತೆ ಮತ್ತು ನೀತಿಸಂಹಿತೆಗೆ ಪ್ರಾಧಾನ್ಯತೆ ಕೊಟ್ಟರೆ ಗಣಾಚಾರ ಇಂತಹ ಸೂಕ್ಷ್ಮವಾದ ಸಂಹಿತೆಗಳ ಸಂರಕ್ಷಣೆಗೆ ಆದ್ಯತೆ ನೀಡುತ್ತದೆ. ಇಲ್ಲಿ ಭಾವತೀವ್ರತೆಯು ಪ್ರಧಾನವಾಗಿ ಇದ್ದ ವಿಷಯವನ್ನು ನೇರವಾಗಿ ನಿರ್ದಾಕ್ಷಿಣ್ಯವಾಗಿ ಯಾವುದೇ ಮುಲಾಜಿಲ್ಲದೆ, ರಾಜಿಸೂತ್ರವನ್ನು ಸಾರಾಸಗಟಾಗಿ ತಳ್ಳಿಹಾಕಿ, ತತ್ವ ಪ್ರತಿಪಾದನೆ ಮಾಡಿ ಶರಣತತ್ವಗಳಿಗೆ ಚ್ಯುತಿ ಬಾರದ ಹಾಗೆ ಕಾಪಾಡುವ ಮಹತ್ತರವಾದ ಜವಾಬ್ದಾರಿ ಹೊಂದಿದೆ.

ಗಣಾಚಾರದಲ್ಲಿ ಬರುವ ತೆಕ್ಕೆ ಗಣಾಚಾರ (ಕಾಯಕ), ಕಂಬದ ಗಣಾಚಾರ (ಕಾಯಕ), ಮತ್ತು ಮುಳ್ಳಾವಿಗೆಯ (ಕಾಯಕ) ಅಂತ ಅನಂತರದಲ್ಲಿ ಅನೇಕ ಆಚರಣೆಗಳು ಶೈವೀಕರಣಗೊಂಡಿರಬಹುದು. ಆದರೆ ಅವುಗಳಿಗೂ ಗಣಾಚಾರಕ್ಕೂ ಯಾವುದೇ ಸಂಬಂಧವಿಲ್ಲ. ಭವಿಯನ್ನು ಭಕ್ತನನ್ನಾಗಿ ಪರಿವರ್ತಿಸುವ ಕಾರ್ಯದಲ್ಲಿ ತೊಡಗುವ ಬದ್ಧತೆ ಗಣಾಚಾರದ ಮುಖ್ಯ ಗುರಿ.

ಅಂಬಿಗರ ಚೌಡಯ್ಯ ಲಿಂಗತತ್ವನಿಷ್ಠನು, ಏಕದೇವೋಪಾಸಕನು, ಇಷ್ಟಲಿಂಗ ಆರಾಧಕನು, ದೇವಾಲಯ, ಗುಡಿಗುಂಡಾರಗಳ ಕಡು ವಿರೋಧಿ, ಇಷ್ಟಲಿಂಗ ಯೋಗ ಪ್ರತಿಯೊಬ್ಬ ಶರಣಧರ್ಮಿಗೆ ಕಡ್ಡಾಯ. ಇಲ್ಲಿ ಯಾವ ಭೇಧಭಾವ ಇಲ್ಲ. ದೇಹವನ್ನೇ ದೇವಾಲಯವಾಗಿಸಿಕೊಳ್ಳಲು ಅದು ಸಾಧನ ಎಂದನು. ಇಷ್ಟಲಿಂಗವನ್ನು ಪೂಜಿಸದೆ ಬೆಟ್ಟದ ಸ್ಥಾವರಲಿಂಗಕ್ಕೆ ಹೋಗಿ ಅಡ್ಡಬೀಳುವ ಮೂಢರನ್ನು ಕಂಡ ಚೌಡಯ್ಯ ಹೀಗೆ ಹೇಳಿದ್ದಾನೆ.

ಕಟ್ಟಿದ ಲಿಂಗವ ಬಿಟ್ಟು
ಬೆಟ್ಟದ ಲಿಂಗಕ್ಕೆ ಹೋಗಿ
ಅಡಿಮೇಲಾಗಿ ಬೀಳುವ
ಲೊಟ್ಟೆಮೂಳರ ಕಂಡಡೆ
ಗಟ್ಟಿ ಪಾದರಕ್ಷೆಯ ತೆಗೆದುಕೊಂಡು
ಲೊಟಲೊಟನೆ ಹೊಡೆಯೆಂದಾತ
ನಮ್ಮ ಅಂಬಿಗರ ಚೌಡಯ್ಯ

ಸಮಾಜದಲ್ಲಿದ್ದ ತಾರತಮ್ಯಗಳ ವಿರುದ್ಧ ಹೋರಾಡಿ ಹೊಸ ವ್ಯವಸ್ಥೆಯ ಸೈದ್ಧಾಂತಿಕ ನೆಲೆಗಟ್ಟನ್ನು ಭದ್ರಗೊಳಿಸಿದ ಅಂಬಿಗರ ಚೌಡಯ್ಯ ನಿಜಶರಣನು ಸಮಾಜದ ಅನಾಚಾರ,

ಅತ್ಯಾಚಾರ, ಡಂಭಾಚಾರಗಳನ್ನು ನಿರ್ಭೀತಿಯಿಂದ ಕಟುವಾಗಿ ಟೀಕಿಸಿ ತನ್ನ ವಚನಗಳ ಮೂಲಕ ವೈಚಾರಿಕ ನಿಲುವನ್ನು ಪ್ರಕಟಿಸಿದ ಮಹಾನ್ ಮಾನವತಾವಾದಿ.

ಅಂದಿನ ಸಮಾಜದಲ್ಲಿಯೂ ಕೂಡ ನಾಡದೊಂಬರನ್ನು ಕವಿ ಕಾಖಾಂಬರ ಹಾಕುವ ವೇಷಧಾರಿಗಳ, ಲಾಂಛನಧಾರಿಗಳ ಕಂಡುಹಿಡಿಯುವ ವೀರಪ್ರವೃತ್ತಿಯನ್ನು ಈತನ ವಚನಗಳಲ್ಲಿ ಕಾಣಬಹುದು.

ಕಂಥೆ ತೊಟ್ಟವ ಗುರುವಲ್ಲ,
ಕಾವಿ ಹೊತ್ತವ ಜಂಗಮವಲ್ಲ,
ಶೀಲ ಕಟ್ಟಿದವ ಶಿವಭಕ್ತನಲ್ಲ, ನೀರು ತೀರ್ಥವಲ್ಲ,
ಕೂಳು ಪ್ರಸಾದವಲ್ಲ.
ಹೌದೆಂಬವನ ಬಾಯ ಮೇಲೆ
ಅರ್ಧ ಮಣದ ಪಾದರಕ್ಷೆಯ ತೆಗೆದುಕೊಂಡು
ಮಾಸಿ ಕಡಿಮೆಯಿಲ್ಲದೆ ತೂಗಿ ತೂಗಿ ಟೊಕಟೊಕನೆ ಹೊಡೆ
ಎಂದಾತ ನಮ್ಮ ಅಂಬಿಗರ ಚೌಡಯ್ಯ

ಇಲ್ಲಿ ಕಂಥೆ ಎಂದರೆ ಲಿಂಗವೆಂದು ತೆಗೆದುಕೊಳ್ಳಬಹುದು. ಲಿಂಗವ ಕೊಟ್ಟಾತ ಗುರುವಲ್ಲ, ಕಾವಿ ಹೊತ್ತವ ಜಂಗಮನಲ್ಲ, ನೀರು ತೀರ್ಥವಲ್ಲ (ಪಾದೋದಕ), ಕೂಳು ಪ್ರಸಾದವಲ್ಲ, ಇವೆಲ್ಲವುಗಳನ್ನೂ ಅಲ್ಲಗಳೆದು ಹೌದು ಎನ್ನುವವನ ಬಾಯಲ್ಲಿ ಅರ್ಧ ಮಣದ ಪಾದರಕ್ಷೆಯನ್ನು ಬಾಯಿಗೆ ಇಡಬೇಕು ಎನ್ನುತ್ತಾನೆ. ಅಂದಿನ ದಿನಗಳಲ್ಲಿ ಮಣ ಅಳತೆಯ ಸಾಧನ ಇಂದಿನ ಕಿಲೋ ಇದ್ದ ಹಾಗೆ. ಬಂಗಾರವನ್ನು ಮಣಗಟ್ಟಲೆ ಕೂಡಿಡುವ ಶ್ರೀಮಂತಿಕೆಯ ಪದವಾದ ಮಣವನ್ನು ಚಪ್ಪಲಿಯ ತೂಕಕ್ಕೆ ಬಳಸುವ ದಿಟ್ಟ ಶರಣನು.

ಅಂಬಿಗ ಅಂಬಿಗ ಎಂದು
ಕುಂದ ನುಡಿಯದಿರು
ನಂಬಿದರೆ ಒಂದೆ ಹುಟ್ಟಲಿ
ಕಡೆಯ ಹಾಯಿಸುವನಂಬಿಗರ ಚೌಡಯ್ಯ

ನೆರೆ ತೊರೆ ಕೆರೆಯಲ್ಲಿ ಪ್ರವಾಸ ಮಾಡುವಾಗ ಪ್ರಯಾಣಿಕರು ಭಯದಿಂದ ಕುದಿದು ಕುಂದಿ ಭಯದಿಂದ ಸಾವಿಗೆ ಹೆದರುತ್ತ ಅಂಬಿಗ ಅಂಬಿಗ ಎಂದು ನುಡಿವ ಜನರಿಗೆ ನಂಬಿ ಕರೆದರೆ ಸಾಕು, ಒಂದೇ ಹುಟ್ಟಿನಲ್ಲಿ ದಡ ಸೇರಿಸುವುದಾಗಿ ಧೈರ್ಯದಿಂದ ಹೇಳುವ ದಿಟ್ಟ ಗಣಾಚಾರಿ ಅಂಬಿಗರ ಚೌಡಯ್ಯ. ಮೇಲುನೋಟಕ್ಕೆ ಇದು ಒಂದು ಸಾಮಾನ್ಯವಾದ ವಚನವೆನಿಸಿದರೂ ಆಧ್ಯಾತ್ಮಿಕ ದೃಷ್ಟಿಯಲ್ಲಿ, ನಂಬಿದ ಸೃಷ್ಟಿಕರ್ತನನ್ನು ನಂಬಿ ಕರೆದೊಡೆ ಈ ಸಂಸಾರದ ಸಾಗರದಲ್ಲಿ ಒಂದೇ ಹುಟ್ಟಿನಲ್ಲಿ (ಜನ್ಮದಲ್ಲಿ) ಮುಕ್ತಿ ಪಡೆದು ದಡವನ್ನು ತಲುಪಿಸಬಹುದು ಎಂದು ಸಾರುವ ಮಾರ್ಮಿಕ ರಚನೆಯಾಗಿದೆ.

ಲಿಂಗತತ್ವದ ಬಗ್ಗೆ ಅತ್ಯಂತ ಕಾಳಜಿ, ಪ್ರೀತಿ, ತೀವ್ರ ಭಾವನೆಯನ್ನು ಹೊಂದಿದ ಅಂಬಿಗರ ಚೌಡಯ್ಯನವರ ವಚನಗಳು ಓದಲು, ಕೇಳಲು ಕರ್ಕಶವೆನಿಸಿದರೂ ಅವುಗಳ ಹಿಂದಿನ ಆಶಯ, ಕಾಳಜಿ ಮನಮುಟ್ಟುವಂಥದು. ಗಣಾಚಾರಕ್ಕೆ ಹೇಳಿ ಮಾಡಿಸಿದ ವ್ಯಕ್ತಿತ್ವ ಅಂಬಿಗರ ಚೌಡಯ್ಯನದು. ಲಾಂಛನಧಾರಿಗಳನ್ನು, ವೇಷಧಾರಿಗಳನ್ನು, ಕಪಟಿ ಕುತಂತ್ರಿಗಳನ್ನು ಚಾಟಿಯೇಟಿನಿಂದ ಹೊಡೆಯುವ ದಿಟ್ಟ ಶರಣ ಅಂಬಿಗರ ಚೌಡಯ್ಯ. ಸತ್ಯದ ಅಗ್ರ ಪ್ರತಿಪಾದಕ. ನೇರ ನಡೆ ನುಡಿ ಪಾರದರ್ಶಕ ಮನಸ್ಸು ಅವನದು.

ಭವಿಯ ಮನಸ್ಸನ್ನು ಕರಗಿಸಲು ಕಠೋರ ಪದಗಳಿಂದ ಟೀಕಿಸಿ ಶರಣರ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕೊನೆಗೆ ತನ್ನ ಊರಾದ ಚೌಡಯ್ಯದಾನಪುರದಲ್ಲಿ ಐಕ್ಯವಾಗುತ್ತಾನೆ.

□

ಜ್ಞಾನವುಳ್ಳನ್ನಕ್ಕ ಅರಿವು, ಅರಿವುಳ್ಳನ್ನಕ್ಕ ಆತ್ಮ
ಆತ್ಮವುಳ್ಳನ್ನಕ್ಕ ಜೀವ, ಜೀವವುಳ್ಳನ್ನಕ್ಕ ಕಾಯ
ಕಾಯವುಳ್ಳನ್ನಕ್ಕ ಸಕಲಸುಖಭೋಗಂಗಳು
ಅದೆಂತೆಂದಡೆ :
ಬೀಜಳಿದು ಬೆಳೆದು ಪುನರಪಿ ಬೀಜವಾದಂತೆ
ಅದರ ಆಗುಚೇಗೆಯನರಿದಲ್ಲಿ
ಇಷ್ಟಪ್ರಾಣಯೋಗ ಕ್ರಿಯಾದ್ವೈತ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿದುದು.

**– ಶಿವಲೆಂಕ ಮಂಚಣ್ಣ**

# ತಲಕಾಡು ಧಾರ್ಮಿಕ ಕ್ಷೇತ್ರ ದರ್ಶನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ತಲಕಾಡು ಮೈಸೂರು ಜಿಲ್ಲೆಯಲ್ಲಿರುವ ಪ್ರಮುಖ ಯಾತ್ರಾಸ್ಥಳ. ಇದು ಟಿ. ನರಸೀಪುರ ತಾಲ್ಲೂಕಿನ ಒಂದು ಗ್ರಾಮ. ಬೆಂಗಳೂರಿನಿಂದ 133 ಕಿ.ಮೀ. ಮೈಸೂರಿನಿಂದ 45 ಕಿ.ಮೀ. ತಾಲ್ಲೂಕು ಕೇಂದ್ರದಿಂದ 16 ಕಿ.ಮೀ. ದೂರದಲ್ಲಿದೆ. ಇದು ಕಾವೇರಿ ನದಿಯ ಉತ್ತರ ದಂಡೆಯ ಮೇಲಿರುವ ಗ್ರಾಮವಾಗಿದೆ.

ತಲಕಾಡು ಹೊಯಿಸಣ ದೇಶದ ದಕ್ಷಿಣ ವಾರಾಣಸಿಯೆನಿಸಿದ್ದ ಶೈವ ಪುಣ್ಯಕ್ಷೇತ್ರವಾಗಿದೆ ಹಾಗೂ ದಕ್ಷಿಣಕಾಶಿ ಎಂದು ಪ್ರಸಿದ್ಧಿ ಹೊಂದಿದೆ. ಇದು ಟಿ.ನರಸೀಪುರ ತಾಲ್ಲೂಕಿನ ಪ್ರಾಗಿತಿಹಾಸದ ಪ್ರಮುಖ ನೆಲೆಯೂ ಆಗಿದೆ.

ಶಿಲಾಯುಗದ ಮಾನವನಿಂದ ಹಿಡಿದು ಇಲ್ಲಿಯವರೆಗೆ ಜನವಸತಿ ಸ್ಥಳವಾಗಿದೆ. ಕ್ರಿ.ಪೂ. 1800 ನೇ ಕಾಲಮಾನದ ನವಶಿಲಾಯುಗ ಸಂಸ್ಕೃತಿ, ಕ್ರಿ.ಪೂ. 800 ರ ಕಾಲಾಮಾನದ ಬೃಹತ್ ಶಿಲಾಯುಗ ಸಂಸ್ಕೃತಿ, ಕ್ರಿ.ಪೂ. 100 ರಿಂದ ಕ್ರಿ.ಶ. 300 ರ ಕಾಲಮಾನದವರೆಗೆ ಆದಿಚಾರಿತ್ರಿಕ ಇತಿಹಾಸದ ಕುರುಹುಗಳು ಇಲ್ಲಿ ದೊರಕಿವೆ. ರೋಂನ ಅಗಸ್ಟಸ್ ರಾಜನ ಕಾಲದ ನಾಣ್ಯದ ಅಚ್ಚಿನಲ್ಲಿ ಗ್ರೀಕ್ ದೇವತೆ ಲಿವಿಯಾ ಚಿತ್ರ ಇರುವ ಮುದ್ರೆ ದೊರಕಿದೆ.

1993 ರಿಂದ 1997 ರವರೆಗೆ ಹಾಗೂ 2006 ರಿಂದ 2008 ರವರೆಗೆ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಜೊತೆಯಾಗಿ ತಲಕಾಡಿನಲ್ಲಿ ಸಂಶೋಧನೆ ಮಾಡಿ ದಕ್ಷಿಣ ಭಾರತದಲ್ಲೇ ಎಲ್ಲೂ ಕಂಡು ಕೇಳರಿಯದ ಮಹತ್ವಪೂರ್ಣ ಸಾಂಸ್ಕೃತಿಕ, ಧಾರ್ಮಿಕ ವಿಷಯಗಳು ಬೆಳಕಿಗೆ ಬಂದಿವೆ.

ಭೂಸಂಶೋಧನೆಯಿಂದ ಕರ್ನಾಟಕದಲ್ಲೇ ಅತ್ಯಂತ ಪುರಾತನವಾದ 2 ಮತ್ತು 3 ನೇ ಶತಮಾನದ ದೇವಾಲಯ, ಪ್ರಾಚೀನ ಜೈನ ಬಸದಿ ಶೋಧನೆಯಾಗಿದೆ. ಬಳೆ ಬಾವಿಗಳು, 17 ನೇ ಶತಮಾನದ 2 ಮೀ. ಅಗಲ, 15 ರಿಂದ 20 ಮೀ. ಎತ್ತರ ಇರುವ ಗಾಳಿ ತಡೆಗೋಡೆಯ ಶೋಧನೆಯಾಗಿದೆ.

ಈ ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಕಪ್ಪು, ಕೆಂಪು, ಕಪ್ಪು

ಮಿಶ್ರಿತ ಕೆಂಪು ದ್ವಿವರ್ಣದ ಮಡಕೆಗಳು, ಗೀರುರೇಖಾ ಗುರುತುಗಳು, ಮಡಕೆಗಳ ಮೇಲೆ ತೆಳು ಅಲೆಯ ಅಲಂಕಾರ ಮಾಡಿರುವುದು ದೊರಕಿದೆ.

ಈ ನೆಲೆಯಲ್ಲಿ ಒಂದು ಸಣ್ಣ ಕುಲುಮೆ ಪತ್ತೆಯಾಗಿದ್ದು, ಸುಟ್ಟ ನೆಲ, ಸಣ್ಣ ಸಣ್ಣ ಬೂದಿಗುಪ್ಪೆ, ಇದ್ದಿಲು ರಾಶಿ, ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಒಡೆದ ಮಡಕೆಗಳು, ಬೋಗುಣಿಗಳು, ಸುಟ್ಟ ಮಣ್ಣಿನಿಂದ ನಿರ್ಮಿತವಾದ ಕುಳಿತುಕೊಳ್ಳುವ ಮಣೆ ಇತ್ಯಾದಿಗಳು ಕಂಡುಬಂದಿವೆ. ಕುಲುಮೆಯ ಒಂದು ಪಾರ್ಶ್ವದಲ್ಲಿ ಊದುಕೊಳವೆಗಾಗಿ ರಂಧ್ರವಿತ್ತು. ಈ ಕುಲುಮೆಯಲ್ಲಿ ಅಕ್ಕಸಾಲಿಗನೊಬ್ಬ ರೋಮನ್ ನಾಣ್ಯದ ನಕಲುಗಳನ್ನು ತಯಾರಿಸುತ್ತಿದ್ದುದೂ ಅಲ್ಲಿಯೇ ದೊರಕಿದೆ. ರೋಮನ್ ನಾಣ್ಯದ ಹಿಮ್ಮುಖದ ಚಿತ್ರವನ್ನು ಹೊಂದಿರುವುದು ಮಣ್ಣಿನ ಮುದ್ರೆಯಿಂದ ತಿಳಿಯುತ್ತದೆ. ಕರಗಿಸಿದ ಚಿನ್ನವನ್ನು ತುಂಬಿ ನಾಣ್ಯವನ್ನು ತಯಾರಿಸಲಾಗುತ್ತಿತ್ತು. ಹಿಮ್ಮುಖವನ್ನು ಹೊಂದಿರುವ ನಾಣ್ಯದ ಮುದ್ರೆ ಮಾತ್ರ ಈಗ ಲಭ್ಯವಾಗಿದ್ದು, ಮುಮ್ಮುಖದ ಮುದ್ರೆ ದೊರಕಿಲ್ಲ. ಅದರಲ್ಲಿ ಪೀಠದ ಮೇಲೆ ಕುಳಿತಿರುವ ಸ್ತ್ರೀಯೊಬ್ಬಳ ಚಿತ್ರವಿದ್ದು ಅದನ್ನು ಗ್ರೀಸಿನ ನ್ಯಾಯದೇವತೆ ಎಂದು ನಂಬಲಾಗಿದೆ. ನ್ಯಾಯದೇವತೆ ಒಂದು ಕೈಯಲ್ಲಿ ಉದ್ದವಾದ ದಂಡವನ್ನು, ಇನ್ನೊಂದು ಕೈಯಲ್ಲಿ ಪೈರಿನ ತೆನೆಗಳನ್ನು ಹಿಡಿದಿದ್ದಾಳೆ. ಈಕೆಯ ಚಿತ್ರದ ಪಕ್ಕದಲ್ಲಿ ಮ್ಯಾಕ್ಸಿಮ್ ಪಾಂಟಿಂಫ್ ಎಂಬ ಗ್ರೀಕ್ ಅಕ್ಷರಗಳ ಬರಹವಿದೆ. ಇಲ್ಲಿ ದೊರಕಿರುವ ನಾಣ್ಯ ಮತ್ತು ಮಡಕೆಚೂರುಗಳು ಸುಮಾರು 2ನೇ ಶತಮಾನದವು ಎಂದು ಗುರುತಿಸಲಾಗಿದೆ. ಈ ನಾಣ್ಯಗಳ ಮುದ್ರೆ ಮೇಲಿನ ಚಿತ್ರ ರೋಮ್‌ನ ಪ್ರಸಿದ್ಧ ಚಕ್ರವರ್ತಿಗಳಾದ ಅಗಸ್ಟಸ್ ಮತ್ತು ಅವನ ಮಗ ಟೈಬೀರಿಯಸ್‌ನ ಚಿನ್ನದ ನಾಣ್ಯಗಳ ಹಿಮ್ಮುಖವನ್ನು ಹೋಲುತ್ತದೆ. ಇದು ತಲಕಾಡಿನ ಉತ್ಖನನದಲ್ಲಿ ನಕಲಿ ರೋಮನ್ ನಾಣ್ಯ ತಯಾರಿಕೆಯ ಒಂದು ಕಾರ್ಯಾಗಾರ ಇಲ್ಲಿ ಕೆಲಸ ಮಾಡುತ್ತಿತ್ತು ಎಂಬುದನ್ನು ದೃಢೀಕರಿಸಿದೆ. ಕಾರ್ಯಾಗಾರದ ಸಾಂದರ್ಭಿಕ ಚಿತ್ರಗಳನ್ನು ಪರಿಶೀಲಿಸಿದಾಗ ಅಲ್ಲಿಯ ಕೆಲಸ ಕ್ಷಿಪ್ರ ದಾಳಿಯಿಂದ ಸ್ಥಗಿತಗೊಂಡಿರುವಂತೆ ತೋರುತ್ತದೆ.

ಗಾಜಿನ, ಕಲ್ಲಿನ, ಮಣ್ಣಿನ, ದಂತದ ಮಣಿಗಳು, ಸಮಾಧಿಯಲ್ಲಿ ನಲ್ಲಿಯಿರುವ ನೀರಿನ ಅಥವಾ ಮದ್ಯದ ಹೂಜಿಗಳು, ಬುಗುರಿಯಾಕಾರದ ಮಡಕೆ, ತೆಳ್ಳನೆಯ ಉದ್ದದ ಕಂಠ, ಮಿಂಚುವ ಕೆಂಬಣ್ಣದ ವಿವಿಧ ಆಕಾರದ ಮಡಿಕೆಗಳು ದೊರಕಿವೆ. ಆದರೆ ಕಲ್ಲಿನ ಸಮಾಧಿ ಕೋಣೆಗಳು, ಅಸ್ಥಿಪಂಜರಗಳು ದೊರಕಿಲ್ಲ. ಮಾರ್ಟಿಮರ್ ವೀಲರ್ ಅವರಿಗೆ ಪಾಂಡಿಚೆರಿಯ ಬಳಿ ಅರಿಕಮೇಡುವಿನಲ್ಲಿ ದೊರಕಿರುವ ಅವಶೇಷಗಳ ಹಾಗೆ ಇಲ್ಲಿನ ನೆಲೆಯ ಅವಶೇಷಗಳಿವೆ. ಇದರಿಂದ ತಲಕಾಡಿಗೂ ಹಾಗೂ ಅರಿಕಮೇಡುವಿಗೂ ಸಾಂಸ್ಕೃತಿಕ ಸಂಬಂಧವಿತ್ತು ಎಂದು ತಿಳಿಯಲು ಸಹಕಾರಿಯಾಗಿದೆ.

ನೆಲೆಯಲ್ಲಿ ಮರಳುಗಾಳಿಯನ್ನು ತಡೆಯಲು 2 ಮೀ. ಅಗಲದ, 100 ಮೀ. ಉದ್ದದ ಇಟ್ಟಿಗೆಯ ತಡೆಗೋಡೆ, ನೀರು ಸರಬರಾಜು ವ್ಯವಸ್ಥೆ, ನೀರಿನ ಕೊಳಾಯಿಗಳು,

ಸ್ನಾನದ ಕೊಳ, ಬಾವಿಯಂತಿರುವ ಇರುವ ಇಂಗುಗುಂಡಿ, ರಿಂಗ್ (ಕೊಳವೆ) ಬಾವಿಗಳು, ಹಾಗೂ ಕರ್ನಾಟಕದ ಅತ್ಯಂತ ಪ್ರಾಚೀನ ಜೈನ ಬಸದಿ ಶೋಧವಾಗಿವೆ.

ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲದಿಂದ ಹಿಡಿದು ಮಧ್ಯಕಾಲೀನ ಯುಗದ ಕೊನೆಯವರೆಗೆ ನಿರಂತರವಾಗಿ ಬೆಳೆದು ಬಂದ ಸಂಸ್ಕೃತಿಯ ವಿವಿಧ ಸ್ತರಗಳನ್ನು ತಲಕಾಡು ಸಮರ್ಪಕವಾಗಿ ಪ್ರದರ್ಶಿಸುತ್ತದೆ. ಇಂತಹ ಪ್ರಾಚೀನ ನೆಲೆಯನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಗತ ಇತಿಹಾಸವನ್ನು ತಿಳಿಸಬೇಕಿದೆ.

**ಗ್ರಾಮನಾಮ :** ಈ ಊರನ್ನು ದವಲನಪುರ, ತಲೈಕ್ಕಾಡು, ರಾಜರಾಜಪುರ, ಗಜಾರಣ್ಯಕ್ಷೇತ್ರ ಎಂದು, ಕನ್ನಡದಲ್ಲಿ ತಲೆಕಾಡು ಅಥವಾ ತಲಕಾಡು ಎಂದೂ ಕರೆಯುತ್ತಾರೆ. ಶಾಸನಗಳಲ್ಲಿ ತಲೈಕಾಡು, ತಲವನಪುರ, ತಲಕಾಡು, ಗಜಾರಣ್ಯ ಕ್ಷೇತ್ರ, ಕರಿವನವೆಂದು, ಚೋಳರ ಕಾಲದಲ್ಲಿ ರಾಜರಾಜಪುರ ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಶತಮಾನಗಳಿಂದ ಮರಳಿನಲ್ಲಿ ಹೂತುಹೋಗಿರುವ ಹಲವಾರು ದೇವಾಲಯಗಳಿಂದಾಗಿ ತಲಕಾಡನ್ನು "ಪ್ರೇತ ಪಟ್ಟಣ" ಎಂದೂ ಕರೆಯಲಾಗುತ್ತದೆ.

**ಸ್ಥಳಪುರಾಣ:** ತಾಲ ಮತ್ತು ಕಾಡು ಎಂಬ ಬೇಡರ ಅವಳಿ ಸಹೋದರರಿಂದ ತಲಕಾಡು ಎಂಬ ಹೆಸರು ಬಂದಿತು ಎಂಬುದು ಸ್ಥಳೀಯ ಐತಿಹ್ಯ.

ದಂತಕಥೆಗಳ ಪ್ರಕಾರ, ಇದು ಇಬ್ಬರು ಸಹೋದರರಿಂದ ಪ್ರಾರಂಭವಾಯಿತು – ತಲ ಮತ್ತು ಕಾಡು. ಅವರು ಆನೆಗಳು ಪೂಜಿಸುತ್ತಿದ್ದ ಒಂದು ಮರವನ್ನು ನೋಡಿದರು. ಅನಂತರ ಅದನ್ನು ಕಡಿದರು. ಮರದಲ್ಲಿ ರಕ್ತಸ್ರಾವವಾಗುವುದನ್ನು ಕಂಡು ಅವರು ಗಾಬರಿಗೊಂಡರು. ನಂತರ, ಒಂದು ಧ್ವನಿಯು ಅದೇ ಮರದ ಎಲೆಗಳನ್ನು ಬಳಸಿ ಅದನ್ನು ಗುಣಪಡಿಸುವಂತೆ ಅವರಿಗೆ ಆದೇಶಿಸಿತು. ಮರವನ್ನು ಪುನಃಸ್ಥಾಪಿಸಿದ ನಂತರ, ರಕ್ತವು ಹಾಲಾಗಿ ಬದಲಾಯಿತು, ಸಹೋದರರು ಹಾಲನ್ನು ಕುಡಿದು ಮೋಕ್ಷವನ್ನು ಪಡೆದರು. ನಂತರ, ಆ ಇಬ್ಬರು ಸಹೋದರರ ಹೆಸರಿನಿಂದ ಆ ಪಟ್ಟಣಕ್ಕೆ ತಲಕಾಡು ಎಂದು ಹೆಸರಿಡಲಾಯಿತು. ಇದನ್ನು ಸಂಸ್ಕೃತದಲ್ಲಿ ದಲ–ವನ ಎಂದು ಅನುವಾದಿಸಲಾಗಿದೆ. ಸಹೋದರರನ್ನು ಪ್ರತಿನಿಧಿಸುವ ಎರಡು ಕಲ್ಲಿನ ಶಿಲ್ಪಗಳನ್ನು ವೀರಭದ್ರಸ್ವಾಮಿ ದೇವಾಲಯದ ಮುಂದೆ ನಿಲ್ಲಿಸಲಾಗಿದೆ.

ಈ ಊರಿನ ಪ್ರತೀತಿಗಳೆಂದರೆ, (1) “ತಲಕಾಡು ಮರಳಾಗಲಿ, ಮಾಲಂಗಿ ಮಡುವಾಗಲಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ” ಎಂಬ ಶಾಪ ಅಲಮೇಲಮ್ಮನವರಿಂದ ಬಂದಿದೆ ಮತ್ತು (2) ಶ್ರೀರಾಮ ವನವಾಸ ಕಾಲದಲ್ಲಿ ಲಂಕೆಗೆ ಹೋಗುವಾಗ ಇಲ್ಲಿ ವಿಶ್ರಾಂತಿ ಪಡೆದ ಸ್ಥಳ.

1. ತಲ–ತಳ, ಅಡಿ, ಬುಡ, ಕೆಳಗೆ ಎಂದರ್ಥ. ಕಾಡು–ಅರಣ್ಯ, ಅರಣ್ಯದ ಪಕ್ಕದಲ್ಲಿರುವ, ಭೂಪ್ರದೇಶದಲ್ಲಿರುವ ಗ್ರಾಮ ಎಂಬರ್ಥದಲ್ಲಿ ತಿಳಿಯಬಹುದು.

2. ಗಜಾರಣ್ಯ – ಗಜ+ಅರಣ್ಯ, ಗಜ–ಆನೆ. ಅರಣ್ಯ ದಟ್ಟವಾಗಿ ಗಿಡ ಮರಗಳು ಬೆಳೆದ ಸ್ಥಳ. ದಟ್ಟವಾಗಿ ಬೆಳೆದ ಗಿಡಮರಗಳ ಸ್ಥಳದಲ್ಲಿ ಆನೆಗಳು ವಾಸಿಸುತ್ತಿದ್ದ ಭೂಪ್ರದೇಶ ಎಂಬ ಹೆಸರು ಬಂದಿದೆ ಎನ್ನುತ್ತಾರೆ.

ಶಿವನನ್ನು ಗಜಾರಣ್ಯನಾಥನೆಂದೂ ಕರೆಯುತ್ತಾರೆ. ಆನೆಯ ಜನ್ಮ ಪಡೆದಿದ್ದ ಸೋಮದತ್ತನೆಂಬ ಋಷಿ ಮತ್ತು ಆತನ ಶಿಷ್ಯರು ಇಲ್ಲಿ ಮೋಕ್ಷ ಪಡೆದಿದ್ದರಿಂದ ಈ ಪ್ರದೇಶಕ್ಕೆ ಗಜಾರಣ್ಯ ಕ್ಷೇತ್ರ ಎಂಬ ಹೆಸರು ಬಂದಿದೆ ಎನ್ನುತ್ತಾರೆ.

3. ಕರಿವನ – ಕರಿ+ವನ, ಕರಿ–ಆನೆ, ವನ–ಅರಣ್ಯ, ಕಾಡು. ಅರಣ್ಯ ಅಥವಾ ಕಾಡಿನ ಭೂಭಾಗದಲ್ಲಿ ಆನೆಗಳು ವಾಸಿಸುತ್ತಿದ್ದ ಸ್ಥಳ ಎಂಬರ್ಥವನ್ನು ಗುರುತಿಸಬಹುದು.

4. ತಲವನಪುರ– ತಲ+ವನ+ಪುರ, ತಲ – ತಳ, ಅಡಿ, ಬುಡ, ಕೆಳಗೆ ಎಂದರ್ಥ, ವನ– ಅರಣ್ಯ, ಕಾಡು. ಪುರ–ಪಟ್ಟಣ, ನಗರ, ಪುರ – ಸಣ್ಣ ಪ್ರವಾಹ, ಕಾಲುವೆ. ಅರಣ್ಯದ ಪಕ್ಕದಲ್ಲಿ ಇರುವ ಪಟ್ಟಣ/ನಗರ ಎಂಬರ್ಥದಲ್ಲಿ ಗುರುತಿಸ ಬಹುದು ಇಲ್ಲಾ ಅರಣ್ಯದ ಪಕ್ಕದಲ್ಲಿ ಹರಿಯುವ ಸಣ್ಣಪ್ರವಾಹ/ಕಾಲುವೆ ಹರಿಯುವ ಪ್ರದೇಶ ಎಂಬರ್ಥದಲ್ಲಿ ಗುರುತಿಸಬಹುದು

ಒಟ್ಟಾರೆ, ಅರಣ್ಯದ ಪಕ್ಕದ ಭೂಭಾಗದಲ್ಲಿ ಇರುವ ಸ್ಥಳ ಎಂಬರ್ಥದಲ್ಲಿ ಸ್ಥಳನಾಮವನ್ನು ಅರ್ಥೈಸಬಹುದಾಗಿದೆ.

ಇಲ್ಲಿ 12 ವರ್ಷಗಳಿಗೊಮ್ಮೆ ಇತಿಹಾಸ ಪ್ರಸಿದ್ಧವಾದ ಪಂಚಲಿಂಗ ದರ್ಶನ ನಡೆಯುತ್ತದೆ. ಕೀರ್ತಿನಾರಾಯಣ, ವೈದ್ಯನಾಥೇಶ್ವರ, ಮಲ್ಲಿಕಾರ್ಜುನ, ಪಾತಾಳೇಶ್ವರ, ಮರಳೇಶ್ವರ ಮತ್ತು ಅರ್ಕೇಶ್ವರ ಎಂಬ ಪ್ರಸಿದ್ಧ ದೇವಾಲಯಗಳಿವೆ. ಒಟ್ಟು 30ಕ್ಕೂ ಹೆಚ್ಚು ದೇವಾಲಯಗಳಿರುವ ಸ್ಥಳ. ತಲಕಾಡು ಗಂಗರ ರಾಜಧಾನಿಯಾಗಿತ್ತು; ಹೊಯ್ಸಳರ ಉಪರಾಜಧಾನಿಯಾಗಿತ್ತು.

ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಮೈಸೂರು ಒಡೆಯರು, ಪಾಳೆಗಾರರು ಆಳ್ವಿಕೆ ನಡೆಸಿದ ಸ್ಥಳ ತಲಕಾಡು. ತಲಕಾಡಿನಲ್ಲಿ ಹಳೆ ತಲಕಾಡು, ಹೊಸ ತಲಕಾಡು ಎಂಬ ಎರಡು ಭಾಗಗಳಿವೆ. ಹಳೆ ತಲಕಾಡು ಮರಳಿನಲ್ಲಿ ಮುಚ್ಚಿ ಹೋಗಿದೆ. ಹೊಸ ತಲಕಾಡು ಇತ್ತೀಚೆಗೆ ನಿರ್ಮಾಣಗೊಂಡಿದೆ.

ಸಂಸ್ಕೃತ ದಳವನಪುರದಲ್ಲಿ ತಲೆಕಾಡ್ ಅಥವಾ ತಲಕಾಡು ನಗರದ ಆರಂಭಿಕ ಅಧಿಕೃತ ಉಲ್ಲೇಖವು ಗಂಗರಾಜರ ಸಾಲಿಗೆ ಸಂಬಂಧಿಸಿದೆ. ಹಳೆಯ ವೃತ್ತಾಂತದ ಪ್ರಕಾರ (ಕ್ರಿ.ಶ. 247–266) ಈ ಸ್ಥಳವನ್ನು ಹುಡುಕಲು ನಿಯೋಜಿಸಲ್ಪಟ್ಟ ಹರಿವರ್ಮ, ಕೊಯಮತ್ತೂರು ದೇಶದ ಸ್ಕಂದಪುರದಲ್ಲಿ (ಮೋಯಾರ್ ಭವಾನಿಗೆ ಹರಿಯುವ ಸ್ಥಳದ ಬಳಿ) ಇದ್ದರೂ, ಆದರೆ ಕರ್ಣಾಟ ದೇಶದ ದಳವನಪುರ ಎಂಬ ಮಹಾನಗರದಲ್ಲಿ ವಾಸಿಸುತ್ತಿದ್ದನು. ತಳಕಾಡ್ ರಾಜಧಾನಿಯಾದ ನಂತರ ಈ ಪ್ರಬಲ

ಸಾರ್ವಭೌಮರು ಮತ್ತು ನಂತರದ ರಾಜರು ಪಟ್ಟಾಭಿಷೇಕ ಮಾಡಿಕೊಂಡರು.

ಹನ್ನೊಂದನೇ ಶತಮಾನದ ಆರಂಭದಲ್ಲಿ, ಪಶ್ಚಿಮ ಗಂಗರು ಚೋಳರಿಗೆ ಶರಣಾದರು. ಅವರು ತಲಕಾಡನ್ನು ವಶಪಡಿಸಿಕೊಂಡು ಅದಕ್ಕೆ ರಾಜರಾಜಪುರ ಎಂಬ ಹೆಸರಿಟ್ಟರು. ಆದರೆ ಸುಮಾರು ಒಂದು ಶತಮಾನದ ನಂತರ ಚೋಳರನ್ನು ಮೈಸೂರಿನಿಂದ ಓಡಿಸಿದ ಹೊಯ್ಸಳ ರಾಜ ವಿಷ್ಣುವರ್ಧನ ತಲಕಾಡನ್ನು ಮತ್ತೆ ವಶಪಡಿಸಿಕೊಂಡನು. ಆಗ ತಲಕಾಡು ಏಳು ಪಟ್ಟಣಗಳು ಮತ್ತು ಐದು ಮಠಗಳಿಂದ ಕೂಡಿತ್ತು. ನದಿಯ ಎದುರುಬದಿಯಲ್ಲಿರುವ ಮಾಯಲಂಗಿ ಅಥವಾ ಮಾಲಿಂಗಿ ಪಟ್ಟಣವು ಸಹ ಒಂದು ದೊಡ್ಡ ಸ್ಥಳವಾಗಿತ್ತು, ಮತ್ತು ಜನನಾಥಪುರ ಎಂಬ ಹೆಸರನ್ನು ಹೊಂದಿತ್ತು.

ಹದಿನಾಲ್ಕನೇ ಶತಮಾನದ ಮಧ್ಯಭಾಗದವರೆಗೆ, ಇದು ಹೊಯ್ಸಳರ ವಶದಲ್ಲಿತ್ತು ಮತ್ತು ನಂತರ ವಿಜಯನಗರ ಸಾರ್ವಭೌಮರ ಕೈಗೆ ಸೇರಿತು.

**ತಲಕಾಡಿನ ಶಾಪ :** ಕ್ರಿ.ಶ. 1610ರಲ್ಲಿ ಮೈಸೂರು ಅರಸರು ತಲಕಾಡನ್ನು ವಶಪಡಿಸಿಕೊಂಡರು. ಶ್ರೀರಂಗಪಟ್ಟಣದಲ್ಲಿ ವಿಜಯನಗರ ಸಂಸ್ಥಾನದ ಪ್ರತಿನಿಧಿಯಾಗಿದ್ದ ತಿರುಮಲರಾಜ ಅಥವಾ ಶ್ರೀರಂಗರಾಯ ಎಂಬುವನು ಗುಣಪಡಿಸಲಾಗದ ಕಾಯಿಲೆಯಿಂದ ಬಳಲುತ್ತಿದ್ದು ವೈದ್ಯನಾಥೇಶ್ವರ ದೇವಾಲಯವನ್ನು ನೋಡಲು ತಲಕಾಡಿಗೆ ಬಂದನು. ಮೈಸೂರಿನ ರಾಜ ಒಡೆಯರು ಶ್ರೀರಂಗರಾಯರ ಪತ್ನಿ ರಾಣಿ ಅಲಮೇಲಮ್ಮನವರ ಆಭರಣಗಳನ್ನು ಪಡೆಯಲು ಬಯಸಿದ್ದರು. ಅವುಗಳನ್ನು ಪಡೆಯಲು ಸಾಧ್ಯವಾಗದ ಕಾರಣ, ಯಾವುದೋ ನೆಪ ಹೂಡಿ ವಶಪಡಿಸಿಕೊಳ್ಳಲು ಉತ್ಸುಕರಾಗಿದ್ದರು, ಅವರು ಸೈನ್ಯವನ್ನು ರಚಿಸಿ ರಾಣಿಯ ವಿರುದ್ಧ ಸಂಚು ಹೂಡಿದರು. ಅಲಮೇಲಮ್ಮ ಕಾವೇರಿಯ ದಡಕ್ಕೆ ಹೋಗಿ, ಆ ಒಡವೆಗಳನ್ನು ಮಾಲಂಗಿಯ ಮಡುವಿನಲ್ಲಿ ಎಸೆದು, ಮಾಲಂಗಿಯ ಎದುರು ನದಿಯಲ್ಲಿ ಮುಳುಗಿದರು. ಆಗ ಮೂರು ಶಾಪಗಳನ್ನು ಹೇಳಿದರು ಎಂಬ ಐತಿಹ್ಯ ಇದೆ. ಆದರೆ ನದಿಗೆ ಹಾರುವ ಮೊದಲು, ಅವಳು ಮೂರು ಬಾರಿ ಶಾಪವನ್ನು ಹೇಳಿದಳು – "ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ" ಎಂದು.

ಹಳೆಯ ನಗರ ತಲಕಾಡು ಸಂಪೂರ್ಣವಾಗಿ ಮರಳಿನ ಕೆಳಗೆ ಹೂತುಹೋಗಿದ್ದು, ಸುಮಾರು ಒಂದು ಮೈಲಿ ಉದ್ದದವರೆಗೆ ವಿಸ್ತರಿಸಿದೆ, ಎರಡು ಗೋಪುರಗಳ ಮೇಲ್ಭಾಗಗಳು ಮಾತ್ರ ಗೋಚರಿಸುತ್ತವೆ. ಮರಳು ದಿಬ್ಬಗಳು ವರ್ಷಕ್ಕೆ 9 ಅಥವಾ 10 ಅಡಿಗಳಷ್ಟು ಪ್ರಮಾಣದಲ್ಲಿ ಪಟ್ಟಣದ ಮೇಲೆ ಬೀಳುತ್ತಿದ್ದವು. ಮುಖ್ಯವಾಗಿ ನೈಋತ್ಯ ಮಾನ್ಸೂನ್ ಸಮಯದಲ್ಲಿ ಮೂರು ಕಡೆಗಳಲ್ಲಿ ಹತ್ತಿರಕ್ಕೆ ಮರಳು ಒತ್ತಿದಾಗ. ತಲಕಾಡಿನ ನಿವಾಸಿಗಳು ಪದೇಪದೇ ತಮ್ಮ ಮನೆಗಳನ್ನು ತ್ಯಜಿಸಿ ಒಳನಾಡಿಗೆ ಹಿಮ್ಮೆಟ್ಟುವಂತೆ ಆಯಿತು. ಆದಾಗ್ಯೂ ವಿಜಯನಗರ ಸಾಮ್ರಾಜ್ಯ ಪ್ರಾಬಲ್ಯಕ್ಕೆ ಬಂದ ಮೇಲೆ

ತಲಕಾಡಿನವರೇ ಆಗಿದ್ದ ಮಾಧವಮಂತ್ರಿ ಈ ಊರಿನ ಸಮೀಪದಲ್ಲಿ ಕಾವೇರಿ ನದಿಗೆ ಅಣೆಕಟ್ಟು (ಕ್ರಿ.ಶ. 1342) ಕಟ್ಟಿಸಿದ್ದಲ್ಲದೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ. ಕಾಲುವೆಯಿಂದ ನೆರೆಹೊರೆಯಲ್ಲಿ ಸಮೃದ್ಧವಾದ ತೇವಾಂಶದ ಕೃಷಿಯಿಂದಾಗಿ ಪಟ್ಟಣದ ಜನಸಂಖ್ಯೆಯೂ ಹೆಚ್ಚತೊಡಗಿತು.

ತಲಕಾಡಿನಲ್ಲಿ ಮೂವತ್ತಕ್ಕೂ ಹೆಚ್ಚು ದೇವಾಲಯಗಳು ಮರಳಿನ ಕೆಳಗೆ ಇವೆ. ಆದರೆ ಕೀರ್ತಿ ನಾರಾಯಣ ದೇವಾಲಯವನ್ನು ಯಶಸ್ವಿಯಾಗಿ ಉತ್ಖನನ ಮಾಡಲಾಗಿದೆ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ, ಆನಂದೇಶ್ವರ ಮತ್ತು ಗೌರೀಶಂಕರ ಎಂಬ ಎರಡು ದೇವಾಲಯಗಳು ಪತ್ತೆಯಾಗಿವೆ. ಪಾತಾಳೇಶ್ವರ ದೇವಾಲಯದ ಹೊರ ಗೋಡೆಗಳ ಮೇಲೆ ನಾಲ್ಕು ತುಣುಕು ದಾಖಲೆಗಳು ಕಂಡುಬಂದಿವೆ. ಇವುಗಳಲ್ಲಿ ಒಂದು ಗಂಗರ ಕಾಲದ ಹಳೆಗನ್ನಡ ಶಾಸನವಾಗಿದ್ದು, ಉಳಿದವು ತಮಿಳಿನಲ್ಲಿವೆ.

ಆನಂದೇಶ್ವರ ದೇವಾಲಯುವನ್ನು ಹೈದರನ ಸಮಕಾಲೀನನಾಗಿದ್ದ ಚಿದಾನಂದಸ್ವಾಮಿ ಎಂಬುವನು ನಿರ್ಮಿಸಿದ್ದಾನೆಂದು ಹೇಳಲಾಗುತ್ತದೆ. ಚಿದಾನಂದಸ್ವಾಮಿ ಒಮ್ಮೆ ಪೂರ್ಣಪ್ರವಾಹದಲ್ಲಿದ್ದ ಕಾವೇರಿ ನದಿಯನ್ನು ಬಾಳೆಎಲೆಯ ಮೇಲೆ ಕುಳಿತು ದಾಟಿದನು. ಅವನ ಪವಾಡವನ್ನು ನೋಡಿದ ಹೈದರನು ಅವನನ್ನು ಬಹಳವಾಗಿ ಗೌರವಿಸಿದನು ಮತ್ತು ಅವನು ಸ್ಥಾಪಿಸಿದ ದೇವಾಲಯಕ್ಕೆ ಭೂಮಿಯನ್ನು ದಾನವಾಗಿ ನೀಡಿದನು ಎಂಬ ಕಥೆಗೆ ಪ್ರಚಲಿತವಿದೆ. ಗೌರೀಶಂಕರ ದೇವಾಲಯದಲ್ಲಿರುವ ಕನ್ನಡ ಶಾಸನವು ಈ ದೇವಾಲಯವನ್ನು ಚಿಕ್ಕದೇವರಾಜ ಒಡೆಯರ್ ಅವರ (1672–1704) ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ ಎಂದು ಹೇಳುತ್ತದೆ.

**ತಲಕಾಡಿನ ಜನಪ್ರಿಯ ಶಿವದೇವಾಲಯಗಳು :** ಐತಿಹ್ಯಗಳ ಪ್ರಕಾರ, 30 ದೇವಾಲಯಗಳು ಮರಳಿನ ದಿಬ್ಬಗಳಲ್ಲಿ ಹೂತುಹೋಗಿವೆ. ಗಂಗರು, ಹೊಯ್ಸಳರು, ಚೋಳರಲ್ಲದೆ, ಹೆಚ್ಚಿನ ದೇವಾಲಯಗಳನ್ನು ವಿಜಯನಗರ ಸಾಮ್ರಾಜ್ಯದ ರಾಜರುಗಳು ನಿರ್ಮಿಸಿದ್ದಾರೆ ಎಂದು ನಂಬಲಾಗಿದೆ. ಇತರರೂ ಸಹ ಕೊಡುಗೆ ನೀಡಿದ್ದಾರೆ

ಆದಾಗ್ಯೂ, ಕೆಲವೇ ದೇವಾಲಯಗಳನ್ನು ಮಾತ್ರ ಉತ್ಖನನ ಮಾಡಲಾಗಿದೆ. ಅವುಗಳಲ್ಲಿ ಐದು ಶಿವ ದೇವಾಲಯಗಳೆಂದರೆ, ತಲಕಾಡಿನ ಪೂರ್ವಭಾಗದಲ್ಲಿ ಅರ್ಕೇಶ್ವರ, ದಕ್ಷಿಣದಲ್ಲಿ ಪಾತಾಳೇಶ್ವರ, ಪಶ್ಚಿಮದಲ್ಲಿ ಮರಳೇಶ್ವರ, ಉತ್ತರದಲ್ಲಿ ಮಲ್ಲಿಕಾರ್ಜುನೇಶ್ವರ ಇವುಗಳ ಮಧ್ಯ ವೈದ್ಯನಾಥೇಶ್ವರ ವಿರಾಜಮಾನವಾಗಿದ್ದಾರೆ. ಇವು ತಲಕಾಡಿನ ಜನಪ್ರಿಯ ದೇವಾಲಯಗಳಾಗಿವೆ.

**1. ಅರ್ಕೇಶ್ವರ ದೇವಸ್ಥಾನ :** ತಲಕಾಡಿನಿಂದ ಪೂರ್ವಕ್ಕೆ 5 ಕಿ.ಮೀ. ದೂರದಲ್ಲಿ ವಿಜಯಪುರ ಗ್ರಾಮದ ಬಳಿ ಈ ದೇಗುಲ ಇದೆ. ಮೂಲ ದೇವಾಲಯ ಗಂಗರ

ಕಾಲದ್ದು. ಇದನ್ನು ನಂತರ ಮರುನಿರ್ಮಾಣ ಮಾಡಲಾಗಿದೆ. ಈ ದೇವಸ್ಥಾನವು ಇತರ ಶಿವದೇವಾಲಯಗಳಿಂದ ಸ್ವಲ್ಪ ದೂರದಲ್ಲಿದ್ದು ಪ್ರತ್ಯೇಕವಾಗಿದೆ. ಸುಂದರವಾದ, ಆಕರ್ಷಕವಾದ ಅರ್ಕೇಶ್ವರ ಶಿವಲಿಂಗ ಇದೆ. ಇದನ್ನು ಹೊರತುಪಡಿಸಿ ಈ ದೇವಾಲಯದಲ್ಲಿ ಕಂಡುಬರುವ ವಿಗ್ರಹಗಳು ಭೈರವ, ಅಭಯಂಕರ ಲಿಂಗ ಮತ್ತು ದುರ್ಗಾದೇವತೆ ಹಾಗೂ ದೇವಾಲಯದ ಪ್ರವೇಶದ್ವಾರದಲ್ಲಿ ವಾಸ್ತುಯಂತ್ರವಿರುವ ಬಂಡೆಯಿದೆ. ಗರ್ಭಗುಡಿಯ ಮೇಲೆ ಚಿಕ್ಕ ಗೋಪುರ ಇದೆ. ವೀರಗಲ್ಲುಗಳ ಶಿಲ್ಪಗಳನ್ನು ಕಾಣಬಹುದು. ಅನಾರೋಗ್ಯಪೀಡಿತ ರಾಸುಗಳನ್ನು ಈ ಬಂಡೆಗೆ ಕಟ್ಟಿದರೆ ಅವು ಗುಣಮುಖವಾಗುತ್ತದೆ ಎಂಬುದು ಸ್ಥಳೀಯರ ನಂಬಿಕೆ.

ಗ್ರಹಗಳಿಗೆಲ್ಲಾ ಅಧಿಪತಿಯಾಗಲು ಬಯಸಿದ ಸೂರ್ಯನಿಂದ ಪೂಜಿಸಲ್ಪಟ್ಟ ಶಿವಲಿಂಗವೇ ಅರ್ಕನಾಥೇಶ್ವರನೆಂದು ಪ್ರಸಿದ್ಧಿಯಾಗಿದೆ ಎಂದು ಪುರಾಣದಲ್ಲಿ ಉಲ್ಲೇಖವಿದೆ. ವೈದ್ಯನಾಥೇಶ್ವರ ದೇಗುಲದ ಪೂರ್ವದಿಕ್ಕಿಗೆ ಮೂರು ಮೈಲಿ ದೂರದ ವಿಜಯಪುರದಲ್ಲಿದ್ದು, ಇದು ಸಕಲ ಸಂಕಷ್ಟ ನಿವಾರಕ ಲಿಂಗವೆನಿಸಿದೆ. ಅರ್ಕನಾಥೇಶ್ವರನ ಅರ್ಚನೆಗೆ ಮಾಘ ಶುದ್ಧ ಸಪ್ತಮಿ ಬಹಳ ಶ್ರೇಷ್ಠವಾಗಿದೆ.

**2. ಮಲ್ಲಿಕಾರ್ಜುನ ದೇವಸ್ಥಾನ :** ಮುಡುಕುತೊರೆ (ತಿರುಮಲಕುಡು ಬೆಟ್ಟಹಳ್ಳಿ/ ಟಿ. ಬೆಟ್ಟಹಳ್ಳಿ) ಕಾವೇರಿ ನದಿಯ ದಡದಲ್ಲಿರುವ ಒಂದು ಯಾತ್ರಾಸ್ಥಳ ಸರ್ಕಾರಿ ದಾಖಲೆಗಳ ಪ್ರಕಾರ ಈ ಗ್ರಾಮವನ್ನು ಟಿ. ಬೆಟ್ಟಹಳ್ಳಿ ಎಂದು ಕರೆಯಲಾಗುತ್ತದೆ, ಆದರೆ ಮುಡುಕುತೊರೆ ಎಂಬುದು ಜನಪ್ರಿಯ ಹೆಸರು. ಟಿ.ಬೆಟ್ಟಹಳ್ಳಿ ಸೋಮಗಿರಿ ಎಂಬ ಗುಡ್ಡದ ಹಿನ್ನೆಲೆಯನ್ನು ಹೊಂದಿರುವ ಈ ಪ್ರಶಾಂತವಾದ ಶಾಂತಹಳ್ಳಿ. ಈ ಸ್ಥಳವು ಮಲ್ಲಿಕಾರ್ಜುನ ದೇವಸ್ಥಾನದ ನೆಲೆಯಾಗಿದೆ. ಪಾಂಡವರಲ್ಲಿ ಒಬ್ಬನಾದ ಅರ್ಜುನನು ಈ ದೇವಸ್ಥಾನವಿರುವ ಬೆಟ್ಟದಲ್ಲಿ ತಂಗಿದ್ದನು ಮತ್ತು ಶಿವನ ವಿಗ್ರಹವನ್ನು ಕೆತ್ತಿ "ಮಲ್ಲಿಕಾ ಪುಷ್ಪ" ಮಲ್ಲಿಗೆ ಹೂವುಗಳಿಂದ ಪೂಜೆ ಮಾಡಿದನು, ಇದರಿಂದಾಗಿ ಇಲ್ಲಿ ಶಿವನಿಗೆ 'ಮಲ್ಲಿಕಾರ್ಜುನ' ಎಂಬ ಹೆಸರು ಬಂದಿತು ಎಂಬ ಪ್ರತೀತಿ ಇದೆ. ಈ ದೇವಸ್ಥಾನದ ಗರ್ಭಗುಡಿಯಲ್ಲಿ ಭ್ರಮರಾಂಬಿಕಾ ದೇವಿಯ ವಿಗ್ರಹವಿರುವ ಸಣ್ಣ ಶಿವಲಿಂಗವಿದೆ. ಈ ಶಿವಲಿಂಗದ ಮೇಲೆ ಕಾಮಧೇನುವಿನ ಪಾದದ ಗುರುತುಗಳು ಇವೆ.

ಈ ದೇವಾಲಯವು ಗಂಗರ ಕಾಲದ ಮೂಲ ದೇವಾಲಯವಾಗಿದೆ. ವಿಜಯನಗರದ ವಾಸ್ತುಶೈಲಿಯಲ್ಲಿ ಜೀರ್ಣೋದ್ಧಾರಗೊಂಡಿದೆ. ಪಶ್ಚಿಮಾಭಿಮುಖವಾದ ಮಹಾದ್ವಾರ, ಅದರ ಮೇಲಿರುವ ಗೋಪುರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿಸಿದ್ದಾರೆ ಎಂದು ಹೇಳಲಾಗುತ್ತದೆ.

**3. ಮರಳೇಶ್ವರ ದೇವಸ್ಥಾನ :** ತಲಕಾಡು ಮರಳೇಶ್ವರಸ್ವಾಮಿ ದೇವಸ್ಥಾನವು

ಶಿವನಿಗೆ, ವಿಶೇಷವಾಗಿ ಮರಳೇಶ್ವರ ರೂಪದಲ್ಲಿ ಅರ್ಪಿತವಾದ ಒಂದು ಮಹತ್ವದ ದೇವಾಲಯ. ಇದು ನೆಲಮಟ್ಟದಿಂದ ಸುಮಾರು 20 ಅಡಿ ಕೆಳಗೆ ಪೂರ್ವಕ್ಕೆ ಮುಖ ಮಾಡಿದೆ. ರಕ್ಷಣಾತ್ಮಕ ಗೋಡೆಗಳನ್ನು ಹೊಂದಿದೆ. ಗರ್ಭಗುಡಿಯ ಹೊರಗೆ ಒಂದು ವೀರಗಲ್ಲು ಇದೆ.

ಗರ್ಭಗುಡಿ, ಅಂತರಾಳ ಮತ್ತು ಅರ್ಧ ಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದ ಸ್ತಂಭವು ಜಗತಿ, ಕುಮುದ, ಗಲಾ ಮತ್ತು ಮಹಾಪಟ್ಟಿಯನ್ನು ಹೊಂದಿದ್ದು ಪಾದಬಂಧ ಅಧಿಷ್ಠಾನವನ್ನು ಹೊಂದಿದೆ. ಗರ್ಭಗುಡಿಯ ಮೇಲಿನ ವಿಮಾನವನ್ನು ಇತ್ತೀಚಿನ ವರ್ಷಗಳಲ್ಲಿ ನಿರ್ಮಿಸಲಾಗಿದೆ.

ಗರ್ಭಗೃಹದಲ್ಲಿ ಒಂದು ದೊಡ್ಡ ಶಿವಲಿಂಗವಿದೆ. ಶಿವಲಿಂಗದ ಹೊರತಾಗಿ ಮಹಾವಿಷ್ಣು, ಮಹಿಷಾಸುರನ ಮೇಲೆ ನಿಂತಿರುವ ದುರ್ಗೆ ಮತ್ತು ಕಾರ್ತಿಕೇಯನ ಶಿಲ್ಪಗಳು ಇಲ್ಲಿ ಕಂಡುಬರುತ್ತವೆ.

ಈ ದೇವಾಲಯವು ಐತಿಹಾಸಿಕ ಮಹತ್ವ ಮತ್ತು ವಿವಿಧ ದಂತಕಥೆಗಳನ್ನು ಹೊಂದಿದೆ. ಮರಳೇಶ್ವರ ದೇವಸ್ಥಾನವು ತಲಕಾಡಿನ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಒಂದು. ಕೀರ್ತಿನಾರಾಯಣ ದೇವಸ್ಥಾನದಿಂದ ಉತ್ತರ ದಿಕ್ಕಿಗೆ ಅರ್ಧ ಮೈಲಿ, ವೈದ್ಯನಾಥೇಶ್ವರ ದೇವಾಲಯದ ವಾಯುವ್ಯಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಈ ದೇವಸ್ಥಾನವಿದೆ. ಇಲ್ಲಿರುವ ಶಿವಲಿಂಗವನ್ನು ಸ್ವತಃ ಬ್ರಹ್ಮದೇವರೇ ಸ್ಥಾಪಿಸಿ ಪೂಜಿಸಿದ್ದಾರೆಂದು ಜನ ನಂಬಿದ್ದಾರೆ.

ಮುಂಭಾಗದಲ್ಲಿರುವ ಮಂಟಪದಲ್ಲಿ ಮಹೇಶ್ವರ, ಸೂರ್ಯ, ಗಣೇಶ, ಸುಬ್ರಹ್ಮಣ್ಯ, ವೀರಭದ್ರ, ತಿರುಮಲ, ಅಂಬಿಕಾ ಮತ್ತು ನವಗ್ರಹಗಳ ವಿಗ್ರಹಗಳನ್ನು ಸಹ ನಾವು ಕಾಣಬಹುದು. ಇದು ಗಂಗರ ಕಾಲದ ಸಣ್ಣ ದೇವಾಲಯವಾಗಿದ್ದು, ಇದನ್ನು ಗಂಗರಾಜರು ನಿರ್ಮಿಸಿದ್ದಾರೆ ಎನ್ನುತ್ತಾರೆ. ಇದನ್ನು ಸಹ ಮರಳುದಿಬ್ಬ ಅಗೆದು ದೇವಾಲಯುವನ್ನು ಹೊರತೆಗೆದಿದ್ದಾರೆ. ಚೋಳರ ಕಾಲದಲ್ಲಿಯೇ ಜೀರ್ಣೋದ್ಧಾರಗೊಂಡ ಬಗ್ಗೆ ದಾಖಲೆಗಳಿವೆ.

ಈ ದೇವಾಲಯವು ದಕ್ಷಿಣ ಭಾರತದ ಸಾಂಪ್ರದಾಯಿಕ ವಾಸ್ತುಶಿಲ್ಪವನ್ನು ಹೊಂದಿದೆ, ಸಂಕೀರ್ಣವಾದ ಕೆತ್ತನೆಗಳು ಮತ್ತು ಶಿಲ್ಪಗಳನ್ನು ಒಳಗೊಂಡಿದೆ. ಮುಖ್ಯ ಗರ್ಭಗುಡಿಯಲ್ಲಿ ಮರಳೇಶ್ವರ ವಿಗ್ರಹವಿದೆ. ಇದನ್ನು ಸಾಮಾನ್ಯವಾಗಿ ಭಕ್ತರು ನೀಡುವ ಕಾಣಿಕೆಗಳಿಂದ ಅಲಂಕರಿಸಲಾಗುತ್ತದೆ. ಈ ವಿನ್ಯಾಸವು ಹೊಯ್ಸಳ ಕಾಲದ ಕಲಾತ್ಮಕತೆ ಯನ್ನು ಪ್ರತಿಬಿಂಬಿಸುತ್ತದೆ. ವಿವಿಧ ದೇವತೆಗಳು ಮತ್ತು ಲಕ್ಷಣಗಳನ್ನು ಚಿತ್ರಿಸುವ ವಿವರವಾದ ಅಲಂಕಾರಗಳೊಂದಿಗೆ ದೇವಾಲಯ ನಿರ್ಮಾಣಗೊಂಡಿದೆ. ಈ ದೇವಾಲಯವನ್ನು 10 ನೇ ಶತಮಾನದಲ್ಲಿ ಗಂಗರು ನಿರ್ಮಿಸಿದ್ದರೆಂದು ನಂಬಲಾಗಿದೆ.

**ಭೇಟಿಯ ಸಮಯ :** ದೇವಾಲಯವು ಸಾಮಾನ್ಯವಾಗಿ ಬೆಳಗ್ಗೆ ಮತ್ತು ಸಂಜೆ ತೆರೆದಿರುತ್ತದೆ. ಶಿವರಾತ್ರಿ ಹಬ್ಬದಲ್ಲಿ ವಿಶೇಷ ಪೂಜೆ, ಅಭಿಷೇಕ, ಹೋಮ, ಹವನಗಳು ನಡೆಯುವುದು ಇಲ್ಲಿನ ವಿಶೇಷ.

**4. ಪಾತಾಳೇಶ್ವರ ದೇವಸ್ಥಾನ :** ನಾಗಲೋಕದ ಚಕ್ರಾಧಿಪತ್ಯಕ್ಕಾಗಿ ವಾಸುಕಿಯಿಂದ ಪೂಜಿತವಾದ ಶಿವಲಿಂಗವೇ ಈ ಪಾತಾಳೇಶ್ವರ. ವಾಸುಕೀಶ್ವರ ಎಂಬುದು ಪಾತಾಳೇಶ್ವರನ ಮತ್ತೊಂದು ಹೆಸರು. ಈ ಕಲ್ಲಿನ ದೇವಾಲಯು ಬೇರೆ ದೇವಾಲಯಗಳಿಗಿಂತ ತಗ್ಗಿನಲ್ಲಿರುವ ಕಾರಣ ಇದಕ್ಕೆ ಪಾತಾಳೇಶ್ವರನೆಂಬ ಹೆಸರು ಬಂದಿದೆ. ಇದರ ಪೂಜೆಗೆ ಶ್ರಾವಣ ಶುದ್ಧ ಪಂಚಮಿ ಅತ್ಯಂತ ಶ್ರೇಷ್ಠ ದಿನವಾಗಿದೆ. ತಲಕಾಡಿನ ಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಪಾತಾಳೇಶ್ವರ ದೇವಾಲಯವೂ ಒಂದು. ತಲಕಾಡಿನ ಮರಳಿನ ದಿಬ್ಬಗಳ ಕೆಳಗೆ ಹೂತು ಹೋಗಿದೆ ಎನ್ನಲಾದ ಅನೇಕ ದೇವಾಲಯಗಳಲ್ಲಿ ಇದೂ ಒಂದು. ಇದು ತಲಕಾಡಿನ ಐದು ಪ್ರಮುಖ ಶಿವ ದೇವಾಲಯಗಳಲ್ಲಿ ಒಂದು. ಕೆಲವು ಶಾಸನಗಳ ಪ್ರಕಾರ ಈ ದೇವಾಲಯವು ತಲಕಾಡಿನಲ್ಲಿ ಗಂಗರು ನಿರ್ಮಿಸಿದ ಮೊಟ್ಟಮೊದಲ ದೇವಾಲಯ ಎಂದು ಹೇಳಲಾಗಿದೆ.

ಗಂಗರ ಕಾಲದಲ್ಲಿ ನಿರ್ಮಿತವಾದ ಅತ್ಯಂತ ಹಳೆಯ ದೇವಾಲಯಗಳಲ್ಲಿ ಒಂದಾಗಿದೆ. ಗರ್ಭಗೃಹ ಮತ್ತು ದೇವಾಲಯದ ಮೇಲಿನ ಗೋಪುರವನ್ನು ಚೋಳರ ಕಾಲದಲ್ಲಿ ನವೀಕರಿಸಲಾಗಿದೆ. ಶಿವಲಿಂಗವನ್ನು ಹೊರತುಪಡಿಸಿ ಇಲ್ಲಿ ತ್ರಿಮೂರ್ತಿ, ಬ್ರಹ್ಮ, ಸಿಂಹವಾಹಿನಿ ಮತ್ತು ದುರ್ಗೆಯ ಶಿಲ್ಪಗಳು ಕಂಡು ಬರುತ್ತವೆ. ಇದು ಗುಹಾಶೈಲಿಯ ದೇವಾಲಯವಾಗಿದ್ದು, ಮುಖ್ಯ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ವಿಭಿನ್ನ ಶಿವಲಿಂಗಗಳಿವೆ.

ಪಾತಾಳೇಶ್ವರ ದೇವಾಲಯವು 8 ನೇ ಶತಮಾನದ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ಅತ್ಯಂತ ಹಳೆಯ ದೇವಾಲಯವೆಂದು ಪರಿಗಣಿಸಲಾಗಿದೆ. ಈ ದೇವಾಲಯದಲ್ಲಿ ಸ್ಥಾಪಿಸಲಾದ ಶಿವಲಿಂಗದ ವಿಶಿಷ್ಟತೆ ಎಂದರೆ, ಶಿವಲಿಂಗವು ಕಾಲಕಾಲಕ್ಕೆ ಬಣ್ಣವನ್ನು ಬದಲಾಯಿಸುತ್ತದೆ. ಈ ಶಿವಲಿಂಗವು ಬೆಳಗಿನ ಜಾವದಲ್ಲಿ ಕೆಂಪಾಗಿ ಕಾಣುತ್ತದೆ. ಮಧ್ಯಾಹ್ನ ಕಪ್ಪು ಬಣ್ಣಕ್ಕೆ ತಿರುಗುತ್ತದೆ ಮತ್ತು ರಾತ್ರಿ ಹೊತ್ತಿಗೆ ಬಿಳಿ ಬಣ್ಣಕ್ಕೆ ತಿರುಗುತ್ತದೆ.

ಈ ಸಣ್ಣ ದೇವಾಲಯವು ಮೊದಲಿಗೆ ಗಂಗರ ನಾಲ್ಕನೇ ರಾಚಮಲ್ಲನ ಕಾಲದಲ್ಲಿ ನಿರ್ಮಾಣವಾಗಿದ್ದು, ನಂತರ ಚೋಳರ ಆಶ್ರಯದಲ್ಲಿ ಜೀರ್ಣೋದ್ಧಾರ ಮಾಡಲ್ಪಟ್ಟಿದೆ. ಇದರ ಪೂಜೆಗೆ ಶ್ರಾವಣ ಶುದ್ಧ ಪಂಚಮಿ ಅತ್ಯಂತ ಶ್ರೇಷ್ಠ ದಿವಸವಾಗಿದೆ.

**5. ವೈದ್ಯನಾಥೇಶ್ವರ ದೇವಸ್ಥಾನ :** ವೈದ್ಯನಾಥೇಶ್ವರ ದೇವಾಲಯವು ಆಸಕ್ತಿಯುತವಾದ ಇತಿಹಾಸವನ್ನು ಹೊಂದಿದೆ. ಇದು ದಕ್ಷಿಣ ಭಾರತದ ಪ್ರಸಿದ್ಧ

ಯಾತ್ರಾಸ್ಥಳ. ಪಂಚಲಿಂಗ ಸ್ಥಳಗಳಲ್ಲಿ (ಸ್ಥಳಗಳಲ್ಲಿ) ಒಂದಾಗಿದೆ.

ತಲಕಾಡಿನ ಪಂಚಲಿಂಗಗಳಲ್ಲಿ ಪ್ರಧಾನ ದೈವವೇ ಶ್ರೀವೈದ್ಯನಾಥೇಶ್ವರ. ಈಗಿನ ಹಳೆಯ ಊರಿನ ನೈಋತ್ಯದ ಕೊನೆಯಲ್ಲಿ ಮರಳುದಿಬ್ಬಕ್ಕೆ ಸಮೀಪದಲ್ಲಿ ಕಣಶಿಲೆಯಿಂದ ಕಟ್ಟಿರುವ ಕಲಾತ್ಮಕವಾದ ಬೃಹತ್ ದೇವಾಲಯ. ವೈದ್ಯನಾಥೇಶ್ವರ ಲಿಂಗವು ಚೋಳರ ಕಾಲದಲ್ಲಿಯೇ ಇದ್ದಿತಾದರೂ ಕಟ್ಟಡ ಗೋಪುರವು ವಿಜಯನಗರದ ಕಾಲದ್ದೆಂದೂ, ಈ ಊರಿನವರೇ ಆದ ಮಾಧವಮಂತ್ರಿಯಿಂದ ನಿರ್ಮಿತವಾಯಿತೆಂದೂ ಪುರಾತತ್ವ ತಜ್ಞರು ಅಭಿಪ್ರಾಯ ಪಡುತ್ತಾರೆ.

ದೇವಾಲಯದ ಸುತ್ತಲೂ ಒಂದು ದೊಡ್ಡ ಪ್ರಾಕಾರವಿದೆ. ದೇವಾಲಯದ ಉತ್ತರಕ್ಕೆ ವಿವಿಧ ದೇವಾನುದೇವತೆಗಳ ಶಿಲೆಗಳನ್ನು ಹೊಂದಿರುವ ಬೃಹತ್ ಸಭಾಂಗಣವಿದೆ. ದೇವಾಲಯದಲ್ಲಿ ಗಂಗ, ಹೊಯ್ಸಳ ಮತ್ತು ವಿಜಯನಗರ ಕಾಲದ ಶಿಲ್ಪಗಳಿವೆ.

ವೈದ್ಯನಾಥೇಶ್ವರ ದೇವಾಲಯವು ಅತ್ಯಂತ ವಿಶಾಲವಾಗಿದ್ದು. ಇದನ್ನು ದ್ರಾವಿಡ ಶೈಲಿಯ ವಾಸ್ತುಶಿಲ್ಪದಲ್ಲಿ ಗ್ರಾನೈಟ್ ಕಲ್ಲಿನಿಂದ ನಿರ್ಮಿಸಲಾಗಿದೆ. ಬಾಗಿಲುಗಳು ಅಲಂಕೃತವಾಗಿವೆ. ಮುಖ್ಯ ದೇವಾಲಯದ ಪ್ರವೇಶದ್ವಾರದ ಎರಡೂ ಬದಿಗಳಲ್ಲಿ ಎರಡು ಬೃಹತ್ತಾದ 10 ಅಡಿ ಎತ್ತರದ ದ್ವಾರಪಾಲಕರ ಶಿಲ್ಪಗಳಿವೆ. ಮೇಲಿನ ಮೂಲೆಗಳಲ್ಲಿ ಕಲ್ಲಿನ ಸರಪಳಿ ಮತ್ತು ಐದು ತಲೆಯ ಹಾವನ್ನು ಕೆತ್ತಲಾಗಿದೆ. ಸುತ್ತಲೂ ಕಲ್ಲಿನ ಕಂಬಗಳು ಮತ್ತು ಚೌಕಾಕಾರದ ಕಟ್ಟಡಗಳನ್ನು ಸಹ ಕಾಣಬಹುದು.

ವೈದ್ಯನಾಥೇಶ್ವರ ದೇವಾಲಯವನ್ನು 14 ನೇ ಶತಮಾನದಲ್ಲಿ ಚೋಳ ರಾಜರ ಆಳ್ವಿಕೆಯಲ್ಲಿ ನಿರ್ಮಿಸಲಾಯಿತು. ಹೊರಗೋಡೆಗಳಲ್ಲಿ ಭವ್ಯವಾದ ಶಿಲ್ಪಗಳಿವೆ. ಇಲಿಯ ಮೇಲೆ ಸವಾರಿ ಮಾಡುತ್ತಿರುವ ಗಣೇಶನ ಸುಂದರ ಪ್ರತಿಮೆ ಇದೆ. ಇಲಿ ಮತ್ತು ಪ್ರವೇಶದ್ವಾರದಲ್ಲಿರುವ ನಂದಿಯ ಪ್ರತಿಮೆಯನ್ನು ಸರಿಯಾದ ದಿಕ್ಕಿನಲ್ಲಿ ಸ್ಥಾಪಿಸಲಾಗಿದೆ. ವೈದ್ಯನಾಥೇಶ್ವರನನ್ನು ವೈದ್ಯರೂಪಿ ದೇವರು ಎಂದು ಕರೆಯಲಾಗುತ್ತದೆ.

**ಗರ್ಭಗುಡಿ :** ಒಂದು ಅಂಕಣದ ಅಂತರಾಳ, ಮಧ್ಯದಲ್ಲಿ ನವರಂಗ, ಅದರ ನಾಲ್ಕು ಕಡೆಗಳಲ್ಲಿ ಮೂರು ಅಂಕಣಗಳ ಸಾಲುಗಳು ಇವೆ. ಪೂರ್ವ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಮುಖ್ಯ ಗರ್ಭಗುಡಿಯ ಎರಡೂ ಬದಿಗಳಲ್ಲಿ ಗಣೇಶ ಮತ್ತು ಸುಬ್ರಹ್ಮಣ್ಯ ವಿಗ್ರಹಗಳಿವೆ. ಇಲ್ಲಿ ಪೂಜಿಸಲ್ಪಡುವ ಮುಖ್ಯ ದೇವತೆ ಮನೋನ್ಮಣಿದೇವಿ. ಒಳಮಂಟಪದಲ್ಲಿ ನಟರಾಜ, ದುರ್ಗೆ, ಭದ್ರಕಾಳಿ, ಕಾಳಿ ಮತ್ತು ಶಾರದಾದೇವಿಯ ವಿಗ್ರಹಗಳಿವೆ. ಗೋಡೆಗಳನ್ನು ಶಿವ ಮತ್ತು ವಿಷ್ಣುವಿನ ವಿವಿಧ ಚಿತ್ರಣಗಳಿಂದ ಅಲಂಕರಿಸಲಾಗಿದೆ.

ಹೊರಗಿನ ಭಾವಣಿಯ ಒಂದು ತುದಿಯಲ್ಲಿ ಸುಂದರವಾದ ಗ್ರಾನೈಟ್ ಉಂಗುರಗಳ

ಸರಪಣಿಯನ್ನು ಕೆತ್ತಲಾಗಿದೆ ಮತ್ತು ಯಾವುದೇ ಕೀಲುಗಳಿಲ್ಲದೆ ಛಾವಣಿಯಿಂದ ನೇತುಹಾಕಲಾಗಿದೆ. ಕೇವಲ ಉಳಿ ಮತ್ತು ಸುತ್ತಿಗೆಗಳನ್ನು ಬಳಸಿ ಅದ್ಭುತಗಳನ್ನು ಸೃಷ್ಟಿಸಿದ ಕುಶಲಕರ್ಮಿಗಳ ಅದ್ಭುತ ಕೆಲಸಕ್ಕೆ ಅತ್ಯುತ್ತಮ ಉದಾಹರಣೆ.

**ವೈದ್ಯನಾಥೇಶ್ವರ ದೇವಾಲಯದ ಪುರಾಣ :** ದಂತಕಥೆಯ ಪ್ರಕಾರ, ಸೋಮದತ್ತ ಎಂಬ ತಪಸ್ವಿಯು ತನ್ನ ಶಿಷ್ಯರೊಂದಿಗೆ ತೀರ್ಥಯಾತ್ರೆ ಮಾಡುತ್ತ ಈ ದೇವಾಲಯಕ್ಕೆ ಬಂದಾಗ ಆನೆಗಳ ಹಿಂಡಿನಿಂದ ಕೊಲ್ಲಲ್ಪಟ್ಟರು. ಪುನರ್ಜನ್ಮದಲ್ಲಿ ಅವರು ಅದೇ ಪ್ರದೇಶದಲ್ಲಿ / ಕಾಡಿನಲ್ಲಿ ಆನೆಗಳಾಗಿ ಜನಿಸಿದರು. ಕಾಡಿನಲ್ಲಿ ಮರದ ರೂಪದಲ್ಲಿದ್ದ ಶಿವನನ್ನು ಪೂಜಿಸುವುದನ್ನು ಮುಂದುವರೆಸಿದರು. ಈ ಮರವು ರೇಷ್ಮೆ–ಅತ್ತಿ ಮರ ಎಂದು ಭಾವಿಸಲಾಗಿದೆ.

ಒಮ್ಮೆ ತಲ ಮತ್ತು ಕಾಡ ಎಂಬ ಇಬ್ಬರು ಬೇಟೆಗಾರರು ಈ ಆನೆಗಳು ಈ ರೇಷ್ಮೆ–ಅತ್ತಿ ಮರಕ್ಕೆ ಪೂಜೆ ಮಾಡುವುದನ್ನು ಗಮನಿಸಿದರು ಮತ್ತು ಕುತೂಹಲದಿಂದ ಆ ಮರವನ್ನು ಕಡಿಯಲು ಪ್ರಯತ್ನಿಸಿದರು. ಆದರೆ ತಕ್ಷಣ ಮರದಿಂದ ರಕ್ತಸ್ರಾವವಾಗುವುದನ್ನು ಕಂಡು ಆ ಮರವು ಭಗವಂತನ ರೂಪ ಎಂದು ಘೋಷಿಸಿದ ದೈವೀ ಧ್ವನಿಯನ್ನು ಕೇಳಿದರು. ಆದ್ದರಿಂದ ಮರವನ್ನು ಕತ್ತರಿಸುವುದನ್ನು ನಿಲ್ಲಿಸಲು ಆ ಬೇಟೆಗಾರರಿಗೆ ಸೂಚಿಸಲಾಯಿತು. ಅವರು ಮರ ಕಡಿಯುವುದನ್ನು ನಿಲ್ಲಿಸಿ, ಮರಕ್ಕೆ ಆಗಿದ್ದ ಗಾಯವನ್ನು ಹಣ್ಣುಗಳು ಮತ್ತು ಎಲೆಗಳಿಂದ ಮುಚ್ಚಿದರು. ನಂತರ ರಕ್ತವು ಹಾಲಾಗಿ ಪರಿಣಮಿಸಿ ಮರವು ಸಂಪೂರ್ಣವಾಗಿ ಗುಣವಾಯಿತು. ಬೇಟೆಗಾರರಾದ ತಲ ಮತ್ತು ಕಾಡ ಇಲ್ಲಿ ಮೋಕ್ಷವನ್ನು ಪಡೆದರು. ಅಂದಿನಿಂದ ಈ ಸ್ಥಳವು ತಲಕಾಡು ಎಂದು ಕರೆಯಲ್ಪಟ್ಟಿತು. ಮರದ ರೂಪದಲ್ಲಿ ಭಗವಂತನು ತನ್ನನ್ನು ತಾನೇ ಗುಣಪಡಿಸಿಕೊಂಡಿದ್ದರಿಂದ, ಅವನನ್ನು ವೈದ್ಯನಾಥ ಅಥವಾ ವೈದ್ಯೇಶ್ವರ ಎಂದು ಕರೆಯಲಾಯಿತು. ಭಗವಾನ್ ವೈದ್ಯನಾಥ ವೈದ್ಯರ ಅಧಿಪತಿಯಾದನು.

**ಕೀರ್ತಿನಾರಾಯಣ ದೇವಸ್ಥಾನಕ್ಕೆ ಭೇಟಿ :** ಕೀರ್ತಿನಾರಾಯಣ ದೇವಸ್ಥಾನವು ತಲಕಾಡಿನಲ್ಲಿರುವ ಮತ್ತೊಂದು ದೇವಾಲಯವಾಗಿದೆ. ಇದು ವಿಷ್ಣುವಿಗೆ ಅರ್ಪಿತವಾಗಿದೆ. ಈ ಕೀರ್ತಿನಾರಾಯಣ ದೇವಸ್ಥಾನವನ್ನು ಹೊಯ್ಸಳರ ದೊರೆ ವಿಷ್ಣುವರ್ಧನನು ಚೋಳರಿಂದ ತಲಕಾಡನ್ನು ಗೆದ್ದ ನಂತರ ವಿಜಯದ ನೆನಪಿಗಾಗಿ 1117ರಲ್ಲಿ ನಿರ್ಮಿಸಿದನು. ಎತ್ತರದ ಜಗತಿಯ ಮೇಲೆ ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳಿದ್ದು, ನವರಂಗಕ್ಕೆ ಮೂರು ದ್ವಾರಗಳಿವೆ. ಹೊರಗೋಡೆಗಳ ಮೇಲೆ ಅರೆಗಂಬಗಳು, ಅವುಗಳ ನಡುವೆ ಅರೆಗೋಪುರಗಳು ನಡುನಡುವೆ ಅರೆಮಂಟಪಗಳು ಇವೆ. ನವರಂಗ ವಿಶಾಲವಾಗಿದೆ. ಬಳಪದ ಕಲ್ಲಿನ ನಾಲ್ಕು ದಪ್ಪ ಕಂಬಗಳಿವೆ. ಉಳಿದವು ಎಂಟು, ಹದಿನಾರು ಮೂಲೆಯ ಕಂಬಗಳಿವೆ. ಕೆಲವು ಅಂಕಣಗಳಲ್ಲಿ ಭುವನೇಶ್ವರಿಗಳಿವೆ. ಬಳ್ಳಿಯ ಸಾಲು, ತಾವರೆ, ಆನೆ, ಸಿಂಹ, ನರ್ತಕಿಯರು ಮುಂತಾದ ಶಿಲ್ಪಗಳಿವೆ.

ಕೀತಿನಾರಾಯಣನ ಮೂಲ ವಿಗ್ರಹ ಹತ್ತು ಅಡಿ ಎತ್ತರ ಇದೆ. ಇದು ಸಮಭಂಗಿಯಲ್ಲಿ ನಿಂತಿರುವ ಚತುರ್ಭುಜ ಮೂರ್ತಿ. ಮೂರ್ತಿಯ ಪ್ರಭಾವಳಿಯ ಮೇಲೆ ವಿಷ್ಣುವಿನ ದಶಾವತಾರಗಳನ್ನು ಕೆತ್ತಲಾಗಿದೆ. ಭಗವಂತನು ಮೇಲಿನ ಎಡಗೈಯಲ್ಲಿ ಶಂಖ, ಮೇಲಿನ ಬಲಗೈಯಲ್ಲಿ ಚಕ್ರ, ಕೆಳಗಿನ ಎಡಗೈಯಲ್ಲಿ ಕಮಲ ಮತ್ತು ಕೆಳಗಿನ ಬಲಗೈಯಲ್ಲಿ ಗದೆಯನ್ನು ಹಿಡಿದಿರುವುದನ್ನು ನೋಡಬಹುದು. ನವರಂಗದಲ್ಲಿರುವ ನಮ್ಮಾಳ್ವಾರ್, ವೇದಾಂತ ದೇಶಿಕರ್ ಮೊದಲಾದ ಮೂರ್ತಿಗಳು ಮತ್ತು ಲಕ್ಷ್ಮಿಯ ವಿಗ್ರಹ ವಿಜಯನಗರ ಕಾಲಕ್ಕೆ ಸೇರಿವೆ. ಅರ್ಧಮಂಟಪದಲ್ಲಿ ಉಗ್ರನರಸಿಂಹನ ವಿಗ್ರಹವಿದೆ. ಪ್ರಧಾನ ದೇವಸ್ಥಾನದ ಹೊರತಾಗಿ, ನೀವು ಎಲ್ಲೆಡೆ ಬಿದ್ದಿರುವ ಭವ್ಯವಾದ ಕಲ್ಲಿನ ಪ್ರವೇಶ ದ್ವಾರ, ಗರುಡಗಂಬ ಮತು ಶಿಲಾ ಶಾಸನಗಳನ್ನು ನೋಡಬಹುದು.

**ತಲಕಾಡು ದೇವಾಲಯಗಳ ಸಮಯ :** ತಲಕಾಡಿನ ಪಂಚಲಿಂಗ ದೇವಸ್ಥಾನಗಳು ಸಾಮಾನ್ಯವಾಗಿ ಬೆಳಗ್ಗೆ 8 ಗಂಟೆಗೆ ತೆರೆಯುತ್ತವೆ. ಸಂಜೆ 6 ಗಂಟೆಯವರೆಗೆ ಜನರು ಭೇಟಿ ನೀಡಬಹುದು. ದೇವಾಲಯಗಳಲ್ಲಿ ದೇವರ ದರ್ಶನ ಪಡೆಯಲು ಯಾವುದೇ ಪ್ರವೇಶ ಶುಲ್ಕವನ್ನು ಪಾವತಿಸಬೇಕಾಗಿಲ್ಲ.

**ದರ್ಶನ :** ತಲಕಾಡಿನಲ್ಲಿ ತತ್ಪುರುಷ ಮುಖದಿಂದ ಕಾವೇರಿಯ ಉತ್ತರವಾಹಿನಿಯ ಹತ್ತಿರ ಅರ್ಕೇಶ್ವರನಾಗಿಯೂ, ಪೂರ್ವವಾಹಿನಿಯ ಹತ್ತಿರ ಅಘೋರಮುಖದಿಂದ ಪಾತಾಳೇಶ್ವರ ಅಥವಾ ವಾಸುಕೀಶ್ವರನಾಗಿಯೂ, ದಕ್ಷಿಣವಾಹಿನಿಯ ಹತ್ತಿರ ಸದ್ಯೋಜಾತ ಮುಖದಿಂದ ಮರಳೇಶ್ವರನಾಗಿಯೂ (ಸೈಕತೇಶ್ವರನಾಗಿಯೂ), ಪಶ್ಚಿಮವಾಹಿನಿಯ ಹತ್ತಿರ (ಮುಡುಕುತೊರೆಯಲ್ಲಿ) ವಾಮದೇವ ಮುಖದಿಂದ ಮಲ್ಲಿಕಾರ್ಜುನೇಶ್ವರ ನಾಗಿಯೂ, ಮಧ್ಯದಲ್ಲಿ ಈಶಾನ್ಯ ಮುಖದಿಂದ ವೈದ್ಯನಾಥೇಶ್ವರನಾಗಿಯೂ ಪಂಚಬ್ರಹ್ಮಮಯನಾದ ಪರಶಿವನು ನೆಲೆಸಿರುವನೆಂದು ಪುರಾಣಗಳು ತಿಳಿಸುತ್ತವೆ. ಈ ದಿವ್ಯ ಪಂಚಲಿಂಗಗಳನ್ನು ವಿಧಿಪೂರ್ವಕವಾಗಿ ಒಂದೇ ದಿನದಲ್ಲಿ ದರ್ಶಿಸುವವರು ಶಿವಸಾಯುಜ್ಯವನ್ನು ಹೊಂದುವರು ಎಂಬ ನಂಬಿಕೆ ಇದೆ.

ಮೊದಲು ಗೋಕರ್ಣ ಸರೋವರದಲ್ಲಿ ಸ್ನಾನ ಮಾಡಿ, ಗೋಕರ್ಣೇಶ್ವರನ ದರ್ಶನ ಮಾಡಿದ ಬಳಿಕ ಚೌಡೇಶ್ವರಿಯನ್ನು ಪೂಜಿಸಿ, ಮೂರು ಪ್ರದಕ್ಷಿಣ ನಮಸ್ಕಾರ ಮಾಡಿ, ವೈದ್ಯೇಶ್ವರನ ಸನ್ನಿಧಿಗೆ ಬಂದು ಪಂಚಲಿಂಗ ದರ್ಶನಕ್ಕೆ ಅಪ್ಪಣೆ ಕೋರಿ, ವಿಜಯಪುರದ ಉತ್ತರವಾಹಿನಿಯಲ್ಲಿ ಸ್ನಾನ ಮಾಡಿ, ಅರ್ಕೇಶ್ವರನ ದರ್ಶನ ಮಾಡಿ, ಮತ್ತೆ ವೈದ್ಯೇಶ್ವರನ ಸನ್ನಿಧಿಗೆ ಬಂದು ವರದಿ ಮಾಡಬೇಕು. ಹೀಗೆ ಪೂರ್ವವಾಹಿನಿಯ ಸ್ನಾನ, ಪಾತಾಳೇಶ್ವರ ದರ್ಶನ, ದಕ್ಷಿಣ ವಾಹಿನಿಯ ಸ್ನಾನ, ಮರಳೇಶ್ವರ ದರ್ಶನ ಮಾಡಿ, ಪ್ರತಿ ಸಾರಿಯೂ ವೈದ್ಯೇಶ್ವರ ಸ್ವಾಮಿಗೆ ವರದಿ ಒಪ್ಪಿಸಿ, ಕೊನೆಗೆ ವೈದ್ಯೇಶ್ವರನ ಸನ್ನಿಧಿಗೆ ಬಂದು, ಪಂಚಲಿಂಗ ದರ್ಶನದ ಯಾತ್ರಾಫಲವನ್ನು ಈಶ್ವರಾರ್ಪಣ ಮಾಡಬೇಕು.

**ಇತರ ದೇವಾಲಯಗಳು:** ತಲಕಾಡು ವ್ಯಾಪ್ತಿಯಲ್ಲಿರುವ ಇತರೆ ದೇವಾಲಯಗಳೆಂದರೆ ಹೊಯ್ಸಳರ ಕಾಲದ ಕೀರ್ತಿನಾರಾಯಣ ದೇವಾಲಯ, ಗೋಕರ್ಣೇಶ್ವರ ದೇವಾಲಯ, ವೀರಭದ್ರೇಶ್ವರ ದೇವಾಲಯ, ಚೌಡೇಶ್ವರಿ ದೇವಾಲಯ, ಗ್ರಾಮ ದೇವತೆ ಬಂಡರಸಮ್ಮ ದೇವಾಲಯ, ಅನಾದಿ ವೈಕುಂಠ ನಾರಾಯಣ ದೇವಾಲಯ.

**ಮೈಸೂರಿನಿಂದ ತಲಕಾಡು ದೇವಾಲಯಗಳಿಗೆ ಭೇಟಿ ನೀಡಲು ಉತ್ತಮ ಸಮಯ :** ಅಕ್ಟೋಬರ್, ನವಂಬರ್‌ನಲ್ಲಿ ಮತ್ತು ಫೆಬ್ರವರಿಯವರೆಗೆ ಹವಾಮಾನವು ಆಹ್ಲಾದಕರವಾಗಿರುತ್ತದೆ. ದೇವಾಲಯಗಳನ್ನು ಚೆನ್ನಾಗಿ ನೋಡಲು ಸಾಧ್ಯವಾಗುತ್ತದೆ.

ಮೈಸೂರಿನಿಂದ ತಲಕಾಡಿಗೆ ಭೇಟಿ ನೀಡಿ ದೇವಾಲಯಗಳನ್ನು ದರ್ಶಿಸಲು ಇಡೀ ದಿನ ಬೇಕಾಗುತ್ತದೆ. ಈ ವಾಸ್ತುಶಿಲ್ಪದ ಸೌಂದರ್ಯಗಳು ವಿಸ್ತಾರವಾದ ಪ್ರದೇಶದಲ್ಲಿ ಹರಡಿಕೊಂಡಿವೆ. ಎಲ್ಲಾ ಪಂಚಲಿಂಗ ದೇವಾಲಯಗಳಿಗೆ ಭೇಟಿ ನೀಡಲು ಸುಮಾರು 3 ಗಂಟೆ ಕಾಲ ಬೇಕಾಗಬಹುದು. ಇವಲ್ಲದೆ ತಲಕಾಡು ಮತ್ತು ಹತ್ತಿರದ ಇತರ ದೇವಾಲಯಗಳಿಗೂ ಭೇಟಿ ನೀಡಬಹುದು.

**ತಲಕಾಡಿಗೆ ತಲುಪುವುದು ಹೇಗೆ :** ತಲಕಾಡು ಮೈಸೂರಿನಿಂದ ಸುಮಾರು 45 ಕಿ.ಮೀ. ದೂರದಲ್ಲಿದೆ. ತಲಕಾಡನ್ನು ತಲುಪಲು ಹೆಚ್ಚು ಶ್ರಮ ಪಡಬೇಕಾಗಿಲ್ಲ. ಹತ್ತಿರದ ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣ ಮೈಸೂರಿನಲ್ಲಿದೆ. ಅಲ್ಲದೆ, ತಲಕಾಡು ತಲುಪಲು ಇರುವ ಏಕೈಕ ಮಾರ್ಗವೆಂದರೆ ರಸ್ತೆಯ ಮೂಲಕ. ಬಸ್ ಮೂಲಕ, ಕ್ಯಾಬ್ ಮೂಲಕವೂ ತಲಕಾಡು ತಲುಪಿ ದೇವಾಲಯಗಳನ್ನು ನೋಡಬಹುದು.

ತಲಕಾಡು ಮೈಸೂರಿನ ಬಳಿಯ ಕಾವೇರಿ ನದಿಯ ದಡದಲ್ಲಿರುವ ಒಂದು ಐತಿಹಾಸಿಕ ತಾಣವಾಗಿದೆ. ಇದು ಒಂದು ಕಾಲದಲ್ಲಿ ಸಮೃದ್ಧ ಪಟ್ಟಣವಾಗಿದ್ದು, ಹಲವಾರು ಸಾಮ್ರಾಜ್ಯಗಳ ಏರಿಳಿತಗಳನ್ನು ಕಂಡಿತು. ಆದರೆ ಇಂದು, ತಲಕಾಡಿನ ಹೆಚ್ಚಿನ ಭಾಗ ಮರಳಿನಲ್ಲಿ ಹೂತುಹೋಗಿದೆ. ಇದು ಪ್ರಾಚೀನ ದೇವಾಲಯಗಳಿಗೆ ಭೇಟಿ ನೀಡಬಹುದಾದ ಒಂದು ಸುಂದರವಾದ ಯಾತ್ರಾಸ್ಥಳವಾಗಿದೆ.

□

# ವಾರ್ತಾ ವಿಹಾರ

**ಕುಮಾರಸ್ವಾಮಿ ವಿರಕ್ತಮಠ**

### ಭಕ್ತಿಯಿಂದ ಲೌಕಿಕ ಜಂಜಾಟಗಳಿಗೆ ಮುಕ್ತಿ

ದೈನಂದಿನ ಲೌಕಿಕ ಜಂಜಾಟಗಳಿಂದ ಹೊರಬರಬೇಕಾದರೆ ಭಕ್ತಿಯಿಂದ ಭಗವಂತನ ಸ್ಮರಣೆಯನ್ನು ಮಾಡುತ್ತಿರಬೇಕು ಎಂದು ನಗರ ಮಾಪನ ಯೋಜನಾಧಿಕಾರಿಗಳಾದ ಶ್ರೀಮತಿ ಜಿ. ಸೀಮಂತಿನಿಯವರು ಆಗಸ್ಟ್ 23ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪದಲ್ಲಿ ತಿಳಿಸಿದರು. ಶ್ರಾವಣಮಾಸದಲ್ಲಿ ಸದ್ವಿಚಾರಗಳನ್ನು ತಿಳಿದುಕೊಳ್ಳಲು ಸಾಕಷ್ಟು ಅವಕಾಶಗಳು ದೊರಕುತ್ತವೆ. ಅಧ್ಯಯನಕ್ಕೆ ಇದು ಪ್ರಶಸ್ತವಾದ ಕಾಲ. ಹಿಂದಿನ ಕಾಲದಲ್ಲಿ ಈ ಮಾಸದಲ್ಲಿ ಅಧ್ಯಯನದ ಹೊಸ ಶಾಖೆಗಳನ್ನು ಪ್ರಾರಂಭಿಸುತ್ತಿದ್ದರು. ಶಾಸ್ತ್ರ, ಪುರಾಣ, ಕಾವ್ಯಗಳು ಮತ್ತು ಶರಣರ ವಚನಗಳನ್ನು ಎಲ್ಲರೂ ಕೇಳಲು ಸಾಧ್ಯವಾಗುವಂತಹ ಮಾಸವಿದು. ಶ್ರವಣ, ಮನನ ಮತ್ತು ನಿಧಿಧ್ಯಾಸನದ ಮೂಲಕ ಜೀವನ ದರ್ಶನವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ಡಾ. ಕೆ. ಅನಂತರಾಮುರವರು ಲಕ್ಕಣ್ಣ ದಂಡೇಶನು ಶಿವತತ್ತ್ವ ಚಿಂತಾಮಣಿಯ ಒಂದೊಂದು ಪದ್ಯದಲ್ಲಿಯೂ ಒಬ್ಬೊಬ್ಬ ಶಿವಭಕ್ತನ ಮಹತ್ವಪೂರ್ಣವಾದ ಜೀವನವನ್ನೇ ಅಡಕಗೊಳಿಸಿದ್ದಾನೆ. ತಮಿಳುನಾಡಿನ ತಿರುವಣ್ಣೂರು ಎಂಬ ಗ್ರಾಮದಲ್ಲಿ ಅತಿಭಕ್ತನೆಂಬ ಮಹಾನ್ ಶಿವಭಕ್ತನಿದ್ದನು. ಮೀನು ಹಿಡಿಯುವುದು ಆತನ ಕಾಯಕವಾಗಿತ್ತು. ಅದರಿಂದ ಬಂದ ಸಂಪಾದನೆಯಲ್ಲಿ ನಿತ್ಯವೂ ಜಂಗಮ ಸೇವೆಯನ್ನು ಮಾಡುತ್ತಿದ್ದನು. ಆತ ಮೀನು ಹಿಡಿಯುವ ಸಂದರ್ಭದಲ್ಲಿ ಬಲೆಗೆ ಬೀಳುವ ಮೊದಲ ಮೀನನ್ನು ಶಿವನಿಗೇ ಅರ್ಪಿಸುತ್ತೇನೆಂಬ ಸಂಕಲ್ಪದಿಂದ ಅದನ್ನು ಮರಳಿ ನೀರಿಗೆ ಬಿಡುತ್ತಿದ್ದನು. ಒಂದು ದಿನ ಶಿವನು ಅತಿಭಕ್ತನನ್ನು ಪರೀಕ್ಷಿಸಲು ಚಿನ್ನ ಮತ್ತು ವಜ್ರದ ಹರಳುಗಳಿಂದ ಕೂಡಿದ ಮೀನನ್ನು ಮೊದಲು ಬಲೆಗೆ ಬೀಳಿಸುತ್ತಾನೆ. ಅದು ಶಿವನಿಗೇ ಅರ್ಪಿತವಾದುದು ಎಂದು ಆತ ಮರಳಿ ಅದನ್ನು ಬಿಡುತ್ತಾನೆ. ಪುನಃಪುನಃ ಮತ್ತದೇ ಮೀನು ಅವನ ಬಲೆಯಲ್ಲಿ ಬೀಳುತ್ತದೆ. ಐದಾರು ದಿನಗಳ ಕಾಲ ಆತನಿಗೆ ಇದೇ ರೀತಿ ಪುನರಾವರ್ತನೆಯಾಗುತ್ತದೆ. ಆತ ತನ್ನ ಬಲೆಗೆ ಬೀಳುತ್ತಿದ್ದ ಆ ಚಿನ್ನದ ಮೀನನ್ನು ತೆಗೆದುಕೊಳ್ಳದೆ ನೀರಿಗೇ ಹಾಕಿ ಬರುತ್ತಿದ್ದನು.

ಒಂದು ದಿನ ಅತಿಭಕ್ತನು ಇಂದೂ ಅದೇ ಚಿನ್ನದ ಮೀನು ನನ್ನ ಬಲೆಗೆ ಬಿದ್ದರೆ ಕೈಯನ್ನೇ ಕತ್ತರಿಸಿಕೊಳ್ಳುತ್ತೇನೆಂದು ಶಿವನಲ್ಲಿ ಪ್ರಾರ್ಥಿಸಿ ಹರಿತವಾದ ಕತ್ತಿಯನ್ನು ತೆಗೆದುಕೊಂಡು ಹೋಗುತ್ತಾನೆ. ಬಲೆ ಬೀಸಿದಾಗ ಅದರಲ್ಲಿ ಶಿವ–ಪಾರ್ವತಿಯವರೇ ಪ್ರತ್ಯಕ್ಷರಾಗುತ್ತಾರೆ. ಆತನ ನಿಷ್ಠಾವಂತ ಭಕ್ತಿಯನ್ನು ಮೆಚ್ಚುತ್ತಾರೆ. ಮುಂದೆ ಆತನಿಗೆ ಗಣಪದವಿ ಪ್ರಾಪ್ತಿಯಾಗುತ್ತದೆ. ಇಂತಹ ಅರವತ್ಮೂರು ಪುರಾತನರು ಅವರವರ ಶಿವಭಕ್ತಿಯನ್ನು ಮೆರೆದಿದ್ದಾರೆ. ಅವರ ಜೀವನದ ಗಾಥೆಯನ್ನು ಕೇಳಿಸಿಕೊಳ್ಳಲು ಸಾಧ್ಯವಾಗಿದ್ದು ಎಲ್ಲರ ಸೌಭಾಗ್ಯ. ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. ಪೂಜ್ಯರು ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಪೋಷಿಸುವ ಮಹಾಪೋಷಕರು. ಅನ್ನ, ಅಕ್ಷರ, ಅರೋಗ್ಯ, ಉದ್ಯೋಗ, ಆಧ್ಯಾತ್ಮಗಳ ಪಂಚದಾಸೋಹದ ಮೂಲಕ ರಾಜೇಂದ್ರ ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದು ಶ್ರೀಮಠವನ್ನು ಹೆಮ್ಮರವಾಗಿ ಬೆಳೆಸಿದ್ದಾರೆ ಎಂದು ತಿಳಿಸಿದರು.

ಡಾ. ಬಿ.ವಿ. ವಸಂತಕುಮಾರ್‌ರವರು ನಾದಬಿಂದುಕಳಾತೀತಂ ಎಂಬಂತೆ ಶಬ್ದವೇ ವಿಶ್ವದ ಸೃಷ್ಟಿಯ ಮೂಲವಾಗಿದೆ. ಇದು ವಿಜ್ಞಾನದ ಕ್ವಾಂಟಮ್ ಸಿದ್ಧಾಂತದ ಮೂಲಕವೂ ಸಾಬೀತಾಗಿದೆ. ನಾವು ಕೇಳುವ ಒಳ್ಳೆಯ ಮಾತುಗಳನ್ನು ಜೀವನದ ಬೆಳಕಾಗಿ ಪರಿವರ್ತಿಸಿಕೊಳ್ಳಬೇಕು. ಪಂಪನು ಆದಿಪುರಾಣದಲ್ಲಿ ಭಾವಿಸಿ ಓದಬೇಕು, ಭಾವಿಸಿ ಕೇಳಬೇಕು, ಭಾವಿಸಿ ಪೂಜಿಸಿಬೇಕು ಮತ್ತು ಭಾವಿಸಿ ಆರಾಧಿಸಬೇಕು ಎಂದಿದ್ದಾನೆ. ಹಾಗಾದಾಗ ಅನುಭವವು ಅನುಭಾವವಾಗುತ್ತದೆ. ಮಾತಿನಾಚೆಗಿನ ಮೌನವೂ ಅಷ್ಟೇ ಮುಖ್ಯ ಎಂದು ಹೇಳಿದರು.

ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಉಪ ನಿರ್ದೇಶಕರಾದ ಶ್ರೀಮತಿ ಎಲ್. ಮೇಘಲರವರು ಇಲಾಖೆಯಿಂದ ಪ್ರತಿವರ್ಷ ಸುತ್ತೂರು ಜಾತ್ರೆಯಲ್ಲಿ ಮಳಿಗೆಗಳನ್ನು ತೆರೆಯುವ ಮೂಲಕ ಗ್ರಾಮೀಣ ಪ್ರದೇಶದ ಮಹಿಳೆಯರ ಕೌಶಲಕ್ಕೆ ಪ್ರೋತ್ಸಾಹ ನೀಡುತ್ತಿದ್ದೇವೆ. ಇಂತಹ ಕಾರ್ಯಕ್ರಮಗಳನ್ನು ಸುತ್ತೂರು ಶ್ರೀಮಠ ಸದಾ ಪ್ರೋತ್ಸಾಹಿಸುತ್ತಿದೆ. ಶ್ರಾವಣಮಾಸದ ಅಪೂರ್ವವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಿತವಚನಗಳನ್ನು ಕೇಳಲು ಅವಕಾಶ ದೊರೆತದ್ದು ಸೌಭಾಗ್ಯದ ಸಂಗತಿ. ಮಾಸಪೂರ್ತಿ ಇದರ ಸದುಪಯೋಗಯೋಗಪಡಿಸಿಕೊಂಡವರು ಪುಣ್ಯವಂತರು ಎಂದರು.

ಮೈಸೂರು ಶ್ರೀ ಕುದೇರು ಮಠದ ಶ್ರೀ ಇಮ್ಮಡಿ ಗುರುಲಿಂಗ ಸ್ವಾಮಿಗಳು ಸುತ್ತೂರು ಶ್ರೀಮಠದಲ್ಲಿ ಪ್ರತಿವರ್ಷವೂ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನವನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಭಕ್ತಿಕೇಂದ್ರಿತ ಸ್ಥಳಕ್ಕೆ ಇನ್ನೊಂದು ಹೆಸರೇ ಶ್ರೀ ಸುತ್ತೂರು ಮಠ. ಶ್ರಾವಣ ನೆತ್ತಿಯ ಮಡಿಲನ್ನು ತುಂಬುವ ಮಾಸವಾಗಿದೆ. ಒಳ್ಳೆಯ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಉತ್ತಮ ಸಂದರ್ಭ ಎಂದು ತಿಳಿಸಿದರು.

ಹುಲಿಯೂರುದುರ್ಗದ ಶ್ರೀ ಸಿದ್ಧಲಿಂಗ ಶಿವಾನಂದ ಸ್ವಾಮಿಗಳು ದಾರಿ ತಪ್ಪುತ್ತಿರುವ ಮನುಷ್ಯ ನೈತಿಕ ಮಾರ್ಗದಲ್ಲಿ ನಡೆಯಲು ಪೂಜ್ಯರು ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ಶ್ರಾವಣ ಮಾಸದ ಪೂಜಾನುಷ್ಠಾನದಿಂದ ಸೃಷ್ಟಿಯಲ್ಲಿ ಒಳ್ಳೆಯ ವಾತಾವರಣ ನಿರ್ಮಾಣವಾಗುತ್ತದೆ. ಗುರುಗಳು ಮಾಡುವ ಅನುಷ್ಠಾನದ ಫಲ ಸಾರ್ವತ್ರಿಕವಾಗಿ ಎಲ್ಲರಿಗೂ ಲಭ್ಯವಾಗುತ್ತದೆ. ಭಕ್ತಿಯಿಂದ ಬದುಕಿನಲ್ಲಿ ಏನನ್ನಾದರೂ ಸಾಧಿಸಬಹುದು. ನಿತ್ಯವೂ ಪ್ರಾತಃಕಾಲದಲ್ಲಿ ನಡೆಯುತ್ತಿದ್ದ ಪೂಜಾನುಷ್ಠಾನದಲ್ಲಿ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದುದು ಸಂತೋಷದ ಸಂಗತಿ ಎಂದು ಹೇಳಿದರು.

ಕುಣಿಗಲ್ ಶ್ರೀ ಹಿರೇಮಠದ ಶ್ರೀ ವೀರರುದ್ರ ಶಿವಾಚಾರ್ಯ ಸ್ವಾಮಿಗಳು ಗುರುವಿನ ಕೃಪೆಯಿದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು. ಗುರುವಿನ ಗುಲಾಮನಾಗವ ತನಕ ಮುಕ್ತಿ ದೊರೆಯಲು ಸಾಧ್ಯವಿಲ್ಲ. ಇಂತಹ ಕಾರ್ಯಕ್ರಮಗಳಿಗೆ ಮಕ್ಕಳನ್ನೂ ಕರೆದುಕೊಂಡು ಬರಬೇಕು. ಯುವಪೀಳಿಗೆಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಕೆಲಸವಾಗಬೇಕು ಎಂದು ಹೇಳಿದರು.

ಶ್ರೀ ಎಂ. ಗಿರೀಶ್, ಶ್ರೀ ವಸಂತಕುಮಾರಯ್ಯ ಮತ್ತು ಶ್ರೀಮತಿ ಉಮಾ ನಾಗೇಶ್‌ರವರುಗಳು ಅನಿಸಿಕೆಗಳನ್ನು ಹಂಚಿಕೊಂಡರು. ಪ್ರವಚನ ಆಲಿಸಿ ಉತ್ತಮ ಪ್ರಬಂಧ ರಚಿಸಿದವರಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಕೆ.ಬಿ. ಸೋಮಶೇಖರ್ ಹಾಗೂ ಶ್ರೀ ಹೆಚ್.ಎಸ್. ರಮೇಶ್‌ರವರು ಮತ್ತು ಕುಟುಂಬದವರು ಸೇವಾರ್ಥ ನೆರವೇರಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಎನ್.ಆರ್. ಶಿವಕುಮಾರ್ ಸ್ವಾಗತಿಸಿದರು. ಶ್ರೀ ಕಲ್ಯಾಣ ದೇವರು ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು. ಭಕ್ತಾದಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

**ಬೀದರ್ ಜಿಲ್ಲೆಯ ಅಭಿವೃದ್ಧಿಯಲ್ಲಿ ಭಾಲ್ಕಿ ಹಿರೇಮಠದ ಪಾತ್ರ ಮಹತ್ವದ್ದು**

ಬೀದರ್ ಜಿಲ್ಲೆಯ ಅಭಿವೃದ್ಧಿಯಲ್ಲಿ ಭಾಲ್ಕಿ ಹಿರೇಮಠದ ಪಾತ್ರ ಮಹತ್ವದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 25ರಂದು ಭಾಲ್ಕಿ ಶ್ರೀ ಹಿರೇಮಠ ಸಂಸ್ಥಾನದ ಶ್ರೀ ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ರಾಜ್ಯವಲ್ಲದೆ ನೆರೆಯ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರಗಳಲ್ಲಿ ಬಸವಣ್ಣನವರ ಸಂದೇಶ ತಲುಪಿಸಿ ಭಕ್ತರನ್ನು ಉದ್ಧರಿಸುವ ಕೆಲಸವನ್ನು ಭಾಲ್ಕಿಯ ಪಟ್ಟದ್ದೇವರು ಮಾಡುತ್ತಿದ್ದಾರೆ. ಒಂದು ಕಾಲಕ್ಕೆ ಶೈಕ್ಷಣಿಕ ಕ್ಷೇತ್ರದಲ್ಲಿ ಕೊನೆಯ ಸ್ಥಾನದಲ್ಲಿ ಇರುತ್ತಿದ್ದ ಗಡಿ ಜಿಲ್ಲೆ ಬೀದರ್ ಇದೀಗ ಸುಧಾರಣೆ ಕಾಣುತ್ತಿರುವುದರ ಹಿಂದೆ ಶ್ರೀಗಳ ಕೊಡುಗೆ ಇದೆ. ಮೈಸೂರು ಭಾಗದಲ್ಲಿ ಕನ್ನಡದ ವಿಷಯ ಬಂದಾಗಲೆಲ್ಲ ಭಾಲ್ಕಿ ಮಠದ ಶತಾಯುಷಿ ಡಾ. ಶ್ರೀ ಚನ್ನಬಸವ ಪಟ್ಟದ್ದೇವರ ನೆನಪು ಮಾಡಿಕೊಳ್ಳಲಾಗುತ್ತದೆ.

ಈ ಭಾಗದಲ್ಲಿ ನಿಜಾಮರ ಆಳ್ವಿಕೆಯಲ್ಲಿ ಪೂಜ್ಯರು ಹೊರಗಡೆ ಉರ್ದು ಬೋರ್ಡ್ ಹಾಕಿ ಒಳಗಡೆ ಕನ್ನಡ ಕಲಿಸಿ ಕನ್ನಡಾಭಿಮಾನ ಮೆರೆದಿದ್ದರು. 20ನೆಯ ಶತಮಾನದಲ್ಲಿ ಅನುಭವ ಮಂಟಪದ ಅಭಿವೃದ್ಧಿಗೆ ಚಾಲನೆ ನೀಡಿದರು. ಹಿರಿಯ ಶ್ರೀಗಳ ಮಾದರಿಯಲ್ಲಿ ಶ್ರೀ ಬಸವಲಿಂಗ ಪಟ್ಟದ್ದೇವರು ಸಂಕಷ್ಟದ ಸಮಯದಲ್ಲಿಯೂ ಮಠವನ್ನು ಮುನ್ನಡೆಸಿ ಹಿರೇಮಠ ಸಂಸ್ಥಾನವನ್ನು ಸಮೃದ್ಧಗೊಳಿಸಿದ್ದಾರೆ. ವಿದ್ಯಾ ಸಂಸ್ಥೆಗಳಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಸಂಸ್ಕಾರಕ್ಕೆ ಒತ್ತು ನೀಡುತ್ತಿರುವುದರಿಂದ ನೀಟ್, ಐಐಟಿ ಸೇರಿ ವಿವಿಧ ಕೋರ್ಸ್‌ಗಳಲ್ಲಿ ಮಕ್ಕಳು ರಾಜ್ಯ, ರಾಷ್ಟ್ರಕ್ಕೆ ಉತ್ತಮ ರ್‍ಯಾಂಕ್ ಪಡೆದು ನಾಡಿಗೆ ಕೀರ್ತಿ ತರುತ್ತಿದ್ದಾರೆ. ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ಕಲ್ಪಿಸಿ ನಾಡಿನ ಅಮೂಲ್ಯ ಆಸ್ತಿಯನ್ನಾಗಿ ಮಾಡುತ್ತಿರುವುದು ಮಾದರಿಯಾಗಿದೆ. ಅವರ ಸೇವೆ ಹೀಗೆಯೇ ಮುಂದುವರಿಯಲಿ ಎಂದು ಹಾರೈಸಿದರು.

ವಿಶ್ರಾಂತ ನ್ಯಾಯಮೂರ್ತಿಗಳಾದ ಡಾ. ಶಿವರಾಜ ಪಾಟೀಲ್‌ರವರು ಡಾ. ಶ್ರೀ ಬಸವಲಿಂಗ ಪಟ್ಟದ್ದೇವರದು ಬಸವಮಯ ಬದುಕು. ತಮ್ಮ ಇಡೀ ಜೀವನವನ್ನು ಬಸವ ತತ್ವ ಪ್ರಚಾರ, ಪ್ರಸಾರಕ್ಕೆ ಮುಡಿಪಾಗಿಟ್ಟಿದ್ದಾರೆ. ಪ್ರಾಚೀನ ಮಠವಾಗಿರುವ ಹಿರೇಮಠ ಸಂಸ್ಥಾನ ತನ್ನದೇ ಆದ ಐತಿಹಾಸಿಕ ಹಿನ್ನೆಲೆ, ಪರಂಪರೆಯಿಂದ ಕಲ್ಯಾಣ ಕರ್ನಾಟಕ ಭಾಗದ ಜನರ ಶ್ರದ್ಧಾ-ಭಕ್ತಿಯ ಕೇಂದ್ರವಾಗಿ ಗುರುತಿಸಿಕೊಂಡಿದೆ. ಅಂಥ ಮಠದ ಡಾ. ಶ್ರೀ ಬಸವಲಿಂಗ ಪಟ್ಟದ್ದೇವರು ವಿಶ್ವಗುರು ಬಸವಣ್ಣ ಬೋಧಿಸಿದ ಕಾಯಕ, ದಾಸೋಹ ತತ್ವವನ್ನು ನಾಡಿನಾದ್ಯಂತ ಬೆಳಗಿಸುತ್ತಿದ್ದಾರೆ. ಬಡ ಪರಿವಾರದಿಂದ ವಿದ್ಯಾಭ್ಯಾಸಕ್ಕಾಗಿ ಮಠವನ್ನು ಪ್ರವೇಶಿಸಿದ ಪೂಜ್ಯರು ಪೀಠಾಧಿಪತಿಗಳಾಗಿ ಹಿರೇಮಠ ಸಂಸ್ಥಾನವನ್ನು ರಾಜ್ಯದಲ್ಲಿಯೇ ಮಾದರಿಯಾಗಿ ಬೆಳೆಸಿದ್ದು ಶ್ಲಾಘನೀಯ. ಬಡವರು, ನಿರಾಶ್ರಿತರು, ದುರ್ಬಲ ವರ್ಗದವರಿಗೆ ಅನ್ನ, ಅಕ್ಷರ, ಆಶ್ರಯ ಕಲ್ಪಿಸಿ ಸಮಾಜದಲ್ಲಿ ಬದಲಾವಣೆ ತರುವ ಕೆಲಸ ಮಾಡುತ್ತಿದ್ದಾರೆ. ವಿದ್ಯಾ ದೇಗುಲ ತೆರೆದು ಸುಮಾರು 20 ಸಾವಿರ ಮಕ್ಕಳಿಗೆ ಶಿಕ್ಷಣ ಕಲ್ಪಿಸಿ ಭವಿಷ್ಯವನ್ನು ಉಜ್ವಲಗೊಳಿಸುತ್ತಿರುವ ಅವರ ಮಾರ್ಗದರ್ಶನ ಸದೃಢ ಸಮಾಜಕ್ಕೆ ಅಗತ್ಯವಾಗಿದೆ. ಮುಂದಿನ ವರ್ಷಗಳಲ್ಲಿ ಪೂಜ್ಯರ ಶತಮಾನೋತ್ಸವ ಅಭೂತಪೂರ್ವವಾಗಿ ನಡೆಯಲಿ ಎಂದು ಆಶಿಸಿದರು.

ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆಯವರು ಒಂದು ಕಾಲದಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಸೌಲಭ್ಯ ಅರಸಿ ನಗರ ಮತ್ತು ಮಹಾನಗರಗಳಿಗೆ ವಲಸೆ ಹೋಗುತ್ತಿದ್ದ ಈ ಭಾಗದ ವಿದ್ಯಾರ್ಥಿಗಳಿಗೆ ಪೂಜ್ಯರು ಸ್ಥಾಪಿಸಿದ ಶಿಕ್ಷಣ ಸಂಸ್ಥೆಯಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಉತ್ತಮ ಸಂಸ್ಕಾರ ಜತೆಗೆ ಆಧುನಿಕ ಸೌಲಭ್ಯ ಕಲ್ಪಿಸಲಾಗುತ್ತಿದೆ. ಅಂತಲೇ ರಾಜ್ಯ ಮತ್ತು ಹೊರ ರಾಜ್ಯದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಇಲ್ಲಿಗೆ ಆಗಮಿಸುತ್ತಿರುವುದು ಹೆಮ್ಮೆಯ ಸಂಗತಿ. ಶ್ರೀಗಳು ಅಮೃತೋತ್ಸವ ಸಂಭ್ರಮದಲ್ಲಿರುವುದು ಸಂತಸದ ವಿಷಯ. ವರ್ಷವಿಡೀ ಯೋಜನೆಗಳನ್ನು ರೂಪಿಸಿ ಪೂಜ್ಯರ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವುದಾಗಿ ತಿಳಿಸಿದರು.

ಶ್ರೀ ಬಸವಲಿಂಗ ಪಟ್ಟದ್ದೇವರು, ಶ್ರೀ ಗುರುಬಸವ ಪಟ್ಟದ್ದೇವರು, ಸಂಸದರಾದ ಶ್ರೀ ಸಾಗರ್ ಖಂಡ್ರೆ, ಮಾಜಿ ಶಾಸಕರಾದ ಶ್ರೀ ಪ್ರಕಾಶ ಖಂಡ್ರೆ ಮಾತನಾಡಿದರು. ಶ್ರೀ ಬಸವರಾಜ ಖಂಡೇರಾವ್, ಶ್ರೀ ಗುರುನಾಥ ಕೊಳ್ಳುರು, ಶ್ರೀ ಬಸವರಾಜ ಧನ್ನೂರು, ಶ್ರೀಮತಿ ಶಕುಂತಲಾ ಬೆಲ್ದಾಳೆ, ಶ್ರೀ ಚನ್ನಬಸವಣ್ಣ ಬಳತೆ, ಶ್ರೀ ಸಿದ್ದಯ್ಯಸ್ವಾಮಿ, ಶ್ರೀ ಬಸವರಾಜ ಬುಳ್ಳಾ, ಶ್ರೀ ರಾಜಶೇಖರ್ ಅಷ್ಟೂರೆಯವರುಗಳು ಉಪಸ್ಥಿತರಿದ್ದರು. ಶ್ರೀ ಸೋಮನಾಥ ಅಷ್ಟೂರೆ ವಂದಿಸಿದರು. ಶ್ರೀ ನವಲಿಂಗ ಪಾಟೀಲ್ ವಂದಿಸಿದರು.

**ಪತ್ರಿಕಾ ವಿತರಕರ ಕಾರ್ಯ ಮಹತ್ತರವಾದುದು**

ಪತ್ರಿಕಾ ವಿತರಕರ ಕಾರ್ಯ ಮಹತ್ತರವಾದದು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 28ರಂದು ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಹಾಗೂ ಐದನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಪ್ರಸ್ತುತ ದೃಶ್ಯ ಮಾಧ್ಯಮ ಸಾಕಷ್ಟು ವ್ಯಾಪಿಸಿದ್ದರೂ ಬಹಳಷ್ಟು ಮಂದಿಗೆ ದಿನಪತ್ರಿಕೆ ಓದಿದರಷ್ಟೆ ಸಮಾಧಾನ ಆಗುತ್ತದೆ. ಪತ್ರಿಕೆಗಳಲ್ಲಿ ಪ್ರಕಟವಾದರಷ್ಟೇ ಅದು ನಿಜವಾದ ಸುದ್ದಿ. ಪತ್ರಿಕಾರಂಗ ಪ್ರಜಾಪ್ರಭುತ್ವದ ನಾಲ್ಕನೇ ಅಂಗ. ಜಗತ್ತಿನಲ್ಲಿ ಆಗುವ ಸಂಗತಿಗಳನ್ನು ತಿಳಿಸುವ ಕೆಲಸವನ್ನು ಮುದ್ರಣ ಮಾಧ್ಯಮ ಮಾಡುತ್ತಿದೆ. ಪತ್ರಿಕೆಗಳನ್ನು ಓದುಗರ ಬಳಿಗೆ ತಲುಪಿಸುವ ಕೆಲಸವನ್ನು ವಿತರಕರು ನಿಷ್ಠೆ ಶ್ರದ್ಧೆಯಿಂದ ಮಾಡುತ್ತಿದ್ದಾರೆ. ಪತ್ರಿಕೆ ಬರುವುದು ತಡವಾದರೆ ಚಡಪಡಿಸುವ ಓದುಗರು ಇಂದಿಗೂ ಬಹಳಷ್ಟು ಮಂದಿ ಇದ್ದಾರೆ. ಮಳೆ, ಚಳಿ, ಗಾಳಿ, ಬಿಸಿಲನ್ನು ಲೆಕ್ಕಿಸದೆ ಪತ್ರಿಕೆ ವಿತರಿಸುವ ಮಹತ್ತರ ಜವಾಬ್ದಾರಿಯನ್ನು ವಿತರಕರು ಮಾಡುತ್ತಿದ್ದಾರೆ. ಅಮೆರಿಕದಲ್ಲಿ ಪತ್ರಿಕೆಗಳನ್ನು ಹೊರಗಿಟ್ಟು ಹೋಗುತ್ತಾರೆ. ನಮ್ಮಲ್ಲಿ ಈಗಲೂ ಪ್ರೀತಿಯಿಂದ ಮನೆಯೊಳಕ್ಕೆ ತಂದುಕೊಡುವ ಕೆಲಸವನ್ನು ವಿತರಕರು ಮಾಡುತ್ತಿದ್ದಾರೆ. ಇದು ಗೌರವಯುತವಾದ ಕೆಲಸ. ಒಂದು ಕಾಲದಲ್ಲಿ ವಿತರಕರ ಕಷ್ಟಗಳನ್ನು ಕೇಳುವವರೇ ಇರಲಿಲ್ಲ. ಈಗ ಸರ್ಕಾರ ಅದನ್ನು ಆಲಿಸುತ್ತಿದೆ. ಸಂಘ ಮಾಡಿರುವುದು ಒಳ್ಳೆಯ ಬೆಳವಣಿಗೆ. ಪತ್ರಿಕಾ ವಿತರಕರು ಏನು ಬೇಕಾದರೂ ಆಗಬಹುದು ಎಂಬುದಕ್ಕೆ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರೇ ಸಾಕ್ಷಿ ಎಂದು ಹೇಳಿದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ತಗಡೂರು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಶ್ರೀ ಕೆ.ವಿ. ಪ್ರಭಾಕರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಕೆ. ದೀಪಕ್. ಹಿರಿಯ ಪತ್ರಕರ್ತರಾದ ಶ್ರೀ ಎಲ್. ನಾಗಣ್ಣ, ಶ್ರೀ ಅಂಶಿ ಪ್ರಸನ್ನಕುಮಾರ್, ಶ್ರೀ ಎಂ.ಆರ್. ಸತ್ಯನಾರಾಯಣ ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಎಚ್.ವಿ. ರಾಜೀವ್, ಶ್ರೀ ಸಿ.ಕೆ. ಮಹೇಂದ್ರ, ಶ್ರೀ ಎಸ್.ಟಿ.

ರವಿಕುಮಾರ್, ಶ್ರೀ ಎಂ. ಸುಬ್ರಹ್ಮಣ್ಯ, ಶ್ರೀ ಧರ್ಮಾಪುರ ನಾರಾಯಣ, ಶ್ರೀ ಬಿ. ರಾಘವೇಂದ್ರ, ಶ್ರೀ ಕೆ. ಶಂಭುಲಿಂಗ, ಶ್ರೀ ಜೆ.ಎಸ್. ಹೋಮದೇವ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಏಕಾಂತಪ್ಪ ಸ್ವಾಗತಿಸಿದರು. ಶ್ರೀ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

**ರಾಜೇಂದ್ರ ಶ್ರೀಗಳು ಶಿಕ್ಷಣವೇ ಸಮಾಜಕ್ಕೆ ನೀಡುವ ಶ್ರೇಷ್ಠ ಸೇವೆ ಎಂದು ನಂಬಿದ್ದರು**

ಶಿಕ್ಷಣವೇ ಸಮಾಜಕ್ಕೆ ನೀಡುವ ಶ್ರೇಷ್ಠ ಸೇವೆ ಎಂದು ರಾಜೇಂದ್ರ ಶ್ರೀಗಳು ನಂಬಿದ್ದರು ಮತ್ತು ಅದರಲ್ಲಿ ದೃಢವಾದ ವಿಶ್ವಾಸವನ್ನು ಹೊಂದಿದ್ದರು ಎಂದು ಕೇಂದ್ರದ ಕೃಷಿ, ರೈತ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಗಸ್ಟ್ 29ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಇಂತಹ ಸಮಾಜಮುಖಿ ಭಾವನೆಯೊಂದಿಗೆ ರಾಜೇಂದ್ರ ಶ್ರೀಗಳು ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾನಿಲಯಗಳನ್ನೊಳಗೊಂಡ ನೂರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಇದರಿಂದಾಗಿ ಲಕ್ಷಾಂತರ ಬಡ ಮತ್ತು ಗ್ರಾಮೀಣ ಅಕ್ಷರವಂಚಿತ ಮಕ್ಕಳಿಗೆ ಶಿಕ್ಷಣ ಪಡೆಯುವ ಅವಕಾಶವಾಯಿತು. ಇಂದು ಅವರು ಸ್ಥಾಪಿಸಿದ ಸಂಸ್ಥೆಗಳು ಜ್ಞಾನದ ದಾರಿದೀಪಗಳಾಗಿವೆ. ಇಲ್ಲಿ ಶಿಕ್ಷಣ ಪಡೆದ ವೈದ್ಯರು, ಇಂಜಿನಿಯರಗಳು, ಶಿಕ್ಷಕರು ಮತ್ತು ನಾಯಕರುಗಳು ಉತ್ತಮ ಸಂಸ್ಕಾರವಂತ ವ್ಯಕ್ತಿಗಳಾಗಿ ರೂಪುಗೊಂಡು ದೇಶ ಮಾತ್ರವಲ್ಲದೆ, ಜಗತ್ತಿನಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ. ರಾಜೇಂದ್ರ ಶ್ರೀಗಳ ಜೀವನ 'ಸರ್ವಜನ ಹಿತಾಯ ಸರ್ವಜನ ಸುಖಾಯ' ಎಂಬ ಮಾತಿಗೆ ಅದ್ಭುತವಾದ ಉದಾಹರಣೆಯಾಗಿದೆ. ಅವರು ತಮ್ಮ ಜೀವನದ ಪ್ರತಿ ಕ್ಷಣವನ್ನು ಧರ್ಮದ ರಕ್ಷಣೆ ಮತ್ತು ಕಾಯಕಕ್ಕಾಗಿ ಮೀಸಲಿಟ್ಟಿದ್ದರು. ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿನಿಲಯಗಳನ್ನು ತೆರೆಯುವ ಮೂಲಕ ಮಾನವ ಸೇವೆಯೇ ನಿಜವಾದ ಭಗವಂತನ ಸೇವೆ ಎಂದು ನಂಬಿದ್ದರು. ಅಂತಹ ಪೂಜ್ಯರ ಸ್ಮರಣೆಯಲ್ಲಿ ಪಾಲ್ಗೊಂಡಿದ್ದು ನನಗೆ ಅತ್ಯಂತ ಧನ್ಯತಾ ಭಾವವನ್ನು ಮೂಡಿಸಿದೆ. ಉದಾರ ಚರಿತಾನಾಂತು ವಸುದೈವ ಕುಟುಂಬಕಂ ಎಂದು ಸಾವಿರಾರು ವರ್ಷಗಳ ಹಿಂದೆಯೇ ಇಲ್ಲಿನ ಸಂತರು, ಮಹಾತ್ಮರು ಸಾರಿದ್ದಾರೆ. ಭಾರತದಲ್ಲಿ ಮನುಷ್ಯರಲ್ಲಿ ಮಾತ್ರವಲ್ಲ, ಪ್ರಾಣಿಗಳಲ್ಲೂ ಸದ್ಭಾವನೆಯ ಗುಣವಿದೆ. ಭಾರತ ಜಗತ್ತಿಗೆ ಸದಾ ವಿಶ್ವಕಲ್ಯಾಣದ ಸಂದೇಶವನ್ನು ನೀಡುತ್ತಿದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಮೈಸೂರಿಗೆ ಅರಮನೆ ಗರಿಮೆಯಾದರೆ, ಸುತ್ತೂರು ಶ್ರೀಮಠ ಹಿರಿಮೆಯಾಗಿದೆ. ಸಮಾಜದಲ್ಲಿ ಶಾಂತಿ, ಸೌಹಾರ್ದ ಸ್ಥಾಪನೆಗಾಗಿಯೇ ಸ್ಥಾಪನೆಯಾದ ಮಠವಿದು. ವಚನಕಾರರಾದ ಶ್ರೀ ಘನಲಿಂಗ ಶಿವಯೋಗಿಗಳು, ಶ್ರೀ ಮಂತ್ರಮಹರ್ಷಿಗಳಂತಹ ಪೂಜ್ಯರನ್ನು ಸಮಾಜಕ್ಕೆ ಕೊಡುಗೆಯಾಗಿ

ನೀಡಿದೆ. ಅಕ್ಷರ ಕ್ರಾಂತಿಯನ್ನು ಮಾಡಿದ ರಾಜೇಂದ್ರ ಶ್ರೀಗಳು ನಾಡಿನ ಉದ್ದಗಲಕ್ಕೂ ಮಠದ ಸೇವಾ ಕಾರ್ಯಗಳನ್ನು ಎಲ್ಲ ಕ್ಷೇತ್ರಕ್ಕೂ ವಿಸ್ತರಿಸಿದರು. ಅವರು ಮಾತ್ರ ಉದ್ಧಾರವಾಗದೇ, ಎಲ್ಲರ ಬದುಕನ್ನು ಉದ್ಧರಿಸಿದರು. ಭವಸಾಗರದಿಂದ ಎಲ್ಲರನ್ನೂ ಭಕ್ತಿ ಪಥದ ಮೂಲಕ ದಾಟಿಸುವ ಕೆಲಸವನ್ನು ಮಾಡಿದರು. ತೀರಾ ಕಷ್ಟಕಾಲದಲ್ಲಿ ಪ್ರಸಾದನಿಲಯಗಳನ್ನು ತೆರೆದರು. ಬಹುತೇಕ ಕಷ್ಟದ ಸಂದರ್ಭಗಳಲ್ಲಿ ತ್ಯಾಗದಿಂದ ಪ್ರಸಾದನಿಲಯಗಳನ್ನು ಮುನ್ನಡೆಸಿದರು. ರಾಜೇಂದ್ರ ಶ್ರೀಗಳು ಈ ಭಾಗದ ಜನರಿಗೆ ದಾರಿದೀಪವಾದರು. ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಬಹು ದೊಡ್ಡ ಜ್ಯೋತಿಯಾಗಿ ಎಲ್ಲರನ್ನೂ ಕೈಹಿಡಿದು ಮುನ್ನಡೆಸುತ್ತಿದ್ದಾರೆ. ಸುತ್ತೂರು ಮತ್ತು ಸಿದ್ಧಗಂಗಾ ಶ್ರೀಮಠಗಳ ಮಧ್ಯೆ ಅವಿನಾಭಾವ ಸಂಬಂಧವಿದೆ. ಶಿವಕುಮಾರ ಶ್ರೀಗಳು ಮತ್ತು ರಾಜೇಂದ್ರ ಶ್ರೀಗಳು ಸಮಾಜ ಎರಡು ಕಣ್ಣುಗಳಿದ್ದಂತೆ ಎಂದು ಗವಿಮಠದ ಶ್ರೀ ಗೌರಿಶಂಕರ ಸ್ವಾಮಿಗಳು ಹೇಳುತ್ತಿದ್ದರೆಂದು ಸ್ಮರಿಸಿದರು.

ಇದೇ ಸಂದರ್ಭದಲ್ಲಿ 'ಸರ್ವದರ್ಶನ ಸಂಗ್ರಹ' ಮತ್ತು 'ಕಾಯಕ ತಪಸ್ವಿ' ಕೃತಿಗಳ ನಾಲ್ಕನೇ ಆವೃತ್ತಿಗಳು ಹಾಗೂ 'ಪ್ರಸಾದ' ಮತ್ತು 'ಜೆಎಸ್‌ಎಸ್ ವಾರ್ತಾಪತ್ರ'ಗಳ ವಿಶೇಷ ಸಂಚಿಕೆಗಳನ್ನು ಬಿಡುಗಡೆಗೊಳಿಸಲಾಯಿತು.

ಲೋಕಸಭಾ ಸದಸ್ಯರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು, ಶಾಸಕರುಗಳಾದ ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಟಿ.ಎಸ್. ಶ್ರೀವತ್ಸರವರುಗಳು ಮಾತನಾಡಿದರು. ಶಾಸಕರು ಹಾಗೂ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಅಧ್ಯಕ್ಷರಾದ ಶ್ರೀ ಅನಿಲ್ ಚಿಕ್ಕಮಾದು, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಟಿ. ದೇವೇಗೌಡ, ಶಾಸಕರುಗಳಾದ ಶ್ರೀ ಕೆ. ವಿವೇಕಾನಂದ, ಶ್ರೀ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರುಗಳಾದ ಶ್ರೀ ತೋಂಟದಾರ್ಯ, ಶ್ರೀ ಬಾಲರಾಜ್, ಶ್ರೀ ಸಿ.ಎಸ್. ನಿರಂಜನಕುಮಾರ್ ಮೊದಲಾದವರುಗಳು ಉಪಸ್ಥಿತರಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಸ್ವಾಗತಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನರವರು ವಂದಿಸಿದರು. ಶ್ರೀಮತಿ ಕೆ.ಜಿ. ವಿನುತ, ಶ್ರೀಮತಿ ರೂಪ ಗುರುಪ್ರಸಾದ್ ಕು. ಭಾರತಿ, ಕು. ಭಾನುಮತಿ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರೊ. ಕೆ.ಎಸ್. ಸುರೇಶ್ ಕಾರ್ಯಕ್ರಮ ನಿರೂಪಿಸಿದರು.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ ನಿವೃತ್ತರಾದವರಿಗೆ ಅಭಿನಂದನೆ**

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಗಸ್ಟ್ 29ರಂದು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2024–25ನೇ

ಸಾಲಿನಲ್ಲಿ ನಿವೃತ್ತರಾದವರಿಗೆ ಪರಮಪೂಜ್ಯ ಜಗದ್ಗುರುಗಳವರು ನಿವೃತ್ತರ ಪರಿಚಯದ 'ತೇರನೆಳೆದವರು? ಪುಸ್ತಕವನ್ನು ಬಿಡುಗಡೆಗೊಳಿಸಿ, ಅಭಿನಂದಿಸಿ ಆಶೀರ್ವದಿಸಿದರು.

ಸೇವೆಯ ದಿನಗಳ ಅನುಭವಗಳನ್ನು ಹಂಚಿಕೊಂಡ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಡಾ. ಸ್ವರೂಪ ಸಿಂಹರವರು ಜೆಎಸ್‌ಎಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದು ಸೌಭಾಗ್ಯ. ಇಲ್ಲಿ ಒಂದು ಕುಟುಂಬದ ಸದಸ್ಯರ ರೀತಿಯಲ್ಲಿ ಎಲ್ಲ ನೌಕರರನ್ನು ಕಾಣಲಾಗುತ್ತದೆ. ಸೇವೆಯ ಸಂದರ್ಭದಲ್ಲಿ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳೊಂದಿಗೆ ಕಳೆದ ಕ್ಷಣಗಳು ಜೀವನದಲ್ಲಿ ಸದಾ ಹಸಿರಾಗಿರುತ್ತವೆ. ಜೆಎಸ್‌ಎಸ್ ಸಂಸ್ಥೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಹೊಂದಲಿ ಎಂಬುದೇ ನಮ್ಮೆಲ್ಲರ ಆಶಯ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಪೀಠದ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2024 ಸೆಪ್ಟೆಂಬರ್‌ನಿಂದ 2025 ಆಗಸ್ಟ್ ಅಂತ್ಯದವರೆಗೆ ನಿವೃತ್ತರಾದವರು ಹಾಗೂ ಸೇವೆಯಿಂದ ಬಿಡುಗಡೆಗೊಂಡವರಿಗೆ ಅಭಿನಂದನೆ ಮತ್ತು ಸೇವೆಯಲ್ಲಿ ಇರುವಾಗಲೇ ಅಗಲಿದವರ ಕುಟುಂಬದವರಿಗೆ ಸಾಂತ್ವನ ಹೇಳಲಾಯಿತು. ಒಟ್ಟು 202 ನೌಕರರು ಹಾಗೂ ಅವರ ಕುಟುಂಬವರ್ಗದವರನ್ನು ಪೂಜ್ಯರು ಆಶೀರ್ವದಿಸಿ ಅಭಿನಂದಿಸಿದರು.

ಶ್ರೀ ಬಿ. ನಿರಂಜನಮೂರ್ತಿ ಸ್ವಾಗತಿಸಿದರು. ಡಾ. ಬಿ. ಪ್ರಭುಸ್ವಾಮಿ, ಕು. ಎಚ್.ಎಸ್. ಅಂಬಿಕಾ, ಡಾ. ಪ್ರಿಯದರ್ಶಿನಿ, ಶ್ರೀಮತಿ ಹೆಚ್.ಆರ್. ಮಮತ, ಶ್ರೀ ಆರ್.ಎಸ್. ಕುಮಾರ್, ಶ್ರೀಮತಿ ಡಿ.ಎಸ್. ಅಂಬಿಕಾ, ಶ್ರೀಮತಿ ಕೆ.ಜಿ. ವಿನುತಾ, ಶ್ರೀಮತಿ ಸಿ. ವಾಣಿ, ಶ್ರೀಮತಿ ಹೆಚ್.ಎಸ್. ಮಾನಸ, ಶ್ರೀ ಬಿ.ಎಸ್. ಸುದೀಪ್ ಹಾಗೂ ಶ್ರೀ ಜಿ. ಶಿವಸ್ವಾಮಿಯವರುಗಳು ನಿವೃತ್ತರುಗಳ ಪರಿಚಯವನ್ನು ನಡೆಸಿಕೊಟ್ಟರು. ಕಾನೂನು ಕಾಲೇಜು ವಿದ್ಯಾರ್ಥಿಗಳಾದ ಕು. ಎಸ್. ಲಿಖಿತ ಮತ್ತು ಕು. ವಿನ್ಮಯಿರವರು ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಪಿ. ಶಿವಾನಂದ ಭಾರತಿ ವಂದಿಸಿದರು. ಶ್ರೀಮತಿ ಎಂ. ತೇಜಸ್ವಿನಿ ನಿರೂಪಿಸಿದರು.

**ಪ್ರಸಾದ ಲೇಖನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ**

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಅಂಗವಾಗಿ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಪ್ರಸಾದ ಲೇಖನ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಗಸ್ಟ್ 29ರಂದು ನಡೆದ ರಾಜೇಂದ್ರ ಶ್ರೀಗಳವರ ಶತೋತ್ತರ ದಶಮಾನೋತ್ಸವದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿಯವರು ಬಹುಮಾನಗಳನ್ನು ವಿತರಿಸಿದರು.

ಪದವಿಪೂರ್ವ ವಿಭಾಗದಲ್ಲಿ ಮೈಸೂರು ವಿಜಯನಗರದ ಸದ್ವಿದ್ಯಾ ಸೆಮಿ–ರೆಸಿಡೆನ್ಸಿಯಲ್ ಪದವಿಪೂರ್ವ ಕಾಲೇಜಿನ ಕು. ಎಲ್. ದೀಕ್ಷಾ ಪ್ರಥಮ, ಹಾಸನ ಸಂತ ಜೋಸೆಫರ ಪದವಿಪೂರ್ವ ಕಾಲೇಜಿನ ಕು. ನಂದಿನಿ ದ್ವಿತೀಯ, ಸೋಮವಾರಪೇಟೆ ತಾಲ್ಲೂಕು ನೆಲ್ಲಿಹುದಿಕೇರಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಕು. ಕೆ.ಎಸ್. ಸಫ ತೃತೀಯ ಬಹುಮಾನ ಪಡೆದರು.

ಪದವಿ ವಿಭಾಗದಲ್ಲಿ ಮೈಸೂರು ಹಿಂದೂಸ್ತಾನ್ ಕಾಲೇಜಿನ ಎ.ಎಂ. ಪ್ರಣವಿ ಪ್ರಥಮ, ತಾಂಡವಪುರ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದ ಕು. ಕೆ.ಎಸ್. ಧನ್ಯಶ್ರೀ ದ್ವಿತೀಯ, ಸರಸ್ವತಿಪುರಂ ಜೆಎಸ್ಎಸ್ ಮಹಿಳಾ ಕಾಲೇಜಿನ ಕು. ಎಂ. ನಿಶಾ ತೃತೀಯ ಬಹುಮಾನ ಪಡೆದರು.

ಸ್ನಾತಕೋತ್ತರ ವಿಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕು. ಆರ್. ಕುಸುಮಾಬಾಯಿ ಪ್ರಥಮ, ಮೈಸೂರು ಊಟಿ ರಸ್ತೆ ಜೆಎಸ್ಎಸ್ ಕಾಲೇಜಿನ ಕು. ಹರ್ಷಿತ ದ್ವಿತೀಯ ಹಾಗೂ ಶ್ರೀ ಆಕಾಶ್ ತೃತೀಯ ಬಹುಮಾನ ಪಡೆದರು. ಶ್ರೀ ಜಿ.ಎಂ. ಪ್ರಸಾದ್ ವಿವರಗಳನ್ನು ಮಂಡಿಸಿದರು.

**ಭಾರತದ ಸೇನೆಯ ಸಾಧನೆ ಅಪೂರ್ವವಾದುದು**

ಭಾರತದ ಸೇನೆಯ ಸಾಧನೆ ಅಪೂರ್ವವಾದುದು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 30ರಂದು ತುಮಕೂರಿನಲ್ಲಿ ಆಯೋಜಿಸಿದ್ದ ಅಪರೇಷನ್ ಸಿಂಧೂರ ವಿಜಯೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ನಮ್ಮ ದೇಶದ ಸೇನಾಪಡೆ ಶತ್ರು ರಾಷ್ಟ್ರದ ಮೇಲೆ ದಾಳಿ ನಡೆಸಿ ದೇಹದಲ್ಲಿ ಅನಾರೋಗ್ಯಕ್ಕೆ ತುತ್ತಾದ ಭಾಗಕ್ಕೆ ಮಾತ್ರ ಚಿಕಿತ್ಸೆ ನೀಡುವಂತೆ ಅಲ್ಲಿನ ನಾಗರಿಕರಿಗೆ ತೊಂದರೆಯಾಗದಂತೆ ಕೇವಲ ಉಗ್ರರ ನೆಲೆಗಳನ್ನು ನಾಶಪಡಿಸಿದೆ. ಸೇನೆಯ ಸಾಮರ್ಥ್ಯ ಹಾಗೂ ಇದು ದೇಶದ ಯುದ್ಧ ಕ್ಷಮತೆಯನ್ನು ತೋರಿಸುತ್ತದೆ. ಯಾವುದೇ ದೇಶದಲ್ಲಿ ಕ್ರಾಂತಿಯಾದರೆ ಅದು ಯುವಶಕ್ತಿಯಿಂದ ಎಂಬುದನ್ನು ಮರೆಯಬಾರದು ಎಂದು ಹೇಳಿದರು.

ಮೇಘಾಲಯದ ರಾಜ್ಯಪಾಲರಾದ ಶ್ರೀ ಸಿ.ಹೆಚ್. ವಿಜಯಶಂಕರ್‌ರವರು ಅಪರೇಷನ್ ಸಿಂಧೂರ ಕಾರ್ಯಾಚರಣೆ ಐತಿಹಾಸಿಕ ಯಶಸ್ಸು ಕಂಡಿದೆ. ಇದು ದೇಶದ ಏಕತೆ ಮತ್ತು ದೇಶಭಕ್ತಿಯ ಪ್ರತೀಕವಾಗಿ ಕಾಣುತ್ತಿದೆ. ನಾವು ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕೆ ಸಮಾನ ಎಂಬ ಭಾವನೆ ಇಟ್ಟುಕೊಂಡು ಬೆಳೆದವರು. ಪಹಲ್ಗಾಮ್‌ನಲ್ಲಿ ದಾಳಿ ನಡೆದಾಗ ಬಿಹಾರದಲ್ಲಿದ್ದ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ತಕ್ಕ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಿದ್ದರು. ಅದರಂತೆ ಉತ್ತರ ಕೊಟ್ಟರು ಎಂದು ಆಪರೇಷನ್ ಸಿಂಧೂರದ ಯಶಸ್ಸನ್ನು ಸ್ಮರಿಸಿದರು.

ಕೇಂದ್ರದ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣನವರು ಸಿಂಧೂ ನದಿ ನೀರನ್ನು

ಪಾಕಿಸ್ತಾನಕ್ಕೆ ತಡೆಹಿಡಿದು ನೀರು ಮತ್ತು ರಕ್ತ ಒಟ್ಟಿಗೆ ಹರಿಯಲು ಸಾಧ್ಯವಿಲ್ಲವೆಂದು ಪ್ರಧಾನಿ ನರೇಂದ್ರ ಮೋದಿಯವರು ವಿಶ್ವಕ್ಕೆ ಸಾರಿದ್ದಾರೆ. ಆಪರೇಷನ್ ಸಿಂಧೂರ ಭಯೋತ್ಪಾದನೆಯ ವಿರುದ್ಧದ ಸಮರದ ಹೊಸ ಆರಂಭ ಎಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶಾಸಕರುಗಳಾದ ಶ್ರೀ ಬಿ. ಸುರೇಶ್‌ಗೌಡ, ಶ್ರೀ ಎಂ.ಟಿ. ಕೃಷ್ಣಪ್ಪ, ಸಂಸದರಾದ ಡಾ. ಸಿ.ಎನ್. ಮಂಜುನಾಥ್, ಇಸ್ರೋ ಮಾಜಿ ಅಧ್ಯಕ್ಷರಾದ ಡಾ. ಎ.ಎಸ್. ಕಿರಣ್‌ಕುಮಾರ್, ಮಾಜಿ ಸಚಿವರಾದ ಶ್ರೀ ಸೊಗಡು ಶಿವಣ್ಣ. ಡಿಆರ್‌ಡಿಎಲ್ ಮಾಜಿ ನಿರ್ದೇಶಕರಾದ ಡಾ. ಪ್ರಹ್ಲಾದ್ ರಾಮ್‌ರಾವ್ ಉಪಸ್ಥಿತರಿದ್ದರು.

**ನಿತ್ಯವೂ ಭಗವಂತನನ್ನು ನೆನೆಯಬೇಕು**

ಭಗವಂತನ ಕೃಪೆಯಿಂದಲೇ ಎಲ್ಲವೂ ನಡೆಯುವುದರಿಂದ ಅವನನ್ನು ನಿತ್ಯವೂ ನೆನೆಯುತ್ತಿರಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 30ರಂದು ಕೊರಟಗೆರೆ ತಾಲ್ಲೂಕು ಕರಿದುಗ್ಗನಹಳ್ಳಿಯ ಶ್ರೀ ದೊಡ್ಡಮ್ಮದೇವಿಯ ಸ್ಥಿರಬಿಂಬ ಪ್ರತಿಷ್ಠಾಪನಾ ಕುಂಭಾಭಿಷೇಕ ಮಹೋತ್ಸವ ಮತ್ತು ಚಂಡಿಕಾ ಹೋಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಲೌಕಿಕ ಮತ್ತು ಆಧ್ಯಾತ್ಮಿಕ ಎರಡನ್ನೂ ಬದುಕಿನಲ್ಲಿ ಅನುಸರಿಸಬೇಕು. ಮನಸ್ಸನ್ನು ಸ್ಥಿರವಾಗಿಟ್ಟುಕೊಳ್ಳಬೇಕು. ಚಂಚಲವಾಗಲು ಬಿಡಬಾರದು. ಭಗವಂತನ ಸೇವೆಯನ್ನು ಎಲ್ಲರೂ ಶ್ರದ್ಧೆ ಮತ್ತು ಭಕ್ತಿಯಿಂದ ಮಾಡಬೇಕು ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭಾರತೀಯ ಸಂಸ್ಕೃತಿಯಲ್ಲಿ ನಮ್ಮ ದೇವಾಲಯಗಳಿಗೆ ವಿಶೇಷ ಸ್ಥಾನವಿದೆ. ನಿತ್ಯವೂ ಮನಸ್ಸನ್ನು ಶುದ್ಧವಾಗಿಟ್ಟುಕೊಳ್ಳಲು ದೇವಾಲಯಗಳಿಗೆ ಹೋಗಬೇಕು. ದುರ್ಗುಣಗಳು ದೂರವಾಗಲು ಪ್ರತಿನಿತ್ಯವೂ ಪ್ರಾರ್ಥನೆ ಮಾಡಬೇಕು. ದೇವರನ್ನು ಪೂಜಿಸುವಂತೆ ಹೆತ್ತ ತಾಯಿಯನ್ನೂ ಪೂಜಿಸಬೇಕು. ದೇವರ ಋಣವನ್ನಾದರೂ ತೀರಿಸಬಹುದು, ಆದರೆ ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಉದ್ಯಮಿಗಳಾದ ಶ್ರೀ ಪಿ. ನೀಲೇಶ್ ಮಾತನಾಡಿದರು. ಕಾರವೇಶ್ವರ ಮಠ, ಸಿದ್ಧರಬೆಟ್ಟ, ಎಲೆರಾಂಪುರ ಎಂ.ಎಲ್. ಹುಂಡಿ, ಅಟವಿ ಮಠ, ವನಕಲ್ಲು ಮೊದಲಾದ ಮಠಗಳ ಶ್ರೀಗಳು ಉಪಸ್ಥಿತರಿದ್ದರು.

**ರಾಜ್ಯದಲ್ಲಿ ವಿದ್ಯಾವಂತರನ್ನು ಹೆಚ್ಚಿಸಿದ ಕೀರ್ತಿ ಮಠಗಳಿಗೆ ಸಲ್ಲಬೇಕು**

ಕರ್ನಾಟಕದಲ್ಲಿ ವಿದ್ಯಾವಂತರನ್ನು ಹೆಚ್ಚಿಸಿದ ಕೀರ್ತಿ ಮಠಮಾನ್ಯಗಳಿಗೆ ಸಲ್ಲಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 4ರಂದು ಮೈಸೂರು ಶ್ರೀ

ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳವರ ಅಮೃತ ಮಹೋತ್ಸವ ಹಾಗೂ ನೂತನ ನಿರಂಜನ ಪಟ್ಟಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕರ್ನಾಟಕದಲ್ಲಿ ಮಠ–ಮಾನ್ಯಗಳು, ಸಂಘಸಂಸ್ಥೆಗಳು ಮಾಡಿದ ಕಾರ್ಯ ಅಪಾರವಾದುದು. ಚಾಮರಾಜನಗರದಿಂದ ಬೀದರ್‌ನ ಭಾಲ್ಕಿಯವರೆಗೆ ಸಾವಿರಾರು ಮಠಗಳು ಶೈಕ್ಷಣಿಕವಾಗಿ ಸೇವೆ ಸಲ್ಲಿಸಿವೆ. ಮಠಗಳಲ್ಲಿ ಸ್ವಾಮಿಗಳಿಗೆ ಪ್ರಸಾದಕ್ಕೆ ಸೌಲಭ್ಯ ಇಲ್ಲದಿದ್ದರೂ ವಿದ್ಯಾರ್ಥಿಗಳ ಬೆಳವಣಿಗೆ ಮುಖ್ಯ ಎಂದು ಕಂಕಣ ಕಟ್ಟಿ ನಾಡಿನ ಮಕ್ಕಳ ಕಲ್ಯಾಣಕ್ಕೆ ವೀರಶೈವ–ಲಿಂಗಾಯತ ಮಠಗಳು ಶ್ರಮಿಸಿವೆ. ಅಂತಹ ಮಠಗಳಲ್ಲಿ ಮೈಸೂರಿನ ಹೊಸಮಠವನ್ನು ನವೀಕರಿಸಿದ ಕೀರ್ತಿ ಶ್ರೀ ಗುರುಶಾಂತ ಸ್ವಾಮಿಗಳಿಗೆ ಸಲ್ಲಬೇಕು. ಆರು ಶತಮಾನಗಳ ಹಿಂದೆಯೇ ಆರಂಭವಾದ ಮಠ ನವೀಕರಣದ ನಂತರ ಶ್ರೀ ಹೊಸಮಠ ಎಂದು ಕರೆಯಲ್ಪಡುತ್ತಿದೆ. ಮೈಸೂರಿನಲ್ಲಿ ಹಿಂದೆ ಹಲವಾರು ಮಠಗಳು ಇದ್ದವು. ಆದರೆ, ಇವತ್ತು ಬೆರಳೆಣಿಕೆಯಷ್ಟು ಮಠಗಳು ಮಾತ್ರ ಉಳಿದಿವೆ. ಶ್ರೀ ಚಿದಾನಂದ ಸ್ವಾಮಿಗಳು ಕ್ರಿಯಾಶೀಲರು, ಉತ್ತಮ ಸಂಘಟಕರು. ಯಾವುದೇ ಕೆಲಸವಾದರೂ ವ್ಯವಸ್ಥಿತವಾಗಿ ನಿರ್ವಹಿಸುವ ಸಾಮರ್ಥ್ಯ ಉಳ್ಳವರು. ರಾಜೇಂದ್ರ ಶ್ರೀಗಳೊಂದಿಗೆ ನಿಕಟವಾದ ಬಾಂಧವ್ಯವನ್ನು ಹೊಂದಿದ್ದರು. ಶ್ರೀಮಠದ ಪರಂಪರೆ ಮುಂದುವರಿಯಬೇಕು ಎಂಬ ಸದಾಶಯದಿಂದ ಶ್ರೀ ಇಮ್ಮಡಿ ಸಿದ್ಧಬಸವ ಸ್ವಾಮಿಗಳನ್ನು ಕಿರಿಯ ಶ್ರೀಗಳಾಗಿ ನೇಮಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸ ಮಾಡುತ್ತಿರುವ ಕಿರಿಯ ಶ್ರೀಗಳು ಇಂದು ಆಡಿದ ಮಾತುಗಳು ಮಠದ ಜವಾಬ್ದಾರಿಯನ್ನು ಮುಂದೆ ಸರಾಗವಾಗಿ ನಿರ್ವಹಿಸುವುದಕ್ಕೆ ಸಾಕ್ಷಿಯಾಗಿವೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ನಾಡಿನ ಮಠ–ಮಾನ್ಯಗಳು ಸಾಮಾಜಿಕ–ಧಾರ್ಮಿಕ ಸೇವೆಗಳನ್ನು ನಿರಂತರವಾಗಿ ಮಾಡುತ್ತಾ ಬಂದಿವೆ. ಸಂಸ್ಕಾರಯುತ ಶಿಕ್ಷಣದ ಮೂಲಕ ವಿದ್ಯಾರ್ಥಿಗಳ ಬದುಕನ್ನು ಹಸನುಗೊಳಿಸಿದ ಸಾಧನೆಯಲ್ಲಿ ಮಠಗಳ ಕೊಡುಗೆ ಅಪಾರ. 500 ವರ್ಷಗಳ ಇತಿಹಾಸವಿರುವ ಮಠವಾಗಿದ್ದರೂ ನಿತ್ಯ ನೂತನವಾಗಿ ಹೊಸಮಠ ಉಳಿದುಕೊಂಡು ಬಂದಿದೆ. ಹೊಸಮಠದ ಪರಂಪರೆಯಲ್ಲಿ ಶ್ರೀ ಸಂಗನ ಬಸವಲಿಂಗ ಸ್ವಾಮಿಗಳವರಿಂದ ಪ್ರಾರಂಭವಾಗಿ 21ನೇ ಗುರುಗಳಾದ ಶ್ರೀ ಚಿದಾನಂದ ಸ್ವಾಮಿಗಳವರೆಗೆ ಮಠದ ಸೇವೆಗೆ ತೇಯ್ದ ಗಂಧದಂತೆ, ಉರಿಯುವ ದೀಪದಂತೆ ಅರ್ಪಿಸಿಕೊಂಡು ಮಠವನ್ನು ಬೆಳೆಸಿದ್ದಾರೆ. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿದ್ದಾರೆ. ಅನ್ನದಾಸೋಹ, ಸರಳ ವಿವಾಹ ಮುಂತಾದ ಸಾಮಾಜಿಕ ಸೇವೆಗಳನ್ನು ಮಾಡುತ್ತ ಬರುತ್ತಿದ್ದಾರೆ. ಎಂದಿಗೂ ಭಾಷಣಕ್ಕೆ ಮುಂದೆ ಬರುವವರಲ್ಲ. ಏಕೆಂದರೆ ಕಾಯಕ ಮಾಡಬೇಕು ಎಂಬುದೇ ಅವರ ಧ್ಯೇಯ. ಹೀಗಾಗಿ ಕೆಲಸ ಮಾಡಬೇಕು, ಕೆಲಸ ಮಾಡುವವರಿಗೆ ಪ್ರೋತ್ಸಾಹ ನೀಡಬೇಕು ಎಂಬ ಭಾವನೆ ಅವರದು ಎಂದು ಹೇಳಿದರು.

ಇಲಕಲ್, ಕನಕಪುರ, ವಾಟಾಳು ಮಠದ ಶ್ರೀಗಳು, ಕೇಂದ್ರದ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ, ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಹೆಚ್.ಎಂ. ಗಣೇಶಪ್ರಸಾದ್, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಹಿನಕಲ್ ಬಸವರಾಜು, ಶ್ರೀ ಎಂ. ಪ್ರದೀಪ್‌ಕುಮಾರ್‌ರವರುಗಳು ಉಪಸ್ಥಿತರಿದ್ದರು. ಪ್ರೊ. ಎಸ್. ಶಿವರಾಜಪ್ಪ ಸ್ವಾಗತಿಸಿದರು. ಶ್ರೀ ಆನಂದಕುಮಾರ್ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಚೂಡಾಮಣಿ ವಚನಗಾಯನ ಪ್ರಸ್ತುತಪಡಿಸಿದರು. ಡಾ. ಜಿ. ಪ್ರಸಾದಮೂರ್ತಿ ವಂದಿಸಿದರು. ಶ್ರೀ ಸಿ.ಎನ್. ಸಂತೋಷ್ ಪಟೇಲ್ ಕಾರ್ಯಕ್ರಮ ನಿರೂಪಿಸಿದರು.

**ಜಗತ್ತಿಗೆ ಪ್ರಜಾಪ್ರಭುತ್ವ ಪರಿಚಯಿಸಿದ್ದು ಬಸವಣ್ಣನವರು**

ಜಗತ್ತಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪರಿಚಯಿಸಿದ್ದು ಬಸವಣ್ಣನವರು ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 6ರಂದು ಬೆಂಗಳೂರು ಬಸವೇಶ್ವರ ನಗರದಲ್ಲಿ ಶ್ರೀ ಬಸವೇಶ್ವರರ ಪುತ್ಥಳಿಯ ಅನಾವರಣದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. 12ನೇ ಶತಮಾನದ ಬಸವಾದಿ ಶರಣರು ಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದ್ದರು. ಆ ಅನುಭವ ಮಂಟಪವೇ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾದರಿಯಾಗಿದೆ. ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಳ್ಳುವ ಮನಸ್ಸು ಮಾಡಿದರೆ ಜೀವನ ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಜ್ಞಾನ, ಭಕ್ತಿ ಮತ್ತು ಕರ್ಮಗಳ ಸಂಗಮವಾಗಿರುವ ಬಸವೇಶ್ವರರ ಪುತ್ಥಳಿ ಪ್ರತಿಷ್ಠಾಪನೆಯು ಮುಂದಿನ ಯುವಜನತೆಗೆ ಆದರ್ಶವಾಗಿದೆ. ಅದನ್ನು ಅನುಕರಣೆ ಮಾಡಿದರೆ ಸಮಸಮಾಜದೊಂದಿಗೆ ಜ್ಞಾನದ ಸಮಾಜ ನಿರ್ಮಾಣ ಸಾಧ್ಯ ಎಂದರು.

ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ನಾಡಿನ ಸಾಂಸ್ಕೃತಿಕ, ಸಾಮಾಜಿಕ ನಾಯಕರಾದ ಬಸವಣ್ಣನವರನ್ನು ಒಂದೇ ಸಮಾಜಕ್ಕೆ ಸೀಮಿತ ಮಾಡಬಾರದು. ಅವರು ಸರ್ವ ಸಮುದಾಯದ ನಾಯಕ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕಾಯಕಯೋಗಿ ಬಸವೇಶ್ವರರು ಪ್ರಜಾಪ್ರಭುತ್ವದ ಮೌಲ್ಯವನ್ನು ತಿಳಿಸುವ ಮೂಲಕ ಸಮ ಸಮಾಜದ ನಿರ್ಮಾಣ ಮಾಡಿದರು. ಕಾಯಕ ಮಹತ್ವ ಮತ್ತು ಜ್ಞಾನ ಬೆಳಕನ್ನು ವಿಶ್ವಕ್ಕೆ ಚೆಲ್ಲುವ ಮೂಲಕ ಸಮಾಜಕ್ಕೆ ನಿರಂತರ ಸ್ಫೂರ್ತಿಯಾಗಿದ್ದಾರೆ ಎಂದು ಹೇಳಿದರು.

ಮಾತೆ ಗಂಗಾದೇವಿಯವರು, ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆ, ಸಚಿವರಾದ ಶ್ರೀ ಎಂ.ಬಿ. ಪಾಟೀಲ್, ಶ್ರೀ ಈಶ್ವರ ಬಿ. ಖಂಡ್ರೆ, ಮಾಜಿ ಸಚಿವರು ಹಾಗೂ ಶಾಸಕರುಗಳಾದ ಶ್ರೀ ಎಸ್. ಸುರೇಶ್‌ಕುಮಾರ್, ಶ್ರೀ ಕೆ. ಗೋಪಾಲಯ್ಯ, ಶಾಸಕರಾದ ಶ್ರೀ ಪುಟ್ಟಣ್ಣ, ಮಾಜಿ ಶಾಸಕರಾದ ಶ್ರೀ ಎಚ್.ಎಂ.

ರೇವಣ್ಣ, ಬಿಬಿಎಂಪಿ ಮಾಜಿ ಮೇಯರ್ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್, ಮಾಜಿ ಸದಸ್ಯರಾದ ಶ್ರೀ ಜಿ. ಕೃಷ್ಣಮೂರ್ತಿ ಹಾಗೂ ಡಾ. ಸಿ. ಸೋಮಶೇಖರ್ ಮೊದಲಾದವರು ಉಪಸ್ಥಿತರಿದ್ದರು.

**ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದ ರಾಜೇಂದ್ರ ಶ್ರೀಗಳು**

ಸ್ವಾತಂತ್ರ್ಯ ಪೂರ್ವದಲ್ಲೇ ರಾಜೇಂದ್ರ ಶ್ರೀಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರು ಎಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸೆಪ್ಟೆಂಬರ್ 13ರಂದು ವರುಣ ಬಳಿಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ನಗರದಲ್ಲಿ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹನಿರ್ಮಾಣ ಸಹಕಾರ ಸಂಘದಿಂದ ನೂತನವಾಗಿ ನಿರ್ಮಿಸಲಾದ ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ ಮತ್ತು ಸಂಘದ ಕಛೇರಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಇಂದು ರಾಜ್ಯ, ದೇಶ ಮತ್ತು ವಿದೇಶಗಳಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಸ್ಥಾಪನೆ ಆಗಿದ್ದರೆ ಅದಕ್ಕೆ ರಾಜೇಂದ್ರ ಶ್ರೀಗಳು ಹಾಕಿಕೊಟ್ಟ ಅಡಿಪಾಯ ಕಾರಣವಾಗಿದೆ. ಶಿಕ್ಷಣದಿಂದ ಸ್ವಾಭಿಮಾನ, ಜವಾಬ್ದಾರಿ ಮತ್ತು ಸಮಾಜದಲ್ಲಿ ಎಲ್ಲರೂ ಸಮಾನವಾಗಿ ಬದುಕಲು ಸಾಧ್ಯವಾಗುತ್ತದೆ. ನಮ್ಮ ಸಮಾಜ ಜಾತಿ ವ್ಯವಸ್ಥೆಯಿಂದ ಕೂಡಿದೆ. ಬಸವಣ್ಣನವರ ಕಾಲಕ್ಕಿಂತಲೂ ಹಿಂದೆ ಶೂದ್ರ ಜನಾಂಗದವರು ಮತ್ತು ಮಹಿಳೆಯರು ಎಲ್ಲ ಬಗೆಯ ಸಮಾನತೆಯಿಂದ ವಂಚಿತರಾಗಿದ್ದರು. ಮಹಿಳೆಯರಿಗೆ ಮಾತನಾಡುವ, ಓದುವ, ಬರೆಯುವ ಹಕ್ಕು ಸಿಕ್ಕಿದ್ದು ಬಸವಣ್ಣನವರ ಕಾಲದಲ್ಲಿ ಎನ್ನುವುದನ್ನು ಮರೆಯಬಾರದು. ನೂತನ ಕಟ್ಟಡಕ್ಕೆ ಅನುಭವ ಮಟಪ ಎಂದು ಹೆಸರಿಟ್ಟಿರುವುದು ಸೂಕ್ತವಾಗಿದೆ. ಬಸವಾದಿ ಶರಣರು ಜಾತಿ, ವರ್ಗಗಳ ನಿರ್ಮೂಲನೆಗೆ ಪಣ ತೊಟ್ಟು, ಎಲ್ಲರೂ ಮನುಷ್ಯರಾಗಿ ಬಾಳಬೇಕೆಂದು ಬಯಸಿದ್ದರು ಎಂದು ಹೇಳಿದರು.

ಸಚಿವರುಗಳಾದ ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಕೆ. ವೆಂಕಟೇಶ್, ಸಂಘದ ಅಧ್ಯಕ್ಷರಾದ ಶ್ರೀ ಎಲ್. ರೇವಣ್ಣಸಿದ್ಧಯ್ಯ,ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರನಾಥ್, ಸಂಘದ ಪದಾಧಿಕಾರಿಗಳು, ಸದಸ್ಯರುಗಳು ಉಪಸ್ಥಿತರಿದ್ದರು. ಡಾ. ಸೌಮ್ಯ ಪ್ರಾರ್ಥಿಸಿದರು. ಶ್ರೀ ಎ.ಎಸ್. ಚನ್ನಬಸಪ್ಪ ಸ್ವಾಗತಿಸಿದರು. ಪ್ರೊ. ಸುಬ್ಬಪ್ಪ ವಂದಿಸಿದರು. ಶ್ರೀಮತಿ ಸಿ. ವಾಣಿ ಕಾರ್ಯಕ್ರಮ ನಿರೂಪಿಸಿದರು.

**ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರದ ಬಗ್ಗೆ ಮೇರಿಲ್ಯಾಂಡ್ ಗವರ್ನರ್ ಪ್ರಶಂಸೆ**

ಅಮೆರಿಕದ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಮೇರಿಲ್ಯಾಂಡ್‌ನ ಲೆಫ್ಟಿನೆಂಟ್ ಗವರ್ನರ್‌ರಾದ ಶ್ರೀಮತಿ ಅರುಣಾ ಮಿಲ್ಲರ್‌ರವರು ಸೆಪ್ಟೆಂಬರ್ 21ರಂದು ಆಗಮಿಸಿ ಪರಮಪೂಜ್ಯ ಜಗದ್ಗುರುಗಳವರನ್ನು ಭೇಟಿ ಮಾಡಿದರು. ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರದ

ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ಮೇರಿಲ್ಯಾಂಡ್ ರಾಜ್ಯಪಾಲರ ಪ್ರಶಂಸನಾ ಪತ್ರವನ್ನು ನೀಡಿದರು.

ಶ್ರೀಮತಿ ಅರುಣಾ ಮಿಲ್ಲರ್‌ರವರು ಸಂಸ್ಥೆಯಿಂದ ಭಾರತ, ಅಮೆರಿಕ ಮತ್ತು ಇತರ ದೇಶಗಳಲ್ಲಿ ಕೈಗೊಂಡಿರುವ ಸಾಮಾಜಿಕ ಕಾರ್ಯಗಳನ್ನು ಶ್ಲಾಘಿಸಿದರು. ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರವು ಅಮೆರಿಕದಲ್ಲಿನ ಅನಿವಾಸಿ ಭಾರತೀಯರಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದಲ್ಲಿನ ಜೆಎಸ್‌ಎಸ್ ಸಂಸ್ಥೆಗಳಿಗೆ ಭೇಟಿ ನೀಡಲು ಬಹಳ ಉತ್ಸುಕರಾಗಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಡೇವಿಡ್ ಮಿಲ್ಲರ್, ಶ್ರೀ ಸೆಲ್ವ ಜಯರಾಮನ್, ಶ್ರೀ ಸುಭಾಷ್ ಮಲಗನ್, ಡಾ. ಬಿ. ಸುರೇಶ್, ಶ್ರೀ ಸಂಜಾತ್ ಸೂಲಕುಂಟೆ, ಶ್ರೀ ರಾಜೀವ್ ಮಹಾಜನ್, ಶ್ರೀ ಆರ್. ಮಹೇಶ್ ಮೊದಲಾದವರು ಉಪಸ್ಥಿತರಿದ್ದರು.

**ಕಾವೇರಿ ಆರತಿ ಉತ್ತರ–ದಕ್ಷಿಣ ಭಾರತದ ಪರಂಪರೆಯ ಸಮ್ಮಿಲನ**

ಉತ್ತರ ಮತ್ತು ದಕ್ಷಿಣ ಭಾರತದ ಪರಂಪರೆಯ ಸಮ್ಮಿಲನವಾಗಿರುವ ಕಾವೇರಿ ಆರತಿಯನ್ನು ಮೊದಲ ಬಾರಿಗೆ ಬಹಳ ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಸೆಪ್ಟೆಂಬರ್ 28ರಂದು ಕೃಷ್ಣರಾಜಸಾಗರದಲ್ಲಿ ಆಯೋಜಿಸಿದ್ದ ಕಾವೇರಿ ಆರತಿಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕಾವೇರಿ ಆರತಿ ಎಲ್ಲರನ್ನೂ ಒಳಗೊಂಡಿದೆ ಮತ್ತು ಪವಿತ್ರ ಭಾವನೆ ಮೂಡಿಸಿದೆ. ಜನರ ಮನಸ್ಸಿಗೆ ಮುದ ನೀಡುತ್ತಿದೆ. ಇದು ಉಪಮುಖ್ಯಮಂತ್ರಿಗಳ ಕನಸಿನ ಯೋಜನೆ. ಬರದ ನಾಡನ್ನು ಹಸಿರು ಮಾಡಿದ ಕೆಆರ್‌ಎಸ್‌ನ ಪವಿತ್ರ ಸ್ಥಳದಲ್ಲಿ ಕಾವೇರಿ ಆರತಿ ಮಾಡಲಾಗು ತ್ತಿದೆ. ಈ ಸಂದರ್ಭದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರನ್ನು ಸ್ಮರಿಸಬೇಕು. ಪ್ರಕೃತಿಯನ್ನು ಪೂಜಿಸುವುದು ಭಾರತೀಯ ಸಂಸ್ಕೃತಿಯ ಭಾಗವಾಗಿದೆ. ಹರಪ್ಪ ಮತ್ತು ಮೆಹೆಂಜೋದಾರೋ ಕಾಲದಿಂದಲೂ ಇದನ್ನು ಕಾಣಬಹುದು. ಆಧುನಿಕ ಯುಗದಲ್ಲೂ ಇದು ಮುಂದುವರಿದಿದೆ. ಕಾವೇರಿ ಆರತಿ ಮಾಡುವಾಗ ನದಿಯನ್ನು ಅಶುಚಿಗೊಳಿಸುವು ದಿಲ್ಲ ಎಂಬ ಸಂಕಲ್ಪ ಮಾಡಬೇಕು. ನದಿಯ ಪಾವಿತ್ರ್ಯತೆ ಕಾಪಾಡಬೇಕು. ಪ್ರಕೃತಿಯನ್ನು ನಾಶಮಾಡಬಾರದು ಎಂಬ ಪವಿತ್ರ ಭಾವನೆ ಎಲ್ಲರಲ್ಲೂ ಬರಲಿ ಎಂದು ಹೇಳಿದರು

ವಾಟಾಳು ಶ್ರೀಗಳು, ಶಾಸಕರುಗಳಾದ ಶ್ರೀ ಎ.ಬಿ. ರಮೇಶಬಾಬು ಬಂಡಿಸಿದ್ದೇಗೌಡ, ಶ್ರೀ ಪಿ. ರವಿಕುಮಾರ್ ಗಣಿಗ, ಶ್ರೀ ದಿನೇಶ್ ಗೂಳಿಗೌಡರವರುಗಳು, ಮಾಜಿ ಶಾಸಕರಾದ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿಗಳಾದ ಡಾ. ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪಂಚಾಯಿತಿ ಸಿಇಓ ಶ್ರೀಮತಿ ಕೆ.ಆರ್. ನಂದಿನಿ ಹಾಗೂ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮಹೇಶ್ ಮೊದಲಾದವರು ಉಪಸ್ಥಿತರಿದ್ದರು.

□

# ಪ್ರಸಾದ



## ಕೃತಿ–ಸ್ವೀಕೃತಿ

**ವಚನ ಧೀವರಿ (ಆಧುನಿಕ ವಚನಗಳು)**
ಪುಷ್ಪ ಬಸವರಾಜ ಬಣಕಾರ
ಪ್ರ: ಅನುಭವ ಮಂಟಪ ಪ್ರಕಾಶನ
ರಾಜಾಜಿನಗರ, ಬೆಂಗಳೂರು
ಪು : 131, ಬೆಲೆ : 120/–

**ನೂರೊಸಗೆಗಳು (ಸುನೀತ ಗುಚ್ಛಗಳು)**
ಪುಷ್ಪ ಬಸವರಾಜ ಬಣಕಾರ
ಪ್ರ: ಅನುಭವ ಮಂಟಪ ಪ್ರಕಾಶನ
ರಾಜಾಜಿನಗರ, ಬೆಂಗಳೂರು
ಪು : 109, ಬೆಲೆ : 100/–

**ಒಳದನಿ (ಕವನಗಳು)**
ಪುಷ್ಪ ಬಸವರಾಜ ಬಣಕಾರ
ಪ್ರ: ಅನುಭವ ಮಂಟಪ ಪ್ರಕಾಶನ
ರಾಜಾಜಿನಗರ, ಬೆಂಗಳೂರು
ಪು : 80, ಬೆಲೆ : 80/–

**ಅನುವರ (ಕಾವ್ಯ)**
ಪುಷ್ಪ ಬಸವರಾಜ ಬಣಕಾರ
ಪ್ರ: ಶುಭದ ಪ್ರಕಾಶನ
ಜರಗನಹಳ್ಳಿ, ಜೆ.ಪಿ.ನಗರ ಅಂಚೆ
ಬೆಂಗಳೂರು
ಪು : 80, ಬೆಲೆ : 100/–

**ವಚನಾಭಿಷೇಕ**
ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಬಾಲ್ಕಿ
ಬೀದರ ಜಿಲ್ಲೆ
ಪು : 64, ಬೆಲೆ : 20/–

**ಶರಣ ವಚನ ಬೇವು ಸವಿದಂತೆ**
ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಬಾಲ್ಕಿ
ಬೀದರ ಜಿಲ್ಲೆ
ಪು : 76, ಬೆಲೆ : 20/–

**ಮಾತೆಂಬುದು ಜ್ಯೋತಿರ್ಲಿಂಗ**
ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಬಾಲ್ಕಿ
ಬೀದರ ಜಿಲ್ಲೆ
ಪು : 64, ಬೆಲೆ : 20/–

**ಗೀತಾಜ್ಞಾನಗಂಗೆ**
ಕೆ. ಮಾಣಿಕ್ಯಪ್ರಭು
ಪ್ರ: ಮಂದಾರ ಪ್ರಕಾಶನ
ನೇತಾಜಿ ರಸ್ತೆ, ತ್ಯಾಗರಾಜನಗರ
ಬೆಂಗಳೂರು

**ಅಪೂರ್ವ ಅಮೆರಿಕ**
ಮಲ್ಲಿಕಾರ್ಜುನ ಪಾಟೀಲ
ಪ್ರ: ಸಪ್ನ ಬುಕ್‌ಹೌಸ್
ಗಾಂಧಿನಗರ, ಬೆಂಗಳೂರು
ಪು : 176, ಬೆಲೆ : 180/–

**ಲಿಂಗಾಯತ ಮಹಿಮರು (ಸಂಪುಟ–2)**
ಮಲ್ಲಿಕಾರ್ಜುನ ಪಾಟೀಲ
ಪ್ರ: ಡಾ. ನಂದಾ ಪಾಟೀಲ ಸಂಗೀತ
ಅಕಾಡೆಮಿ, ಸಪ್ತಾಪೂರ, ಧಾರವಾಡ
ಪು : 378, ಬೆಲೆ : 500/–

**ಲಿಂಗಾಯತ ಮಹಿಮರು (ಸಂಪುಟ–3)**
ಮಲ್ಲಿಕಾರ್ಜುನ ಪಾಟೀಲ
ಪ್ರ: ಡಾ. ನಂದಾ ಪಾಟೀಲ ಸಂಗೀತ
ಅಕಾಡೆಮಿ, ಸಪ್ತಾಪೂರ, ಧಾರವಾಡ
ಪು : 246, ಬೆಲೆ : 300/–

**ದಿನದ ಪ್ರಾರ್ಥನೆ**
ಸವಿತಾ ನಾಗಭೂಷಣ
ಪ್ರ: ಸವಿತಾ ನಾಗಭೂಷಣ
ವಿನೋಬನಗರ, ಶಿವಮೊಗ್ಗ
ಪು : 88, ಬೆಲೆ : 60/–

**ಯುದ್ಧ ವಿರೋಧಿ ಶಾಂತಿ ಗೀತೆಗಳು**
ಸವಿತಾ ನಾಗಭೂಷಣ
ಪ್ರ: ಲೋಹಿಯಾ ಪ್ರಕಾಶನ
ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ
ಪು : 40, ಬೆಲೆ : 30/–

## ಲೇಖಕರ ವಿಳಾಸ

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ ಬಿ.ಹೆಚ್. ರಸ್ತೆ
ತುಮಕೂರು 572 102
ಮೊ : 98809 96196

**ಡಾ. ಶಶಿಕಾಂತ ಪಟ್ಟಣ**
ಸಿ–103, ಸಂಗ್ರಿಯ ಅಪಾರ್ಟ್‌ಮೆಂಟ್
ಮೆಗಾಪಾಲಿಸಿ, 3ನೇ ಹಂತ
ಹಿಂಜೆವಾಡಿ
ಪುಣೆ 411 057
ಮೊ : 9552002338

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ನಿವೃತ್ತ ಪ್ರಾಧ್ಯಾಪಕರು
ಎಚ್.ಐ.ಜಿ. 32, ಗ್ರೂಪ್–1
ಕೆ.ಎಚ್.ಬಿ. ಕಾಲೋನಿ
ಹೂಟಗಳ್ಳಿ
ಮೈಸೂರು 570018
ಮೊ : 98453 09081

**ಹಿಂಬದಿ ಪುಟದ ಚಿತ್ರ**

ನವದೆಹಲಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಶ್ರೀ ಸಿ.ಪಿ. ರಾಧಾಕೃಷ್ಣನ್‌ರವರನ್ನು ಭೇಟಿ ಮಾಡಿ ಗೌರವಿಸಿ ಅಭಿನಂದಿಸಿದರು. (28 ಸೆಪ್ಟೆಂಬರ್ 2025)



ಭಾಲ್ಕಿ ಶ್ರೀ ಹಿರೇಮಠ ಸಂಸ್ಥಾನದ ಶ್ರೀ ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಗೌ.ನ್ಯಾ. ಶ್ರೀ ಶಿವರಾಜ್ ಪಾಟೀಲ್, ಭಾಲ್ಕಿ ಶ್ರೀಗಳು, ಶ್ರೀ ಈಶ್ವರ್ ಖಂಡ್ರೆ, ಶ್ರೀ ಪ್ರಕಾಶ್ ಖಂಡ್ರೆ ಹಾಗೂ ಶ್ರೀ ಸಾಗರ್ ಖಂಡ್ರೆಯವರುಗಳಿದ್ದಾರೆ (25 ಆಗಸ್ಟ್ 2025)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವ ಸಂದರ್ಭದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ ನಿವೃತ್ತರಾದವರಿಗೆ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸಿ ಆಶೀರ್ವದಿಸಿದರು (29 ಆಗಸ್ಟ್ 2025)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರಸಾದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿಯವರಿದ್ದಾರೆ (29 ಆಗಸ್ಟ್ 2025)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪದಲ್ಲಿ ಶ್ರೀಮತಿ ಜಿ. ಸೀಮಂತಿನಿಯವರು ಮಾತನಾಡುತ್ತಿರುವುದು. ಡಾ. ಕೆ. ಅನಂತರಾಮು, ಡಾ. ಬಿ.ವಿ. ವಸಂತಕುಮಾರ್, ಶ್ರೀಮತಿ ಎಲ್. ಮೇಘಲ, ಕುಣಿಗಲ್ ಹಿರೇಮಠ, ಹುಲಿಯೂರುದುರ್ಗ ಮತ್ತು ಕುದೇರುಮಠದ ಶ್ರೀಗಳಿದ್ದಾರೆ (23 ಆಗಸ್ಟ್ 2025)




ಮೈಸೂರು ಸರಸ್ವತಿಪುರಂ ನವಜ್ಯೋತಿ ಸಭಾಂಗಣದಲ್ಲಿ ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀಯವರಿಗೆ ಮುದ್ದುರಾಮ ಪ್ರಶಸ್ತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರದಾನ ಮಾಡಲಾಯಿತು. ಶ್ರೀ ಆರ್.ಎ. ಚೇತನರಾಮ್, ಶ್ರೀ ಹಿರೇಮಗಳೂರು ಕಣ್ಣನ್, ಪ್ರೊ. ನೀಲಗಿರಿ ತಳವಾರ್, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ನ. ರವಿಕುಮಾರ್, ಶ್ರೀ ಕೆ.ಸಿ. ಶಿವಪ್ಪ ಹಾಗೂ ವಿದ್ವಾನ್ ಹೆಚ್.ವಿ. ನಾಗರಾಜರಾವ್‌ರವರುಗಳಿದ್ದಾರೆ (2 ಸೆಪ್ಟೆಂಬರ್ 2025)



ಬೆಂಗಳೂರಿನ ಬಸವೇಶ್ವರ ನಗರದಲ್ಲಿ ಶ್ರೀ ಬಸವೇಶ್ವರರ ಪುತ್ಥಳಿಯನ್ನು ಸುತ್ತೂರು ಮತ್ತು ಆದಿಚುಂಚನಗಿರಿ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಅನಾವರಣಗೊಳಿಸಲಾಯಿತು. ಕು. ಶೋಭಾ ಕರಂದ್ಲಾಜೆ, ಶ್ರೀಮತಿ ಗಂಗಾಬಿಕೆ ಮಲ್ಲಿಕಾರ್ಜುನ್, ಮಾತೆ ಗಂಗಾದೇವಿ, ಶ್ರೀ ಎಸ್. ಸುರೇಶ್‌ಕುಮಾರ್, ಶ್ರೀ ಬಿ.ಎಸ್. ಯಡಿಯೂರಪ್ಪ, ಡಾ. ಸಿ. ಸೋಮಶೇಖರ್, ಶ್ರೀ ಎನ್. ಗೋಪಾಲಯ್ಯ, ಶ್ರೀ ಪುಟ್ಟರಾಜು, ಮೊದಲಾದವರಿದ್ದಾರೆ (6 ಸೆಪ್ಟೆಂಬರ್ 2025)



ಮೈಸೂರು ಶ್ರೀ ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳ ಅಮೃತ ಮಹೋತ್ಸವ ಹಾಗೂ ನೂತನ ಶ್ರೀಗಳ ನಿರಂಜನ ಪಟ್ಟಾಧಿಕಾರ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಪ್ರೊ. ಎಸ್. ಶಿವರಾಜಪ್ಪ, ಶ್ರೀ ಜಿ.ಟಿ. ದೇವೇಗೌಡ, ಬೆಟ್ಟದಪುರ, ವಾಟಾಳು ಮಠದ ಶ್ರೀಗಳು, ಶ್ರೀ ವಿ. ಸೋಮಣ್ಣ, ಹೊಸಮಠದ ನೂತನ ಶ್ರೀಗಳು, ಶ್ರೀ ಹೆಚ್. ಎಂ. ಗಣೇಶಪ್ರಸಾದ್, ಶ್ರೀ ಟಿ.ಎಸ್. ಶ್ರೀವತ್ಸ ಹಾಗೂ ಶ್ರೀ ಹೆಚ್.ವಿ. ಬಸವರಾಜುರವರಿದ್ದಾರೆ (4 ಸೆಪ್ಟೆಂಬರ್ 2025)




ನೆಲಮಂಗಲದ ಪವಾಡ ಶ್ರೀ ಬಸವಣ್ಣದೇವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳವರ ನಿರಂಜನ ಪಟ್ಟಾಧಿಕಾರ ಸುವರ್ಣ ಮಹೋತ್ಸವವನ್ನು ಸುತ್ತೂರು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಕನಕಪುರ, ಭಾತಂಬ್ರಾ, ನೆಲಮಂಗಲ ಮಠಗಳ ಶ್ರೀಗಳು, ಶ್ರೀ ವಿ. ಸೋಮಣ್ಣ, ಡಾ. ಕೆ. ಸುಧಾಕರ್ ಮೊದಲಾದವರಿದ್ದಾರೆ (5 ಸೆಪ್ಟೆಂಬರ್ 2025)



ಬೆಂಗಳೂರಿನ ವಿಶ್ವ ಒಕ್ಕಲಿಗರ ಮಠದ ಜಗದ್ಗುರು ಶ್ರೀ ಕುಮಾರ ಚಂದ್ರಶೇಖರನಾಥ ಮಹಾಸ್ವಾಮಿಗಳವರ ಪುಣ್ಯಾರಾಧನೆಯ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಭೇಟಿ ನೀಡಿ ಅಶೀರ್ವದಿಸಿದರು. ಡಾ. ಶ್ರೀ ನಿಶ್ಚಲಾನಂದನಾಥ ಮಹಾಸ್ವಾಮಿಗಳು ಹಾಗೂ ಇತರರಿದ್ದಾರೆ (30 ಆಗಸ್ಟ್ 2025)



ಭಾಲ್ಕಿಗೆ ಪರಮಪೂಜ್ಯ ಜಗದ್ಗುರುಗಳವರು ಭೇಟಿ ನೀಡಿದ್ದ ಸಂದರ್ಭದಲ್ಲಿ ಶತಾಯುಷಿಗಳಾದ ಶ್ರೀ ಭೀಮಣ್ಣ ಖಂಡ್ರೆಯವರ ಆರೋಗ್ಯ ವಿಚಾರಿಸಿ ಆಶೀರ್ವದಿಸಿದರು. ಚಿನ್ಮಯಗಿರಿ ಶ್ರೀ ಮಹಾಂತೇಶ್ವರ ಮಠದ ಶ್ರೀಗಳು, ಸಂಸದರಾದ ಶ್ರೀ ಸಾಗರ್ ಖಂಡ್ರೆ, ಭಾಲ್ಕಿ ಹಿರೇಮಠದ ಶ್ರೀಗಳು, ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ ಮತ್ತು ಕುಟುಂಬವರ್ಗದವರಿದ್ದಾರೆ (25 ಆಗಸ್ಟ್ 2025)



ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಹಾಗೂ ಐದನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಶ್ರೀ ಕೆ.ವಿ. ಪ್ರಭಾಕರ್‌ರವರು ಉದ್ಘಾಟಿಸಿದರು. ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಸಿ.ಆರ್. ದತ್ತಾತ್ರೇಯ, ಶ್ರೀ ಹೆಚ್.ವಿ. ರಾಜೀವ್, ಶ್ರೀ ಕೆ. ದೀಪಕ್, ಶ್ರೀ ಎಂ. ಸುಬ್ರಹ್ಮಣ್ಯ, ಶ್ರೀ ಶಿವಾನಂದ ತಗಡೂರು, ಡಾ. ಎಸ್. ನಾಗಣ್ಣ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಎಸ್.ಟಿ. ರವಿಕುಮಾರ್, ಪತ್ರಿಕಾ ವಿತರಕರ ಸಂಘದ ಪದಾಧಿಕಾರಿಗಳು ಮೊದಲಾದವರುಗಳಿದ್ದಾರೆ (28 ಆಗಸ್ಟ್ 2025)



ಮುರ್ಮುರವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಗೌರವಿಸಿ ಅಭಿನಂದಿಸಿದರು. ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು, ಡಾ. ಬಿ. ಸುರೇಶ್ ಮೊದಲಾದವರಿದ್ದಾರೆ (11 ಸೆಪ್ಟೆಂಬರ್ 2025)



ನವದೆಹಲಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರು ಗೌರವಾನ್ವಿತ ಉಪರಾಷ್ಟ್ರಪತಿಗಳಾದ ಶ್ರೀ ಸಿ.ಪಿ. ರಾಧಾಕೃಷ್ಣನ್‌ರವರನ್ನು ಭೇಟಿ ಮಾಡಿ ಗೌರವಿಸಿ ಅಭಿನಂದಿಸಿದರು. ಆಲಮಟ್ಟಿ ಶ್ರೀಗಳು, ಡಾ. ಸಿ.ಜಿ. ಬೆಟಸೂರಮಠ, ಶ್ರೀ ರಾಜಣ್ಣ, ಡಾ. ಬಿ. ಸುರೇಶ್ ಹಾಗೂ ಶ್ರೀ ಎಸ್.ಪಿ. ಮಂಜುನಾಥ್‌ರವ–ರಿದ್ದಾರೆ (28 ಸೆಪ್ಟೆಂಬರ್ 2025)




ವರುಣ ಬಳಿಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ನಗರದಲ್ಲಿ ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹನಿರ್ಮಾಣ ಸಹಕಾರ ಸಂಘದಿಂದ ನಿರ್ಮಿಸಲಾದ ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಶ್ರೀ ಎಲ್. ರೇವಣಸಿದ್ಧಯ್ಯ, ಶ್ರೀ ಕೆ. ವೆಂಕಟೇಶ್ ಮೊದಲಾದವರಿದ್ದಾರೆ (13 ಸೆಪ್ಟೆಂಬರ್ 2025)



ಕೃಷ್ಣರಾಜಸಾಗರದಲ್ಲಿ ಆಯೋಜಿಸಿದ್ದ ಕಾವೇರಿ ಆರತಿ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಶ್ರೀ ಪಿ. ರವಿಕುಮಾರ್ ಗಣಿಗ, ಶ್ರೀ ಎಚ್.ಎ. ವೆಂಕಟೇಶ್, ಶ್ರೀಮತಿ ಕೆ.ಆರ್. ನಂದಿನಿ, ವಾಟಾಳು ಶ್ರೀಗಳು, ಡಾ. ಕುಮಾರ್, ಶ್ರೀ ಮಹೇಶ್, ಶ್ರೀ ದಿನೇಶ್ ಗೂಳಿಗೌಡ ಮೊದಲಾದವರಿದ್ದಾರೆ (29 ಸೆಪ್ಟೆಂಬರ್ 2025)



ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಕರಿದುಗ್ಗನಹಳ್ಳಿಯ ಶ್ರೀ ದೊಡ್ಡಮ್ಮದೇವಿ ಸ್ಥಿರಬಿಂಬ ಪ್ರತಿಷ್ಠಾಪನ ಕುಂಭಾಭಿಷೇಕ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಎಲೆರಾಂಪುರ, ಸಿದ್ಧರಬೆಟ್ಟ, ಚಿಕ್ಕತೊಟ್ಟಲುಕೆರೆ, ಎಂ.ಎಲ್. ಹುಂಡಿ ಮಠಗಳ ಶ್ರೀಗಳು, ಶ್ರೀ ಹೆಚ್.ಪಿ. ನೀಲೇಶ್ ಮತ್ತು ಶ್ರೀ ಶಶಿಧರ್ ಕುಟುಂಬವರ್ಗದವರಿದ್ದಾರೆ (29 ಆಗಸ್ಟ್ 2025)



ಗದಗದ ಶ್ರೀ ಹಾಲಕೆರೆ ಮಠದ ಶ್ರೀ ಅನ್ನದಾನೇಶ್ವರ ಪದವಿಪೂರ್ವ ಮಹಾವಿದ್ಯಾಲಯ ಹಾಗೂ ಆನಂದಾಶ್ರಮದ ನೂತನ ಕಟ್ಟಡಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಹೊಸಪೇಟೆ–ಹಾಲಕೆರೆ ಜಗದ್ಗುರುಗಳು, ಶ್ರೀ ಮಧು ಬಂಗಾರಪ್ಪ, ಶ್ರೀ ಗೋವಿಂದ ಕಾರಜೋಳ, ಶ್ರೀ ಜಿ.ಎಸ್. ಪಾಟೀಲ್ ಮೊದಲಾದವರಿದ್ದಾರೆ (12 ಸೆಪ್ಟೆಂಬರ್ 2025)



ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಲೆಫ್ಟಿನೆಂಟ್ ಗವರ್ನರ್‌ರಾದ ಶ್ರೀಮತಿ ಅರುಣಾ ಮಿಲ್ಲರ್‌ರವರು ಆಗಮಿಸಿ ಪರಮಪೂಜ್ಯ ಜಗದ್ಗುರುಗಳವರನ್ನು ಭೇಟಿ ಮಾಡಿ ಜೆಎಸ್‌ಎಸ್ ಸ್ಪಿರಿಚ್ಯುಯಲ್ ಮಿಷನ್‌ನ ಸೇವಾಕಾರ್ಯಗಳನ್ನು ಮೆಚ್ಚಿ ಮೇರಿಲ್ಯಾಂಡ್ ರಾಜ್ಯಪಾಲರ ಪ್ರಶಂಸನಾ ಪತ್ರವನ್ನು ನೀಡಿದರು. ಶ್ರೀಮತಿ ಪ್ರತಿಭಾ ಸೆಲ್ವ, ಶ್ರೀ ಸೆಲ್ವ ಜಯರಾಮನ್, ಶ್ರೀ ಡೇವಿಡ್ ಮಿಲ್ಲರ್, ಶ್ರೀ ಸುಭಾಷ್ ಮಲಗನ್, ಶ್ರೀ ಸಂಜಾತ್ ಸೂಲಕುಂಟೆ, ಶ್ರೀ ರಾಜೀವ್ ಮಹಾಜನ್ ಹಾಗೂ ಡಾ. ಬಿ. ಸುರೇಶ್ ಮೊದಲಾದವರಿದ್ದಾರೆ (21 ಸೆಪ್ಟೆಂಬರ್ 2025)



ಅಮೆರಿಕದ ಮೇರಿಲ್ಯಾಂಡ್‌ನ ಜೆಎಸ್‌ಎಸ್ ಆಧ್ಯಾತ್ಮಿಕ ಕೇಂದ್ರಕ್ಕೆ ಲೆಫ್ಟಿನೆಂಟ್ ಗವರ್ನರ್‌ರಾದ ಶ್ರೀಮತಿ ಅರುಣಾ ಮಿಲ್ಲರ್ ಹಾಗೂ ಅವರ ಪತಿ ಶ್ರೀ ಡೇವಿಡ್ ಮಿಲ್ಲರ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಅಭಿನಂದಿಸಿದರು. ಶ್ರೀ ಸೆಲ್ವ ಜಯರಾಮನ್, ಶ್ರೀ ಆರ್. ಮಹೇಶ್ ಮೊದಲಾದವರಿದ್ದಾರೆ (21 ಸೆಪ್ಟೆಂಬರ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 9, September 2025



ISSN 2583-7648
9 772583 764006

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org